ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 29 ಜುಲೈ 17, 2005 ಬೆಲೆ ರೂ. 3.00




ಅಯೋಧ್ಯೆ : ಭಯೋತ್ಪಾದಕರ ಹೀನ ಧಾಳಿಯೂ ಸಂಘ ಪರಿವಾರ ಕಾರುತ್ತಿರುವ ವಿಷವೂ



ಆಹಾರ-ಭೂಮಿ-ಉದ್ಯೋಗ ಆಂದೋಲನಕ್ಕೆ ಸಿಪಿಐ(ಎಂ) ಕರೆ





ತುರ್ತು ಪರಿಸ್ಥಿತಿ : ಪ್ರಜಾಪ್ರಭುತ್ವ ರಕ್ಷಣೆಯಲ್ಲಿ ಸಿಪಿಐ(ಎಂ)ನ ಧೀಮಂತಪಾತ್ರ



ಸಂಘರ್ಷದತ್ತ ಟಯೋಟ ಕಾರ್ಮಿಕರು

ಸಿನಿಮಾ



ಪರಿಣೀತ

- ಡೊನೇಷನ್ ಹಾವಳಿ-ನಿಯಂತ್ರಣ ಹೇಗೆ?



- ದೇವರ ಸ್ವಂತ ನಾಡಿನಲ್ಲಿ ಎಂಥಾ ಭೂತ ನೃತ್ಯ !



ಭಾರತದ ಬಹುದೊಡ್ಡ ರಾಜಸಂಸ್ಥಾನವಾಗಿದ್ದ ಕಾಶ್ಮೀರದಲ್ಲಿ ಮುಸ್ಲಿಂ ಜನಸಂಖ್ಯೆ ಶೇ.77. ಇಷ್ಟಿದ್ದೂ ಅದು ಪಾಕಿಸ್ತಾನದ ತೆಕ್ಕೆಗೆ ಬರುವ ಒಲವು ಸೂಚಿಸಲಿಲ್ಲ. ಬಾರತಕ್ಕೆ ಸೇರಿಕೊಂಡ ಕಾಶ್ಮೀರ ಈ ಎರಡೂ ದೇಶಗಳ ಅಘೋಷಿತ ಯುದ್ಧಕ್ಕೆ ಕಾರಣವಾಯಿತು. ಈ ಆತಂಕದ ಕಿರಿಕಿರಿ ಬೆಳೆದಂತೆ ಕ್ವೇದ್-ಇ-ಅಜಂರ 'ನೆಗಡಿ'ಯ ತೀವ್ರತೆಯೂ ಹೆಚ್ಚುತ್ತಾ ಹೋಯಿತು. ಜಿನ್ನಾ ಇನ್ನಷ್ಟು ವಿಮುಖರಾದರು. ಈ ಬಗ್ಗೆ ಪತ್ರಕರ್ತೆ ಬರ್ಕ್‌ವೈಟ್ ವಿವರಿಸಿದ್ದಾರೆ.



ಪಾಕಿಸ್ತಾನದ ಸೃಷ್ಟಿಕರ್ತ

ಜಿನ್ನಾ: ಬಹಿರಂಗ-ಅಂತರಂಗ

ಈ ಪುಸ್ತಕ ಓದಿ...


ನಾನು ಲೈಫ್ ಪತ್ರಿಕೆಯ ಮುಖಪುಟಕ್ಕಾಗಿ ಜಿನ್ನಾ ಅವರ ಇತ್ತೀಚಿನ ಚಿತ್ರ ತೆಗೆಯಲು ಬಹಳಷ್ಟು ಸಮಯ ಅವರ ಸರ್ಕಾರೀ ಸೌಧದಲ್ಲಿ ಸುತ್ತಾಡುತ್ತಿದ್ದರಿಂದ ನನಗೆ ಈ ವಿಷಯಗಳೆಲ್ಲ ಗೊತ್ತಾಗುತ್ತಿದ್ದವು.

ಆದರೂ ಕ್ವೇದ್-ಇ-ಅಜಾಂನನ್ನು ಜನ ಈಗಲೂ ತಮ್ಮ ಉದ್ಧಾರಕನೆಂದೇ ಆರಾಧಿಸುತ್ತಿದ್ದರು. ತಾನು ಮಾಡಿದ ಹೊಸ ಸೃಷ್ಟಿಯಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಸ್ವತಃ ಈ ಮಹಾನ್ ನಾಯಕನಿಗೇ ಗೊತ್ತಿತ್ತು. ಈತನ ರಾಷ್ಟ್ರವನ್ನು ಜನರು 'ಜಿನ್ನಾ ಕಟ್ಟಿದ ಮನೆ' ಎಂದು ಕರೆಯುತ್ತಿದ್ದರು. ಭಾರತದ ಮುಖ್ಯ ದೇಹದಿಂದ ಈ ದೇಶವನ್ನು ಪ್ರತ್ಯೇಕಿಸಿದಾಗ ವಾಸ್ತವಿಕ ಸ್ಥಿತಿಗತಿಗಳನ್ನು ಒಂದಿಷ್ಟೂ ಗಣನೆಗೆ ತೆಗೆದುಕೊಂಡಿರಲಿಲ್ಲ. ಇದೊಂದು ತೀರ ಅಸಹಜ ವಿಭಜನೆಯಾಗಿತ್ತು. ಜಗತ್ತಿನ ಶೇಕಡಾ 75ರಷ್ಟು ಸೆಣಬನ್ನು ಪಾಕಿಸ್ತಾನ ಬೆಳೆಯುತಿತ್ತು. ಆದರೆ ಅದರ ಸಂಸ್ಕರಣ ಗಿರಣಿಗಳೆಲ್ಲ ಭಾರತದಲ್ಲಿದ್ದವು. ಭಾರತದ 3/1 ರಷ್ಟು ಹತ್ತಿಯನ್ನು ಪಾಕಿಸ್ತಾನ ಬೆಳೆಯುತ್ತಿತ್ತು. ಆದರೆ ಅದರಲಿದ್ದ ಗಿರಣಿಗಳ ಸಂಖ್ಯೆ 1/3 ರಷ್ಟು ಮಾತ್ರ. ಭಾರತಕ್ಕೆ ಬೇಕಾದ ಬಹುಪಾಲು ಚರ್ಮ ಹಾಗೂ ತೊಗಲಿನ ಉತ್ಪನ್ನಗಳನ್ನು ಪಾಕಿಸ್ತಾನ ಉತ್ಪಾದಿಸಿದರೂ ಚರ್ಮ ಹದಗೊಳಿಸುವ ಕಾರ್ಯಾಗಾರಗಳೆಲ್ಲ ಭಾರತದಲ್ಲಿದ್ದವು. ಹೊಸ ರಾಷ್ಟ್ರದಲ್ಲಿ ಕಾಗದದ ಗಿರಣಿಗಳಿರಲಿಲ್ಲ. ಕೆಲವೇ ಕೆಲವು ಕಬ್ಬಿಣದ ಫೌಂಡ್ರಿಗಳಿದ್ದವು. ಸಾಕಷ್ಟು ರಸ್ತೆ ಮತ್ತು ರೈಲು ಸೌಕರ್ಯಗಳಿರಲಿಲ್ಲ. ಜೊತೆಗೆ ನಿರ್ವಸಿತರ ಪ್ರವಾಹ ಇನ್ನೂ ಹರಿದು ಬರುತ್ತಲೇ ಇತ್ತು. ಪಾಕಿಸ್ತಾನದ ಭೂಮಿ ಅತ್ಯಂತ ಫಲವತ್ತಾಗಿತ್ತು. ಆಹಾರ ಸ್ವಾವಲಂಬನೆ ಅದಕ್ಕಿದ್ದ ಬಹುದೊಡ್ಡ ಅನುಕೂಲತೆ. ಆದರೆ ಮತೀಯ ಯುದ್ಧ ಮುಗಿದು ಬಹುದಿನಗಳಾದರೂ ನಿಲ್ಲದ ನಿರ್ವಸಿತರ ಪ್ರವಾಹದಿಂದ ಈ ಅಂಶಕ್ಕೂ ಭೀತಿ ಒದಗಿತ್ತು.

ಪ್ರತ್ಯೇಕ ಇಸ್ಲಾಮಿಕ್ ರಾಷ್ಟ್ರವನ್ನು ಗಳಿಸುವ ಉಗ್ರನಿಷ್ಠೆಯಲ್ಲಿ ಜಿನ್ನಾ ಇಂತಹ ಅಸಾಧ್ಯ ತೊಂದರೆಗಳನ್ನು ಎದುರು ಹಾಕಿಕೊಂಡಿದ್ದರು. ನಿಜಕ್ಕೂ ಅವರ ಉತ್ಸಾಹಕ್ಕೆ ಬಹಳ ದೊಡ್ಡ ಪೆಟ್ಟು ನೀಡಿದ್ದು ಕಾಶ್ಮೀರದ ಬಿಕ್ಕಟ್ಟು. ಭಾರತದ ಬಹುದೊಡ್ಡ ರಾಜಸಂಸ್ಥಾನವಾಗಿದ್ದ ಕಾಶ್ಮೀರದಲ್ಲಿ ಮುಸ್ಲಿಂ ಜನಸಂಖ್ಯೆ ಶೇ.77. ಇಷ್ಟಿದ್ದೂ ಅದು ಪಾಕಿಸ್ತಾನದ ತೆಕ್ಕೆಗೆ ಬರುವ ಒಲವು ಸೂಚಿಸಲಿಲ್ಲ. ಬಾರತಕ್ಕೆ ಸೇರಿಕೊಂಡ ಕಾಶ್ಮೀರ ಈ ಎರಡೂ ದೇಶಗಳ ಅಘೋಷಿತ ಯುದ್ಧಕ್ಕೆ ಕಾರಣವಾಯಿತು. ಈ ಆತಂಕದ ಕಿರಿಕಿರಿ ಬೆಳೆದಂತೆ ಕ್ವೇದ್-ಇ-ಅಜಂರ 'ನೆಗಡಿ'ಯ ತೀವ್ರತೆಯೂ ಹೆಚ್ಚುತ್ತಾ ಹೋಯಿತು. ಆತ ಇನ್ನಷ್ಟು ವಿಮುಖರಾದರು.

ಜಿನ್ನಾ ತಮ್ಮ ಸಚಿವರನ್ನು ಭೇಟಿ ಮಾಡುತ್ತಿರಲಿಲ್ಲ. ಅವರ ಅರಮನೆಯ ಸಿಬ್ಬಂದಿ ಹಾಗೂ ಸೇನಾಪತಿ ಸಹಾಯಕರುಗಳು ಕೂಡ ಅವರ ಬಳಿ ಹೋಗುವುದಕ್ಕೆ ಹೆದರುತ್ತಿದ್ದರು. ಇಂಥ ಸಂದರ್ಭದಲ್ಲಿ ಫಾತಿಮಾ ನನ್ನನ್ನು ಸಾಕಷ್ಟು ಒದ್ದಾಡಿಸಿ, ಪದೇಪದೇ ಭೇಟಿಯನ್ನು ಮುಂದೂಡಿದರೂ ಕೊನೆಗೂ ಫೋಟೋ ತೆಗೆಯಲು ಅನುಮತಿ ದೊರಕಿಸಿಕೊಟ್ಟರು. 72ನೇ ವಯಸ್ಸಿನಲ್ಲೂ ಜಿನ್ನಾ ಸ್ಫುರದ್ರೂಪಿ ಆಗಿದ್ದರು. ಯಾವುದೇ ಸ್ಫುರದ್ರೂಪಿ ವ್ಯಕ್ತಿಗೆ ಫೋಟೋ ತೆಗೆಸಿಕೊಳ್ಳಲು ಒಳಗೇ ಆಸೆ ಇರುತ್ತೆ, ಇದರಿಂದಲೇ ಫೋಟೋಗೆ ಒಪ್ಪಿದರು ಎಂದು ನಾನು ಊಹಿಸಿದೆ.

ಆದರೆ ಜಿನ್ನಾ ಅವರ ಬದಲಾದ ಚಹರೆಯನ್ನು ಕಂಡು ನನಗೆ ಶಾಕ್ ಆಯಿತು. ತತ್ತರಿಸುವ ನಡಿಗೆ, ಭಾವಶೂನ್ಯ ಕಣ್ಣುಗಳು, ಮೂಳೆಗಳು ಎದ್ದು ಕಾಣುವ, ನರದೌರ್ಬಲ್ಯದಿಂದ ಬಿಗಿಹಿಡಿದ ಕೈಗಳು. ನಾನು ಫೋಟೋಗಳನ್ನು ತೆಗೆಯುತ್ತಿದ್ದಂತೆ ಪ್ರತಿ ಶಾಟ್ ನಂತರವೂ ಸೋದರಿ ಪಾತಿಮಾ ವಾತ್ಸಲ್ಯದಿಂದ ಜಿನ್ನಾ ಬಳಿ ಹೋಗಿ ಅವರ ಬಿಗಿಹಿಡಿದಿದ್ದ ಕೈಗಳನ್ನು ಮೆದುವಾಗಿ ಬಿಡಿಸಲು ಪ್ರಯತ್ನಿಸುತ್ತಿದ್ದಳು. ಜಿನ್ನಾ ಜೀವಮಾನದ ಅಂತಿಮ ದಿನಗಳಲ್ಲಿ ತಮ್ಮ ಬದುಕಿನ ಸಾಧನೆಗಳ ಲೆಕ್ಕಾಚಾರ ಮಾಡತೊಡಗಿದ್ದರು. ಅದೇ ಅವರ ನೋವು ತುಂಬಿದ ಗೊಂದಲದ ಮುಖಭಾವಕ್ಕೆ ಕಾರಣವಿರಬಹುದು. ಉತ್ತಮ ವಿಶ್ಲೇಷಣ ಸಾಮರ್ಥ್ಯ, ಪ್ರಖರ ಪ್ರತಿಭೆ ಮತ್ತು ಯಾವುದೇ ಅಂಧಾಭಿಮಾನಗಳಿಲ್ಲದ ಜಿನ್ನಾಗೆ ತಾನು ಮಾಡಿದ ತಪ್ಪು ಅರಿವಾಗಿತ್ತು. ಡಾಕ್ಟರ್ ಫಾಸ್ಟಸ್‌ನಂತೆ ಅವರು ಮಾಡಿದ್ದ ವ್ಯಾಪಾರದಲ್ಲಿ ಅವರೇ ಸಿಕ್ಕಿ ಹಾಕಿಕೊಂಡಿದ್ದರು. ಹೊಸ ರಾಷ್ಟ್ರ ಉದಯಿಸಿದ ನಂತರ ಅಂಧಶ್ರದ್ಧೆಗಳು ಮೇಲುಗೈ ಪಡೆದಿದ್ದವು. ಮತನಿಷ್ಠ ನಾಯಕರು, ಕೆಲವು 'ಹಳೆಯ ಕುಟುಂಬ'ಗಳು ಹೇಳಿದ್ದೇ ಕೊನೆಯ ಮಾತಾಗಿತ್ತು.



ಪಾಕಿಸ್ತಾನ ಉದಯದ ನಂತರ ಜಿನ್ನಾ ಮತ್ತು ಮೌಂಟ್‌ಬ್ಯಾಟನ್

ಅಂಥವರು ತಮ್ಮ ಅಧಿಕಾರ ಉಳಿಸಿಕೊಳ್ಳುವುದಕ್ಕಾಗಿ ಜನರು ಮತೀಯ ಅಂಧಶ್ರದ್ಧೆಗಳ ಬಿಗಿಮುಷ್ಟಿಯಲ್ಲೇ ಇರುವಂತೆ ನೋಡಿಕೊಳ್ಳುತ್ತಿದ್ದರು.

ಇಂಥ ಅತಿರೇಕಗಳಿಗೆ ಪ್ರತಿಯಾಗಿ ದೇಶದಲ್ಲಿ ಕೆಲವು ಆರೋಗ್ಯಕರ ಶಕ್ತಿಗಳೂ ಇದ್ದವು. ಭೂಮಿ ಮತ್ತು ರೈತರ ಸಮಸ್ಯೆಗೆ ಸ್ಪಂದಿಸುವಂತಹ ಮತ್ತು ದರ ಸುಧಾರಣೆಗೆ ಶ್ರಮಿಸುತ್ತಿದ್ದ ಅನೇಕ ಅಧಿಕಾರಿಗಳನ್ನು ನಾನು ಭೇಟಿಮಾಡಿದೆ. ದೇಶದ ಅಡಿಪಾಯವನ್ನೇ ಅಲುಗಿಸುವಂಥ ವಿಪತ್ತು, ಅಘವಾನಗಳ ನಡುವೆಯೂ ಪಾಕಿಸ್ತಾನ ನಿರೀಕ್ಷಿಸಿದ್ದಕ್ಕಿಂತ ಚೆನ್ನಾಗಿಯೇ ಮೊದಲ ವರ್ಷವನ್ನು ದಾಟಿತು. ಸಮತೂಕದ ಬಜೆಟ್, ವ್ಯಾಪಾರದ ಸಮತೋಲನ ಹಾಗೂ ಕೈಗಾರಿಕಾ ಬೆಳವಣಿಗೆಗೆ ಉತ್ತಮ ಕಾರ್ಯಕ್ರಮಗಳು ಪಾಕಿಸ್ತಾನದ ಬೆಳವಣಿಗೆಗೆ ಸಹಾಯಕವಾದವು. ಜಲವಿದ್ಯುತ್ ಶಕ್ತಿಯ ಉತ್ಪಾದನೆಗೆ ಮೊದಲ ಆದ್ಯತೆ ನೀಡಲಾಯಿತು. ಹತ್ತು ವರ್ಷಗಳೊಳಗಾಗಿ ಕಾಟನ್ ಮಿಲ್ಲುಗಳನ್ನು ಎರಡೂವರೆ ಸಹಸ್ರ ಸ್ಪಿಂಡ್ಲ್‌ಗಳಿಗೆ ವಿಸ್ತರಿಸುವ ಯೋಜನೆ ಹಾಕಲಾಯಿತು. ಇದರ ಮೊದಲ ಐವತ್ತು ಸಾವಿರದಷ್ಟನ್ನು ಕೊಡಲು ಜಪಾನ್ ಒಪ್ಪಿಕೊಂಡಿತು. ಸಿಮೆಂಟ್ ಕಾರ್ಖಾನೆ, ಚರ್ಮ ಹದಗೊಳಿಸುವಿಕೆ, ಔಷಧ ಪದಾರ್ಥಗಳು, ರಬ್ಬರ್ ಟೈರು ಯೋಜನೆ, ಕಾಗದ ಗಿರಣಿಗಳು,ಕೃಷಿ ಸಲಕರಣೆಗಳು ಹಾಗೂ ಕಟಿಂಗ್ ಟೂಲ್‌ಗಳ ತಯಾರಿಕೆ ಇತ್ಯಾದಿಗಳಿಗಾಗಿ ಯೋಜನೆ ಹಾಕಲಾಯಿತು. ಮೆರಿಕಾದ ಪ್ರಮುಖ ಮೋಟಾರು ತಯಾರಕರೊಬ್ಬರು ಪಾಕಿಸ್ತಾನದಲ್ಲಿ ಕಾರ್ಖಾನೆ ಸ್ಥಾಪಿಸಲು ಮುಂದೆ ಬಂದರು.

ಅರ್ಥವ್ಯವಸ್ಥೆಯಲ್ಲಿ ನಿಕಟವಾದ ಸಂಬಂಧವಿರುವ ಈ ಎರಡು ಸ್ವತಂತ್ರ ರಾಷ್ಟ್ರಗಳ ನಡುವೆ ಮಾಮೂಲು ಸಹಕಾರವಿದ್ದದೇ ಆಗಿದ್ದರೆ ಇಬ್ಬರಿಗೂ, ಮುಖ್ಯವಾಗಿ ಚಿಕ್ಕರಾಷ್ಟ್ರವಾದ ಪಾಕಿಸ್ತಾನಕ್ಕೆ ಹೆಚ್ಚಿನ ಅನುಕೂಲವಾಗುತ್ತಿತ್ತು. ಆದರೆ ಈ ಏಕತೆ ದೂರದ ಮಾತಾಗಿತ್ತು. ಪಾಕಿಸ್ತಾನದ ಅಧಿಕಾರಿಯೊಬ್ಬರು ನನ್ನ ಮುಂದೆ ಹೇಳಿದಂತೆ ಪಾಕಿಸ್ತಾನವು ಭಾರತದೊಂದಿಗೆ ಅತ್ಯಂತ ಹೆಚ್ಚಿನ ಸ್ನೇಹಪರವಾದ ಸಹಕಾರವನ್ನು ಹೊಂದಲು ಸಿದ್ಧವಾಗಿತ್ತು. ಮತ್ತು ಈ ಬಗ್ಗೆ ಅದಕ್ಕೆ ಒಲವೂ ಇತ್ತು. ಸಂಯುಕ್ತ ಸಂಸ್ಥಾನ ಮತ್ತು ಕೆನಡಾ ನಡುವೆ ಇದ್ದಂತಹ ಸಹಕಾರ ಈ ಎರಡು ರಾಷ್ಟ್ರಗಳ ನಡುವೆ ಇದ್ದಿದ್ದರೆ? ಆದರೆ ಈ ದೇಶಗಳು ಒಂದೇ ಆಳ್ವಿಕೆಯಲ್ಲಿ ಮುಂದುವರೆಯುವುದು, ಒಂದೇ ರೀತಿಯ ಸಂವಿಧಾನ ಹೊಂದುವುದು ಸಾಧ್ಯವೇ ಇರಲಿಲ್ಲ.

ಭಾರತದಲ್ಲಿ ಹಿಂದೂ ಕೈಗಾರಿಕೋದ್ಯಮಿಗಳ ಮೇಲುಗೈನಿಂದ ಮುಕ್ತರಾದ ಅನೇಕ ಮುಸ್ಲಿಂ ಕೈಗಾರಿಕಾ ಕುಟುಂಬಗಳಿಗೆ ಪ್ರತ್ಯೇಕ ಪಾಕಿಸ್ತಾನದ ಸ್ಥಾಪನೆಯಿಂದ ತುಂಬ ನೆಮ್ಮದಿಯಾಯಿತು. ಇದರಲ್ಲಿ ತುಂಬ ಪ್ರತಿಷ್ಠಿತ ಕೈಗಾರಿಕಾ ಕುಟುಂಬ ಇಶ್‌ಪಹಾನಿಯವರದು. ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಭಾರತದಿಂದ ಮಧ್ಯಪ್ರಾಚ್ಯದವರೆಗೂ ಅವರ ವಾಪಾರೋದ್ಯಮ ಹಬ್ಬಿತ್ತು. ಪೂರ್ವ ಪಾಕಿಸ್ತಾನದ ಬಹು ಮುಖ್ಯ ಉತ್ಪನ್ನ ಹಾಗೂ ಬಂಗಾಳದ ಬಂಗಾರದ ಎಳೆ ಎಂದು ಹೆಸರಾಗಿದ್ದ ಸೆಣಬಿನ ಕೈಗಾರಿಕೆಯೊಂದಿಗೆ ಇಶ್‌ಪಹಾನಿಯವರ ಹೆಸರು ಅವಿಭಾಜ್ಯವಾಗಿ ಸೇರಿಹೋಗಿತ್ತು. ಭಾರತದ ಉಪಖಂಡದಲ್ಲಿ ಬಹುದೊಡ್ಡ ಬ್ಯಾಂಕರುಗಳಾಗಿದ್ದ ಹಬೀಬ್ ಕುಟುಂಬ, ಮಿಲಿಟರಿ ಗುತ್ತಿಗೆದಾರರಾದ ಅಮ್ಜದ್ ಅಲಿ ಮತ್ತು ವಾಸಿರ್ ಅಲಿ ಕುಟುಂಬ ಮೊದಲಾದವರೆಲ್ಲ ಜಿನ್ನಾನ ಕಟ್ಟಾ ಬೆಂಬಲಿಗರಾಗಿದ್ದರು. ಇನ್ನೂ ಅಬಿವೃದ್ಧಿ ಹೊಂದಬೇಕಾಗಿರುವ ಪಾಕಿಸ್ತಾನದಲ್ಲಿ ಅವರಿಗೆ ಅವಕಾಶಗಳ ಗಣಿ ತೆರೆದಿತ್ತು. ಕೈಗಾರಿಗೆ ಹಾಗೂ ರಾಜಕೀಯ ದೃಷ್ಟಿಯಿಂದ ಸಿಂದ್ ಪ್ರಾಂತದಲ್ಲೆಲ್ಲ ಅಗ್ರಮಾನ್ಯರಾಗಿದ್ದವರೆಂದರೆ ಹರೂನ್ ಕುಟುಂಬ. ನವರಾಷ್ಟ್ರ ನಿರ್ಮಾಣದಲ್ಲಿ ಅವರ ಪಾತ್ರ ಬಹಳ ಮುಖ್ಯವಾಗಿತ್ತು. ಹರೂನ್ ಕುಟುಂಬಕ್ಕೆ ಹೆಚ್ಚಿನ ಪೂರ್ವಿಕ ಪರಂಪರೆಯಿಲ್ಲದಿದ್ದರೂ ದೇಶ ನಿರ್ಮಾಣಕ್ಕೆ ಅಗತ್ಯವಾದ ಉತ್ಸಾಹ, ವ್ಯಾಪಾರೀ ಚಾಕಚಕ್ಯತೆ ಹಾಗೂ ಅಪಾರ ಸಂಪತ್ತು ಅವರಲ್ಲಿತ್ತು. ದಿವಂಗತ ಅಬ್ದುಲ್ ಹರೂನ್ ಬಗ್ಗೆ ಅವರ ವಿಧವಾ ಪತ್ನಿ ಹೇಳುವಂತೆ ಜಿನ್ನಾ ಪ್ರತ್ಯೇಕ ರಾಷ್ಟ್ರಸಿದ್ಧಾಂತವನ್ನು ಕೈಗೆತ್ತಿಕೊಳ್ಳುವುದಕ್ಕೆ ಬಹಳ ಮೊದಲೇ ಹರೂನ್ ಅವರು ಪಾಕಿಸ್ತಾನಕ್ಕಾಗಿ ಕೆಲಸ ಆರಂಭಿಸಿದ್ದರು. ಇಪ್ಪತ್ತರ ದಶಕದ ಉತ್ತರಾರ್ಧದಲ್ಲಿ ಸಕ್ಕರೆಯ ಪ್ರಮುಖ ಕೈಗಾರಿಕೋದ್ಯಮಿಯಾಗಿ ಸ್ವಪ್ರಯತ್ನದಿಂದ ರೂಪುಗೊಂಡಿದ್ದ ಸರ್ ಅಬ್ದುಲ್ಲಾ ಅವರು ಹಿಂದೂ ಮೇಲುಗೈಯಾಗಿರುವ ಕಾಂಗ್ರೆಸ್ಸಿನಿಂದ ದೂರು ಸಿಡಿದು ಮುಸ್ಲಿಂಲೀಗನ್ನು ಬಲಪಡಿಸಬೇಕು ಎಂದು ನಿರ್ಧರಿಸಿದ್ದರು. ಹರೂನ್‌ರ ನಿಕಟಮಿತ್ರರಾಗಿದ್ದ ಜಿನ್ನಾ ಕೆಲವು ವರ್ಷಗಳ ನಂತರ ಲೀಗ್‌ನ ನೇತೃತ್ವ ವಹಿಸಿಕೊಂಡರು. ಹರೂನ್ ಪ್ರತ್ಯೇಕ ಪಾಕಿಸ್ತಾನಕ್ಕಾಗಿ ವಾದಿಸುತ್ತಿದ್ದ ಕಾಲದಲ್ಲಿ ಜಿನ್ನಾ ಇನ್ನೂ ಏಕೀಕೃತ ಭಾರತದ ಪರಿಕಲ್ಪನೆಗೇ ಅಂಟಿಕೊಂಡಿದ್ದರು. ಅಂತಿಮವಾಗಿ ಜಿನ್ನಾ ಕೂಡ ಇದೇ ವಿಚಾರವನ್ನು ಅಪ್ಪಿಕೊಂಡು ಪಾಕಿಸ್ತಾನಕ್ಕಾಗಿ ಹೋರಾಟ ಆರಂಭಿಸಿದರು. ಈ ಗುರಿಯನ್ನು ತಲುಪುವುದಕ್ಕೆ ಐದು ವರ್ಷ ಮೊದಲೇ ಹರೂನ್ ನಿಧನರಾದರು. ಆಗ ಹರೂನ್ ಅವರ ಪತ್ನಿಯನ್ನು ಸಂತೈಸುತ್ತ "ನಾನು ಕೇವಲ ಸ್ನೇಹಿತನನ್ನು ಕಳೆದುಕೊಳ್ಳಲಿಲ್ಲ. ನನ್ನ ಬಲಗೈಯನ್ನೇ ಕಳೆದುಕೊಂಡಿದ್ದೇನೆ" ಎಂದು ಜಿನ್ನಾ ಹೇಳಿದ್ದರು.


ಅಬ್ದುಲ್ಲಾ ಹರೂನ್ ಹೊತ್ತಿಸಿದ ಪಂಜನ್ನು ಅವರ ಇಡೀ ಕುಟುಂಬ ನಿಷ್ಠೆಯಿಂದ ಕಾಪಾಡಿಕೊಂಡು ಬಂದಿತು. ಹೊಸ ರಾಷ್ಟ್ರದಲ್ಲಿ ಹರೂನ ಕುಟುಂಬದ ಪ್ರತಿಯೊಬ್ಬರು ಕೈಗೆ ಸಿಕ್ಕ ಎಲ್ಲಾ ರಾಜಕೀಯ ಹಾಗೂ ವಾಣಿಜ್ಯ ಕ್ಷೇತ್ರದ ನೇತೃತ್ವ ವಹಿಸಿದ್ದರು. ಸಕ್ಕರೆಯ ಸಿಂಡಿಕೇಟ್‌ನ ಮುಖ್ಯಸ್ಥಿಕೆ ವಹಿಸಿಕೊಂಡ ಶ್ರೀಮತಿ ಹರೂನ, ಗಂಡ ಮಾಡುತ್ತಿದ್ದ ಲಾಭದಾಯಕವಾದ ಸೆಕೆಂಡ್ ಹ್ಯಾಂಡ್ ಉಡುಪು ತಯಾರಿಕೆ ವ್ಯವಹಾರವನ್ನೂ ಕೈಗೆತ್ತಿಕೊಂಡಳು. ಅಮೆರಿಕಾದಿಂದ ಹಳೆಯ ಬಟ್ಟೆಗಳನ್ನು ತರಿಸಿಕೊಂಡು ತಮ್ಮ ಕಾರ್ಖಾನೆಯಲ್ಲಿ ಅವುಗಳನ್ನು ಸ್ವಚ್ಛಪಡಿಸಿ, ಸರಿಪಡಿಸಿ ಮರು ಮಾರಾಟ ಮಾಡುವುದು ಇಲ್ಲಿನ ವ್ಯಾಪಾರ. ಅವರ ಹಿರಿಯ ಮಗ ಯೂಸುಫ್, ಮುಸ್ಲಿಂ ಛೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷನಾದ. ಒಂದು ಅವಧಿಯವರೆಗೆ ಕರಾಚಿಯ ಮೇಯರ್ ಕೂಡ ಆಗಿದ್ದ. ಇತ್ತೀಚಿಗೆ ಸಿಂದ್ ಪ್ರಾಂತದ ಮುಖ್ಯಸ್ಥನಾದ. ಜಿನ್ನಾ ಹೊರಡಿಸುತ್ತಿದ 'ಡಾನ್' ವೃತ್ತ ಪತ್ರಿಕೆಯ ಪ್ರಕಾಶಕನಾದ. ಬಟ್ಟೆ ಮತ್ತು ಆಟಿಕೆಗಳ ಆಮದು, ಮುಂತಾದ ವೈವಿಧ್ಯಮಯ ತಯಾರಿಕಾ ಉದ್ಯಮ ವ್ಯವಹಾರಗಳನ್ನು ನಡೆಸಿದ. 'ಪಾಕ್ ಏರ್' ಎಂಬ ಹೆಸರಿನ ಹೊಸ ಏರ್ ಲೈನ್ಸ್ ಆರಂಭಿಸಿದ.

ಕರಾಚಿಯಲ್ಲಿರುವ ಅವರ ಗುಲಾಬಿ ಬಣ್ಣದ ಭವನದ ಹೆಸರು``Sea field" ಆ ಮನೆಯಲ್ಲಿ ಎಲಿವೇಟರ್ ಇದೆ. ಗಾಜಿನ ಕಿಟಕಿ ಬಾಗಿಲುಗಳ ವರಾಂಡ, ಅತ್ಯಾಧುನಿಕ ಪಿರೋಪಕರಣಗಳು, ಲೆಕ್ಕವಿಲ್ಲದಷ್ಟು ಸಿಟಿಂಗ್ ರೂಂಗಳು, ಸ್ತ್ರೀಯರಿಗಾಗಿ ಕನ್ನಡಿ ಕೆಲಸದ ಸುಂದರವಾದ ಏಕಾಂತ ಗೃಹಗಳು. ಈ ಮನೆಯಲ್ಲಿ ಸದಾಕಾಲ ಹೆಂಗಸರ ಕಲರವ ಇರುತ್ತದೆ. ಕೆಲವರು ಟೆಲಿಫೋನ್ ಸಂಭಾಷಣೆಯಲ್ಲಿ ನಿರತರಾಗಿರುತ್ತಾರೆ. ನಿರಾಶ್ರಿತರ ವಸತಿ ಸಮಿತಿಗಳನ್ನು ರಚಿಸುವುದು, ಇತ್ಯಾದಿ ಕೆಲಸ ನಡೆದಿರುತ್ತದೆ. ಭವನದ ವಿಶಾಲವಾದ ಚಾವಣಿಯ ಮೇಲೆ ಬಾವುಟ, ಲಾಠಿಗಳನ್ನು ಹಿಡಿದವರ ಕವಾಯಿತು ನಡೆಯುತ್ತಿರುತ್ತದೆ. ಒಂದು ಕಡೆ ಸೀರೆಗಳ ವಿನ್ಯಾಸದ ಕೆಲಸ ನಡೆದಿರುತ್ತದೆ. ಈ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುವ ಹರೂನ್ ಪತ್ನಿ ಮಾತೃಸ್ಥಾನದಲ್ಲಿದ್ದರೂ ಸಾಮ್ರಾಜ್ಞೆಯ ದರ್ಪ ಆಕೆಯಲ್ಲಿದೆ.

ಡೊನೇಷನ್ ಹಾವಳಿ

ಕಾಯ್ದೆ ಏನು ಹೇಳುತ್ತದೆ ?

ವಿದ್ಯಾರ್ಥಿ-ಪೋಷಕರನ್ನು ಕಾಡುತ್ತಿರುವ ವಂತಿಗೆ ಸಮಸ್ಯೆಗೆ ಪರಿಹಾರ ಸರ್ಕಾರದ ನೀತಿಗಳಲ್ಲಿ ಮೂಲಭೂತ ಬದಲಾವಣೆ ತರುವುದರಲ್ಲಿದೆ. ಆದರೆ ಈ ಮಧ್ಯೆ ಜನ ಚಳುವಳಿಗಳ ಹೋರಾಟದಿಂದ ರೂಪುಗೊಂಡಿರುವ ಕಾನೂನುಗಳ ಸರಿಯಾದ ಜಾರಿಗೆ ಒತ್ತಡ ತರುವುದರಿಂದ ಸ್ವಲ್ಪ ಮಟ್ಟಿಗಾದರೂ ಈ ಸುಲಿಗೆಯನ್ನು ನಿಯಂತ್ರಿಸಲು ಸಾಧ್ಯ. ಈ ನಿಟ್ಟಿನಲ್ಲಿ ಕಾನೂನು ಏನು ಹೇಳುತ್ತದೆ ಎಂದು ಅವಲೋಕಿಸಿದ್ದಾರೆ ವಕೀಲ ಜಿ.ಎ.ಹಿರೇಮಠ್



ಕೇಂದ್ರ ಮತ್ತು ರಾಜ್ಯ ಸರಕಾರಗಳ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಯಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ನಾಯಿಕೊಡೆಗಳಂತೆ ಹುಟ್ಟಿ ಮನಬಂದಂತೆ ಕಾನೂನು ಬಾಹಿರ ಡೊನೇಶನ್ ಬೇರೆ ಬೇರೆ ತರಹದ ಶುಲ್ಕ ಮುಂತಾದವುಗಳನ್ನು ವಸೂಲಿ ಮಾಡುತ್ತಲಿವೆ. ಅಲ್ಲದೇ ವಿದ್ಯಾರ್ಥಿಗಳ ಪ್ರವೇಶವನ್ನು (ಅ್ಯಡ್ಮಿಶನ್) ಮನಬಂದಂತೆ ಮಾಡುತ್ತಲಿವೆ. ಮಂತ್ರಿ ಮತ್ತು ಶಾಸಕರೇ ಖಾಸಗಿ ಶಾಲೆ ಕಾಲೇಜುಗಳನ್ನು ನಡೆಸುತ್ತಿರುವುದರಿಂದ ಬೇಲಿಯೇ ಎದ್ದು ಹೊಲ ಮೇದಂತಾಗಿದೆ. ಇಂದು ಶಿಕ್ಷಣ ಸಂಸ್ಥೆಗಳು ಸಾರ್ವಜನಿಕವಾಗಿರದೇ ಒಂದು ಜಾತಿಯ ಮತ್ತು ಉಪಜಾತಿಗಳ ಮನೆತನದವರ ಸಂಸ್ಥೆಗಳಾಗಿ ಹೋಗಿ ಶಿಕ್ಷಣವನ್ನು ವ್ಯಾಪಾರಕ್ಕೆ ಇಟ್ಟು ಮಾರಾಟ ಮಾಡುತ್ತಿವೆ. ಶಿಕ್ಷಣ ಇಲಾಖೆಯ ಕೆಲ ಅಧಿಕಾರಿಗಳು ರಾಜಕೀಯ ಪುಢಾರಿಗಳ ಮತ್ತು ಆಡಳಿತ ಮಂಡಳಿಗಳ ಬಿಡೆಯಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ. ಹೇಳುವರು ಕೇಳುವರು ಇಲ್ಲದಂತಾಗಿ ಶಿಕ್ಷಣ ಕ್ಷೇತ್ರದಲ್ಲಿ ಕಾನೂನಿನ ವ್ಯವಸ್ಥೆ ಕೆಟ್ಟು ನಾರುತ್ತಿದೆ. ಮುಖ್ಯವಾಗಿ ಪಾಲಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಶಿಕ್ಷಣ ಕಾಯ್ದೆಗಳ ಬಗ್ಗೆ ಇದ್ದ ಅಜ್ಞಾನದ ಪರಿಸ್ಥಿತಿಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ದುರುಪಯೋಗಪಡಿಸಿ ಕೊಳ್ಳುತ್ತಲಿವೆ.

ಎಸ್.ಎಫ್.ಐ.ದಂತ ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಸತತ ಹೋರಾಟ ಮಾಡುತ್ತಿವೆ. ಪಾಲಕರು ಈ ವಿದ್ಯಾರ್ಥಿಗಳ ಹೋರಾಟಗಳನ್ನು ಗಮನಿಸದಿದ್ದರೆ ಮತ್ತು ಅವರಿಗೆ ಬೆಂಬಲ ಕೊಡದಿದ್ದರೆ ಅವರು ಲೂಟಿ ಹೊಡೆಸಿಕೊಳ್ಳುವುದು ಖಚಿತ. ಕಾನೂನು ಬಾಹಿರ ಶೋಷಣೆಯನ್ನು ತಪ್ಪಿಸಿಕೊಳ್ಳಲು ಸಂಘಟಿತ ಹೋರಾಟದಿಂದ ಸಾಧ್ಯ. ಇದು ಪಾಲಕರ ಮತ್ತು ಕಾಯ್ದೆಗಳ ಬಗ್ಗೆ ತಿಳುವಳಿಕೆ ಪಡೆಯುವುದೂ ಸಹ ಅಗತ್ಯವಾಗಿದೆ.

ಕಾನೂನು ತಿಳಿದುಕೊಳ್ಳಿ

ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಲಾಸಿಫಿಕೇಶನ್, ರೆಗ್ಯುಲೇಶನ್ ಮತ್ತು ಪ್ರಿಸ್ಕ್ರಿಪ್ಶನ್ ಕರಿಕ್ಯುಲಾ ಮುಂತಾದ) ನಿಯಮಗಳ (ರೂಲ್ಸ್) 1995ರ ಅಡಿಯಲ್ಲಿ ಮಾಡಿದ ನಿಯಮಗಳು 28-10-1999ರಲ್ಲಿ ಜಾರಿಗೆ ಬಂದಿವೆ. ಅವುಗಳನ್ನು ಈ ಕೆಳಗೆ ಸಾರಾಂಶ ರೂಪದಲ್ಲಿ ಕೊಡಲಾಗಿದೆ.

ರೂಲ್ ನಂ. 10(2) - ಟರ್ಮ್ ಫೀ, ಟ್ಯೂಶನ್ ಫೀ, ವಿಶೇಷ ಡೆವೆಲಪ್‌ಮೆಂಟ್ (ಡೊನೇಶನ್) ಫೀ ಅಂತ ಸರಕಾರ ಕಾಲಕಾಲಕ್ಕೆ ನಿಗದಿ ಪಡಿಸಿದಂತೆ ಶಾಲೆ ಕಾಲೇಜುಗಳು ಸ್ವೀಕರಿಸಬೇಕು.


ರೂಲ್ ನಂ. 10(3)(ಸಿ) - ವಿಶೇಷ ಡೆವೆಲಪಮೆಂಟ್ (ಡೊನೇಶನ್) ಫೀಯನ್ನು ಪ್ರತಿ ವರ್ಷ ಅನುದಾನಿತ ಸಂಸ್ಥೆಗಳು ರೂ. 500(ಐದನೂರು) ಮತ್ತು ಅನುದಾನರಹಿತ ಸಂಸ್ಥೆಗಳು ರೂ.600/-(ಆರನೂರು) ಗಳನ್ನು ಮಾತ್ರ ಸ್ವೀಕರಿಸಬೇಕು ಅಲ್ಲದೇ ಇದಕ್ಕೆ ರಶೀದಿಯನ್ನು ಸಹ ಕೊಡಬೇಕು.

ರೂಲ್ ನಂ. 12 - ಶೈಕ್ಷಣಿಕ ವರ್ಷ ಪ್ರಾರಂಭವಾದ 30 ದಿನದ ಒಳಗಾಗಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಪಾಲಕರ ಮತ್ತು ಶಿಕ್ಷಕರ ಸಮಿತಿ ರಚಿಸಬೇಕು ಮತ್ತು 3 ತಿಂಗಳಿಗೊಮ್ಮೆಯಾದರೂ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸಭೆ ನಡೆಸಬೇಕು.

ರೂಲ್ ನಂ. 14(5) - ಸರಕಾರದ ಅಥವಾ ಅನುದಾನಿತ ಸಂಸ್ಥೆಗಳು ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಸರಕಾರದ ಆದೇಶದ ಪ್ರಕಾರ ಪ್ರವೇಶ (ಅಡ್ಮಿಶನ್)ವನ್ನು ಮೀಸಲಿಡಬೇಕು.

ರೂಲ್ ನಂ. 14(6) - ಆಯಾ ವರ್ಗದ ಒಟ್ಟು ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯ ಅರ್ಧದಷ್ಟು ಸಂಖ್ಯೆಯ ಸೀಟುಗಳನ್ನು ವಿದ್ಯಾರ್ಥಿನಿಯರಿಗೆ ಕೋ-ಎಜ್ಯುಕೇಶನ್ ನಡೆಸುವ ಶಿಕ್ಷಣ ಸಂಸ್ಥೆಗಳು ಮೀಸಲಿಡಬೇಕು.

ರೂಲ್ ನಂ. 14(7) - ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಶಾಲೆ/ ಕಾಲೇಜು ಮುಖ್ಯಸ್ಥರು ತಮ್ಮ ಶಾಲೆ/ ಕಾಲೇಜಿನಲ್ಲಿ ಪ್ರವೇಶಕ್ಕೆ (ಅಡ್ಮಿಶನ್‌ಗೆ)



ಸಂಬಂಧಿಸಿದಂತೆ ಅಂದರೆ ಅರ್ಜಿ ಕೊಡುವ, ಸ್ವೀಕರಿಸುವ ದಿನಾಂಕ, ಪ್ರವೇಶಕ್ಕೆ ಆಯ್ಕೆಗೊಂಡ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಸಿದ್ಧಿ ಪಡಿಸುವ ದಿನಾಂಕ ಮತ್ತು ಪ್ರವೇಶಕ್ಕಾಗಿ ಫೀ ತುಂಬುವ ದಿನಾಂಕ ಮತ್ತು ಇನ್ನಿತರ ವಿಷಯಗಳೊಳಗೊಂಡ ನೋಟೀಸನ್ನು ಹಚ್ಚಬೇಕು.

ರೂಲ್ ನಂ. 14(8) - ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಈ ಮೇಲೆ ಹೇಳಿದ ವಿಷಯ ಪಟ್ಟಿಯೊಂದಿಗೆ ಪ್ರತಿ ವರ್ಗಕ್ಕೆ ಎಷ್ಟು ಸೀಟುಗಳು ಇವೆ ಅನ್ನುವ ಸಂಖ್ಯೆಗಳನ್ನು ಅಲ್ಲದೇ ಎಷ್ಟು ಶುಲ್ಕ (ಫೀ) ಮತ್ತು ಯಾವ ಮಾನದಂಡದ ಮೇಲೆ ಆಯ್ಕೆಯನ್ನು ಮಾಡಲಾಗುವುದೆಂಬ ಬಗ್ಗೆ ನೋಟಿಸಿನಲ್ಲಿ ಕಾಣಿಸಿ ನೋಟೀಸನ್ನು ಶಾಲೆ ಕಾಲೇಜುಗಳಲ್ಲಿ ಹಚ್ಚಬೇಕು.

ರೂಲ್ ನಂ. 14(9) ಪಾಲಕರು ಪ್ರವೇಶಕ್ಕಾಗಿ ಅರ್ಜಿಗಳನ್ನು ಕೊಟ್ಟರೆ ಅದು ಮುಟ್ಟಿದ ಬಗ್ಗೆ ರಶೀದಿಯನ್ನು ಪಡೆದುಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಬಂದ ಎಲ್ಲ ಅರ್ಜಿಗಳ ಬಗ್ಗೆ ರಜಿಸ್ಟರದಲ್ಲಿ ಬರೆದಿಡಬೇಕು.

ರೂಲ್ ನಂ.14(10) ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಅರ್ಹ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ತಯಾರಿಸಬೇಕು ಅಲ್ಲದೇ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸಬೇಕು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗೆ ರಿಜಿಸ್ಟ್ರೇಶನ್ ನಂಬರ್ ಕೊಡಬೇಕು.

ರೂಲ್ ನಂ. 14(11) ಆಯ್ಕೆಯಾದ ಅರ್ಹ ವಿದ್ಯಾರ್ಥಿಗಳ ಮತ್ತು ಪ್ರವೇಶ ನಿರಾಕರಿಸಲಾದ ವಿದ್ಯಾರ್ಥಿಗಳ ಹೆಸರು ಮತ್ತು ರಜಿಸ್ಟರ್ಡ್ ನಂಬರೊಳಗೊಂಡ ಪಟ್ಟಿಯನ್ನು ನೋಟೀಸ್ ಬೋರ್ಡಿಗೆ ಲಗತ್ತಿಸಬೇಕು. ಅಲ್ಲದೇ ಯಾರದಾದರು ತಕರಾರು ಇದ್ದರೆ 5 ದಿನಗಳಲ್ಲಿ ಕೊಡಲು ತಿಳಿಸಬೇಕು. ತಕರಾರನ್ನು ಸ್ವೀಕರಿಸಿದ ಬಗ್ಗೆ ರಶೀದ ಕೊಡಬೇಕು. ಬಂದ ತಕರಾರುಗಳನ್ನು ಪರಿಶೀಲಿಸಿ ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಹಚ್ಚಬೇಕು.

ರೂಲ್ ನಂ. 14(12)(ಬಿ) - ಮಾಧ್ಯಮಿಕ ಶಾಲೆ, ಪಿ.ಯು.ಸಿ. ಮತ್ತು ಪದವಿ ಕಾಲೇಜಿನ ಮುಖ್ಯಸ್ಥರು ಪ್ರವೇಶಕ್ಕೆ (ಅಡ್ಮಿಶನ್) ನಿಗದಿಗೊಳಿಸಿದ ಒಟ್ಟು ಸಂಖ್ಯೆಯ ಪ್ರವೇಶ ಸೀಟುಗಳಲ್ಲಿ 80ಕ್ಕೆ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಬೇಕು ಅಲ್ಲದೇ ಉಳಿದ 20ಕ್ಕೆ ಸೀಟುಗಳನ್ನು ಆಡಳಿತ ಮಂಡಳಿಯವರು ಆಯ್ಕೆ ಮಾಡುತ್ತಾರೆ.

ರೂಲ್ ನಂ. 14(15) - ಪ್ರಾಥಮಿಕ ಶಿಕ್ಷಣದವರೆಗೆ ಪ್ರವೇಶವನ್ನು(ಅಡ್ಮಿಶನ್) ಪಡೆಯಲು ಯಾವುದೇ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಅಥವಾ ಪಾಲಕರ ಇಂಟರ್‌ವ್ಯೂ ಮತ್ತು ಪ್ರವೇಶ ಪರೀಕ್ಷೆಗಳನ್ನು ಮಾಡಲು ಪ್ರತಿ-ಬಂಧಕವಿದೆ.

ರೂಲ್ ನಂ. 14(16) - ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಪ್ರವೇಶಕ್ಕೆ ಸಂಬಂಧಿಸಿದ ನಿಯಮಗಳನ್ನು ಪಾಲಿಸಲೇಬೇಕು ಅಲ್ಲದೇ ಇದಕ್ಕೆ ಸಂಬಂಧಿಸಿದ ತಪಾಸಣಾ(ಇನ್ಸ್‌ಪೆಕ್ಷನ್) ಅಧಿಕಾರಿ ಶಿಕ್ಷಣ ಸಂಸ್ಥೆಗೆ ತಪಾಸಣೆಗೆ ಬಂದಾಗ ಮುಖ್ಯಸ್ಥರು ಎಲ್ಲಾ ದಾಖಲೆಗಳನ್ನು ತೋರಿಸಬೇಕು. ಯಾವುದಾದರು ನಿಯಮಗಳನ್ನು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಉಲ್ಲಂಘಿಸಿದ್ದಾದರೆ ತಪಾಸಣಾಧಿಕಾರಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿದ ಜಿಲ್ಲಾ ಶಿಕ್ಷಣ ರೆಗ್ಯೂಲೇಟಿಂಗ್ ಅಥಾರಿಟಿಯವರ ಗಮನಕ್ಕೆ ತರಬೇಕು.

ರೂಲ್ ನಂ 15 - ವಿದ್ಯಾರ್ಥಿಗಳಿಗೆ ಪ್ರವೇಶ ಪಡೆಯುವಲ್ಲಿ ಅನ್ಯಾಯವಾಗಿದ್ದರೆ ಮತ್ತು ಯಾವುದೇ ನಿಯಮವನ್ನು ಶಿಕ್ಷಣ ಸಂಸ್ಥೆಗಳು ಉಲ್ಲಂಘಿಸಿದ್ದಾರೆಂದು ಕಂಡುಬಂದರೆ ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಅಥಾರಿಟಿಯವರಿಗೆ ಅರ್ಜಿ/ ಮನವಿಯನ್ನು ಕೊಡಬಹುದು.

ರೂಲ್ ನಂ. 16 - ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಅಥಾರಿಟಿ ರಚನೆ ಮತ್ತು ಅವರ ಕರ್ತವ್ಯಗಳು : ಸದರಿ ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಅಥಾರಟಿಯಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿ, ಜಿಲ್ಲಾ ಡಿ.ಡಿ.ಪಿ.ಐ. ಕಾರ್ಯದರ್ಶಿಗಳಿರುತ್ತಾರೆ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರ (ಸಿ.ಎಸ್.), ಪಿಯುಸಿ ಶಿಕ್ಷಣ ಖಾತೆಯ ಉಪನಿರ್ದೇಶಕರು, ಜಿಲ್ಲಾ ಮುಖ್ಯ ಇಂಜಿನೀಯರ ಸದಸ್ಯರಾಗಿರುತ್ತಾರೆ. ಈ ರೆಗ್ಯುಲೇಟಿಂಗ್ ಅಥಾರಿಟಿಯವರಿಗೆ ಅರ್ಜಿದಾರರು ತಮಗಾದ ಅನ್ಯಾಯದ ಬಗ್ಗೆ ಮನವಿ ಕೊಡಬಹುದು ಅಲ್ಲದೇ ಈ ಬಗ್ಗೆ ಅಥಾರಿಟಿಯವರಿಗೆ ವಿಚಾರಣೆ ಮಾಡಿ ನಿರ್ಣಯ ಕೊಡಲು ಹಕ್ಕು ಇರುತ್ತದೆ.

ರೂಲ್ ನಂ. 17 - ಪಾಲಕರಾಗಲಿ ಅಥವಾ ಆಡಳಿತ ಮಂಡಳಿಯವರಾಗಲಿ ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಅಥಾರಿಟಿಯವರು ಕೊಟ್ಟ ತೀರ್ಪಿನ ವಿರುದ್ಧ ಕಮೀಶನ್, ಸಾರ್ವಜನಿಕ ಶಿಕ್ಷಣ ಇವರಲ್ಲಿ ಮೇಲ್ಮನವಿ(ಅಪೀಲ್)ಯನ್ನು ಮಾಡಿಕೊಳ್ಳಬಹುದು ಮತ್ತು ಸದರಿ ಕಮೀಶನರ್ ಕೊಟ್ಟ ತೀರ್ಮ ಅಂತಿಮವಾದದು.

ಈ ರೀತಿ ಸರಕಾರವೇ ಕಾನೂನುಗಳನ್ನು ಮಾಡಿದ್ದರೂ ಸತತವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಈ ಕಾನೂನುಗಳನ್ನು ಉಲ್ಲಂಘಿಸಿತ್ತಿರುವದನ್ನು ಸರಕಾರ ಕಂಡು ಕಂಡು ಏನೂ ಕ್ರಮ ಕೈಕೊಳ್ಳದೇ ಜಾಣಮೌನವನ್ನು ಅನುಸರಿಸುತ್ತಿದೆ. ನಮ್ಮನ್ನಾಳುವ ಸರಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಬಿ ಪರ ಹಾಗೂ ಪಾಲಕರಾದ ರೈತ, ಕೂಲಿ, ಬಡ ನೌಕರ ಸಾಮಾನ್ಯ ಜನರ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ, ಇದನ್ನು ಎಷ್ಟು ದಿನ ಜನತೆ ಸಹಿಸಬೇಕು? ಶಿಕ್ಷಣ ಪಡೆಯುವದು ಮಕ್ಕಳ ಮೂಲಭೂತ ಹಕ್ಕು - ಸರಕಾರಕ್ಕೆ ಇದು ಗೊತ್ತಿಲ್ಲವೇ?

ಶಾಲೆ - ಕಾಲೇಜುಗಳಲ್ಲಿ ಶಿಕ್ಷಕ - ಶಿಕ್ಷಕೇತರ ಹುದ್ದೆಗಳನ್ನು ತುಂಬಬೇಕು

ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿಯ ಖಾಲಿ ಬಿದ್ದಿರುವ ಶಿಕ್ಷಣ ಹಾಗೂ ಶಿಕ್ಷಕೇತರ ಹುದ್ದೆಗಳನ್ನು ತುಂಬಿಕೊಳ್ಳಲು ಆರ್ಥಿಕ ತೊಂದರೆ ತೋರಿಸುತ್ತ ಸರಕಾರ ಆಡಳಿತ ಮಂಡಳಿಯವರಿಗೆ ನೇಮಕಾತಿ ಮಾಡಿಕೊಳ್ಳಲು ಪರವಾನಿಗೆ ಕೊಡುತ್ತಿಲ್ಲ. ಇದನ್ನೇ ನೆಪಮಾಡಿಕೊಂಡು ಖಾಸಗಿ ಶಿಕ್ಷಣ ಸಂಸ್ಥೆಗಳು ಕಾನೂನು ಬಾಹಿರವಾಗಿ ಸಾವಿರಾರು ರೂಪಾಯಿ ಡೊನೇಶನ್ ವಸೂಲಿ ಮಾಡುತ್ತಿದ್ದಾರೆ. ಹೀಗಾಗಿ ಅನೇಕ ಶಿಕ್ಷಕ ಹುದ್ದೆಗಳು ಖಾಲಿ ಬಿದ್ದು ನಮ್ಮ ಮಕ್ಕಳಿಗೆ ಅದರಲ್ಲೂ ಹಳ್ಳಿಯ ಮಕ್ಕಳಿಗೆ ಸರಿಯಾದ ಶಿಕ್ಷಣ ದೊರೆಯದಂತಾಗಿ ಅವರು ಹಿಂದುಳಿಯುವಂತಾಗಿದೆ. ಈ ಬಗ್ಗೆ ಪಾಲಕರು, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಆಡಳಿತ ಮಂಡಳಿಯವರು ಜಂಟೀ ಹೋರಾಟ ಮಾಡಿ ಸರಕಾರದ ಮೇಲೆ ಒತ್ತಡ ತಂದು ಅನುದಾನಿತ ಶಾಲೆ - ಕಾಲೇಜುಗಳನ್ನು ಖಾಲಿ ಬಿದ್ದ ಹುದ್ದೆಗಳನ್ನು ಅನುದಾನ ಸಹಿತ ತುಂಬುವಂತೆ ಮಾಡಬೇಕಾಗಿದೆ.

ಗ್ರಾಮೀಣ ಕೃಪಾಂಕ

ಸುಪ್ರೀಂ ಕೋರ್ಟಿನ ತೀರ್ಪಿನ ನೆಪವನ್ನು ಹೇಳುತ್ತಾ ಗ್ರಾಮೀಣ ಕೃಪಾಂಕದ ಸೌಲಭ್ಯವನ್ನು ಸರಕಾರ ಕೊಡುತ್ತಿಲ್ಲ. ಸಂವಿಧಾನ ತಿದ್ದುಪಡಿ ಮಾಡಿ ಸುಪ್ರೀಂ ಕೋರ್ಟಿನ ತೀರ್ಪನ್ನು ನಿಷ್ಕ್ರಿಯಗೊಳಿಸಿ ಗ್ರಾಮೀಣ ಕೃಪಾಂಕ ಸೌಲಭ್ಯವನ್ನು ಮತ್ತೆ ಜಾರಿಗೆ ತರಬಹುದು. ಈ ಬಗ್ಗೆ ಈಗಾಗಲೇ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಹೋರಾಟ ನಡೆಸಿದ್ದರೂ ಸಹ, ರೈತರ, ಕೂಲಿಕಾರರ, ಹಿಂದುಳಿದವರ ಉದ್ದಾರದ ಬಗ್ಗೆ ಹೇಳಿಕೆಗಳನ್ನು ನೀಡುತ್ತಾ ಸರಕಾರ ನಮಗೆಲ್ಲ ಮೋಸ ಮಾಡುತ್ತಲಿದೆ. ಈ ಬಗ್ಗೆಯೂ ಸಹ ನಾವೆಲ್ಲ ಹೋರಾಡಬೇಕಾಗಿದೆ.

ಅತ್ಯವಶ್ಯಕ ಸೌಲಭ್ಯಗಳನ್ನು ಪೂರೈಸಬೇಕು.

ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪಾಯಖಾನೆ, ಮೂತ್ರಾಲಯ, ವಿಶ್ರಾಂತಿ ಕೊಠಡಿ, ಶುದ್ಧ ಕುಡಿಯುವ ನೀರು, ಗ್ರಂಥಾಲಯ, ಆಟದ ಮೈದಾನ, ಆಟದ ಸಾಮಗ್ರಿಗಳು, ಪ್ರಯೋಗ ಶಾಲೆಗಳ, ಕಂಪ್ಯೂಟರ್‌ಗಳ ಸೌಲಭ್ಯ ಮೊದಲಾದವರುಗಳ ಕೊರತೆಯಿಂದಾಗಿ ಮಕ್ಕಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಪಡುವಂತಾಗಿದೆ. ಇವೆಲ್ಲ ಸೌಲಭ್ಯಗಳನ್ನು ಅವಶ್ಯವಾಗಿ ಪೂರೈಸಬೇಕೆಂದು ಕಾನೂನು ಹೇಳುತ್ತದೆ. ಈ ಬಗ್ಗೆ ಸಹ ಆಡಳಿತ ಮಂಡಳಿ ಹಾಗೂ ಸರಕಾರದ ಗಮನ ಸೆಳೆಯಲು ನಾವೆಲ್ಲ ಹೋರಾಟ ಮಾಡಬೇಕಾಗುತ್ತದೆ.

● ಜಿ.ಎ. ಹಿರೇಮಠ
ವಕೀಲರು, ಹಾವೇರಿ

ಆಹಾರ, ಭೂಮಿ ಮತ್ತು ಉದ್ಯೋಗ ಆಂದೋಲನಕ್ಕೆ ಸಿಪಿಐ(ಎಂ) ಕರೆ

ಜನಸಾಮಾನ್ಯರನ್ನು ಬಾಧಿಸುವ ಆಹಾರ, ಭೂಮಿ ಮತ್ತು ಉದ್ಯೋಗದ ಕುರಿತು ದೇಶದಾದ್ಯಂತ ವ್ಯಾಪಕ ಚಳುವಳಿ ರೂಪಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ನಿರ್ಧರಿಸಿದೆ. ರಾಜ್ಯದ ವಾಸ್ತವ ಪರಿಸ್ಥಿತಿಗೆ ಅನುಗುಣವಾಗಿ ಬೇಡಿಕೆಗಳನ್ನು ನಿರ್ದಿಷ್ಟಗೊಳಿಸಬೇಕೆಂದೂ ನಿಗದಿ ಪಡಿಸಿದ ಪ್ರದೇಶಗಳಲ್ಲಿ ಚಳುವಳಿಯನ್ನು ತೀವ್ರಗೊಳಿಸಬೇಕೆಂದೂ ಸಿಪಿಐ(ಎಂ) ಕರೆ ನೀಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲೂ ಚಳುವಳಿಯನ್ನು ಯಶಸ್ವಿಗೊಳಿಸಲು ನಿರ್ಧರಿಸಿದೆ.

ಬಡ ಜನರಿಗೆ ಕಡಿಮೆ ದರದಲ್ಲಿ ರೇಶನ್ ಒದಗಿಸಬೇಕೆಂದು ತೀವ್ರ ಒತ್ತಾಯ ಇದ್ದರೂ, ಇನ್ನೂ ಕೂಡಾ ಹಲವೆಡೆ ಬಿ.ಪಿ.ಎಲ್. ಕಾರ್ಡು ವಿತರಣೆಯಾಗಿಲ್ಲ. ಆದಾಯ ಹೆಚ್ಚಿದೆ ಎಂಬ ನೆಪವೊಡ್ಡಿ, ಜನತೆಯ ದೊಡ್ಡ ವಿಭಾಗವನ್ನು ರೇಶನ್ ವ್ಯವಸ್ಥೆಯಿಂದ ದೂರವಿಡಲಾಗಿದೆ. ಅಂತ್ಯೋದಯ ಯೋಜನೆಯ ಲಾಭ ಕೆಲವೇ ಕೆಲವು ಜನರಿಗೆ ಸಿಗುತ್ತಿದ್ದು ಅದರ ವಿಸ್ತಾರಣೆಯಾಗಬೇಕಾಗಿದೆ. ಸಕ್ಕರೆಗೆ ಸಬ್ಸಿಡಿ ಕಡಿತ ಮಾಡಿರುವುದರಿಂದ ಕಬ್ಬು ಬೆಳೆದ ರೈತರಿಗೆ ಬೆಲೆ ಸಿಗದಿದ್ದರೂ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯಲ್ಲಿ ಹೆಚ್ಚಳ ಉಂಟಾಗಿದೆ.

ಕೂಲಿಗಾಗಿ ಕಾಳು ಯೋಜನೆಯಲ್ಲಿ ಭ್ರಷ್ಟಾಚಾರ ದಿನೇ ದಿನೇ ಹೆಚ್ಚುತ್ತಿದೆ. ಕಾಂಟ್ರಾಕ್ಟುದಾರರು ಲಾಭದ ಕೊಳ್ಳೆ ಹೊಡೆಯುತ್ತಿದ್ದು. ಬಡ ಜನರಿಗೆ ತಲುಪದಾಗಿದೆ. ಈ ಯೋಜನೆಯ ಅಡಿಯಲ್ಲಿ ನಗದು ಮತ್ತು ಕಾಳು ಎರಡನ್ನೂ ನೀಡಬೇಕಾಗಿದ್ದರೂ ಈ ಸೂತ್ರವನ್ನು ಅನುಸರಿಸುತ್ತಿಲ್ಲ. ಮಹಿಳೆಯರು ಕೆಲಸದಿಂದ ವಂಚಿತರಾಗುತ್ತಿದ್ದಾರೆ. ರಾಜ್ಯದಲ್ಲಿ ನಿಗದಿ ಪಡಿಸಿರುವ ಕನಿಷ್ಟ ಕೂಲಿಯನ್ನು ನೀಡುತ್ತಿಲ್ಲ.

ಸರಕಾರಿ ಬೀಳು ಭೂಮಿ ಮತ್ತು ಹೆಚ್ಚುವರಿ ಭೂಮಿಯನ್ನು ಶ್ರೀಮಂತರಿಗೆ, ಕೈಗಾರಿಕೋದ್ಯಮಿಗಳಿಗೆ ನೀಡುವ ಬದಲಾಗಿ ಭೂಹೀನರಿಗೆ, ಅದರಲ್ಲೂ ಪರಿಶಿಷ್ಟ ಜಾತಿಯವರಿಗೆ ನೀಡಬೇಕು. ಕಾಂಗ್ರೆಸ್ ಮತ್ತು ಜೆಡಿ(ಎಸ್) ನೇತೃತ್ವದ ಸಮ್ಮಿಶ್ರ ಸರಕಾರವಾಗಲೀ ಕೈಗಾರಿಕೋದ್ಯಮಿಗಳಿಗೆ ಅಡ್ಡಾದಿಡ್ಡಿಯಾಗಿ ಭೂಮಿ ನೀಡುತ್ತಿದ್ದಾರೆ. ಈ ನೀತಿಗಳು ಬದಲಾಗಿ, ಪಶ್ಚಿಮ ಬಂಗಾಳ, ಕೇರಳ, ತ್ರಿಪುರಗಳಲ್ಲಿರುವಂತೆ ಆಮೂಲಾಗ್ರ ಭೂಸುಧಾರಣೆ ಜಾರಿಯಾಗಬೇಕು. ತಲತಲಾಂತರಗಳಿಂದ ಅರಣ್ಯದ ಉಪ ಉತ್ಪನ್ನ ಮತ್ತು ಅರಣ್ಯ ಭೂಮಿಯ ಹಕ್ಕನ್ನು ಅನುಭವಿಸಿಕೊಂಡು ಬರುತ್ತಿರುವ ಪರಿಶಿಷ್ಟ ಪಂಗಡದ ಜನರಿಗೆ ಆ ಹಕ್ಕುಗಳ ರಕ್ಷಣೆಯಾಗಬೇಕು.

ಉದಾರೀಕರಣದ ಹಿನ್ನೆಲೆಯಲ್ಲಿ ಉದ್ಯೋಗ ರಹಿತ ಬೆಳವಣಿಗೆಯಿಂದ ಉದ್ಯೋಗ ನಷ್ಟದ ಬೆಳವಣಿಗೆಯತ್ತ ಸಾಗುತ್ತಿದೆ. ಸರಕಾರಿ ಇಲಾಖೆಗಳಲ್ಲೂ ತೀವ್ರ ಉದ್ಯೋಗ ಕಡಿತವಾಗಿದೆ. ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ನಿರೂಪಿಸಿದಂತೆ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ತಕ್ಷಣ ಜಾರಿಯಾಗಬೇಕು. ಉದ್ಯೋಗಗಳನ್ನು ಸೃಷ್ಟಿಸುವ ಹೊಸ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಅದಕ್ಕಾಗಿ ಸಾಕಷ್ಟು ಹಣವನ್ನು ಸರಕಾರ ಒದಗಿಸಬೇಕು.

ಚಳುವಳಿಯ ಸಂದರ್ಭದಲ್ಲಿ ಕೆಳಗಿನ ಬೇಡಿಕೆಗಳಿಗೆ ಹೆಚ್ಚು ಒತ್ತಾಯ ಮಾಡಲು ನಿರ್ಧರಿಸಲಾಗಿದೆ.

ಬೇಡಿಕೆಗಳು :

1. ಆಹಾರ : ರೇಶನ್ ವ್ಯವಸ್ಥೆ

1. ರೇಶನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕು.
2. ಅಲ್ಲಿಯುವರೆಗೆ, ಬಿಪಿಎಲ್ ಕಾರ್ಡು ನಿರಾಕರಿಸಲ್ಪಟ್ಟ ಎಲ್ಲ ಬಡವರಿಗೆ ಕಾರ್ಡುಗಳನ್ನು ನೀಡಬೇಕು.
3. ಅಂತ್ಯೋದಯ ವಿಸ್ತರಣೆಯಾಗಬೇಕು.
4. ಸಕ್ಕರೆಯನ್ನು ಸಬ್ಸಿಡಿ ದರದಲ್ಲಿ ನಿಡಬೇಕು, ರೇಶನ್ ವ್ಯವಸ್ಥೆಗೆ ಇನ್ನಷ್ಟು ವಸ್ತುಗಳ ಸೇರ್ಪಡೆಯಾಗಬೇಕು.

ಕೂಲಿಗಾಗಿ ಕಾಳು ಯೋಜನೆ

1. ಎರಡು ರೀತಿಯ ಬೆಲೆ ಪದ್ಧತಿಗೆ ತಡೆ - ಕೇಂದ್ರ ಸರ್ಕಾರವು ಎಲ್ಲಾ ಆಹಾರ ಧಾನ್ಯಗಳ ಬೆಲೆಗಳನ್ನು ಬಿ.ಪಿ.ಎಲ್. ದರಗಳಲ್ಲಿ ನಿರ್ಧರಿಸುವುದು ಮತ್ತು ಹಂಚಿಕೆಯನ್ನು ಹೆಚ್ಚಿಸುವುದು.
2. ಈಗಾಗಲೇ ಗುರುತಿಸಲಾಗಿರುವ ಹಿಂದುಳಿದ ಜಿಲ್ಲೆಗಳಲ್ಲದೆ ಇತರ ಆದ್ಯತಾ ಜಿಲ್ಲೆಗಳಿಗೆ ವಿಸ್ತರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ.
3. ಯೋಜನೆಗಳ ವಿಕೇಂದ್ರೀಕರಣ ಮತ್ತು ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಯೋಜನೆಗಳಿಗೆ ಸಹಾಯ. ಕಾಂಟ್ರಾಕ್ಟುದಾರರಿಗೆ ಅವಕಾಶ ಕೂಡದು.
4. ಸರ್ಕಾರ ನಿಗದಿಪಡಿಸಿರುವ ಕನಿಷ್ಟ ವೇತನವನ್ನು ನೀಡುವುದು. ತುಂಡು-ಕೆಲಸ ವಿಧಾನದ ಬದಲಾಗಿ ದಿನಕೂಲಿ ಆಧಾರದಲ್ಲಿ ಕೆಲಸಗಾರರ ನೇಮಕ.
5. ಕೂಲಿಗಾಗಿ ಕಾಳು ಯೋಜನೆಯ ಮಾರ್ಗದರ್ಶಕ ಸೂತ್ರ ಕೂಡಲೇ ಪರಿಷ್ಕರಿಸಿ, ವಿಕೇಂದ್ರೀಕರಣ, ಜನರ ಭಾಗವಹಿಸುವಿಕೆ, ಇತರ ಆದ್ಯತಾ ಪ್ರದೇಶಗಳನ್ನು ಸೇರಿಸುವುದು, ಶೇ. 30ರಷ್ಟು ಕೆಲಸವನ್ನು ಮಹಿಳೆಯರಿಗೆ ನೀಡುವುದನ್ನು ಖಚಿತಪಡಿಸುವುದು.

2. ಭೂಮಿ :

1. ವಿವಿಧ ರಾಜ್ಯಗಳಲ್ಲಿ ಭೂ ಸುಧಾರಣೆಗಳಿಗೆ ಪ್ರತಿಗಾಮಿ ಬದಲಾವಣೆ ತರುವ ಪ್ರಯತ್ನಕ್ಕೆ ತಡೆ. ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಂತೆ ಆಮೂಲಾಗ್ರ ಭೂ ಸುಧಾರಣೆ ಜಾರಿ. ಮಹಿಳೆಯರಿಗೆ ಜಂಟಿ ಪಟ್ಟಾ.
2. ಸರಕಾರಿ ಬೀಳುಭೂಮಿ ಹಾಗೂ ಹೆಚ್ಚುವರಿ ಭೂಮಿಯನ್ನು, ಭೂಹೀನರಿಗೆ, ವಿಶೇಷವಾಗಿ ಪರಿಶಿಷ್ಟ ಜಾತಿಯವರಿಗೆ ಹಂಚುವುದು. ಬಹುರಾಷ್ಟ್ರೀಯ ಕಂಪನಿಗಳಿಗೆ, ದೊಡ್ಡ ಉದ್ದಿಮೆದಾರರಿಗೆ ನೀಡುವುದಕ್ಕೆ ತಡೆ.
3. ಆದಿವಾಸಿ ಜನರನ್ನು ಅವರ ಸ್ವಾಧೀನದಲ್ಲಿರುವ ಭೂಮಿಯಿಂದ ಒಕ್ಕಲೆಬ್ಬಿಸುವುದನ್ನು ನಿಲ್ಲಿಸುವುದು. ಆದಿವಾಸಿಗಳಿಗೆ ಅರಣ್ಯ ಭೂಮಿಯ ಹಕ್ಕು.
4. ಗೇಣಿದಾರರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸುವುದು, ಗೇಣಿದಾರರನ್ನು ನೊಂದಾಯಿಸುವುದು.
5. ಭೂಹೀನ ಕೃಷಿ ಕಾರ್ಮಿಕರಿಗೆ ಹಿತ್ತಲು ಸಹಿತದ ಮನೆ ನಿವೇಶನ ನೀಡುವುದು.
6. ಭೂಮಿ ಮತ್ತು ಎಲ್ಲಾ ಗಣಿ ಸಂಪತ್ತು ದೇಶದ ಸಾರ್ವಭೌಮ ಹಕ್ಕು. ಅದನ್ನು ವಿದೇಶಿ ಕಂಪನಿಗಳು ಶೋಷಿಸಲು ಅವಕಾಶ ನೀಡಬಾರದು.

3. ಉದ್ಯೋಗ :

1. ಕೈಗಾರೀಕರಣದ ಅಭಿವೃದ್ಧಿ, ಉದಾರೀಕರಣ ನೀತಿಯನ್ನು ಬದಲಾಯಿಸಿ ಪ್ರಾಥಮಿಕ ಮತ್ತು ಸೇವಾಕ್ಷೇತ್ರಗಳಲ್ಲಿ ಉದ್ಯೋಗ ನೀಡಿಕೆ.
3. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಅಂಗೀಕರಿಸಿ ಜಾರಿ ಮಾಡುವುದು ಮತ್ತು ಪಟ್ಟಣ ಪ್ರದೇಶಗಳಿಗೆ ವಿಸ್ತರಣೆ.
4. ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿಗಾಗಿ ಹೆಚ್ಚಿಗೆ ಹಣ ಒದಗಿಸುವುದು.

ಚಳುವಳಿಯ ಮೊದಲ ಹಂತದಲ್ಲಿ ಬೇಡಿಕೆಗಳ ಕುರಿತು ವಿವಿಧ ಸಮಿತಿಗಳಲ್ಲಿ, ಸರ್ವ ಸದಸ್ಯರ ಸಭೆಗಳಲ್ಲಿ ಚರ್ಚಿಸಬೇಕೆಂದೂ ನಂತರ ಪಾದಯಾತ್ರೆ, ಸೈಕಲ್ ಜಾಥಾ, ವಾಹನ ಜಾಥಾಗಳ ಮೂಲಕ ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ನಡೆಸಬೇಕೆಂದೂ ನಿರ್ಧರಿಸಲಾಗಿದೆ. ಎರಡನೇ ಹಂತದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬೆಂಗಳೂರಿಗೆ ಜಾಥಾದಲ್ಲಿ ಬಂದು, ಬೃಹತ್ ಬಹಿರಂಗ ಸಭೆಯನ್ನು ಏರ್ಪಡಿಸಲಾಗುವುದು ಈ ಎಲ್ಲಾ ಪ್ರಚಾರಾಂದೋಲನ ನಂತರ ಸೆಪ್ಟೆಂಬರ್ ತಿಂಗಳಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಬೇಕೆಂದು ಪಕ್ಷವು ತನ್ನೆಲ್ಲಾ ಘಟಕಗಳಿಗೆ ಕರೆ ನೀಡಿದೆ. ಅದೇ ಸಂದರ್ಭದಲ್ಲಿ ಸಾಮಾನ್ಯ ಜನತೆಯ ಪರವಾಗಿರುವ ಬೇಡಿಕೆಗಳನ್ನು ಈಡೇರಿಸುವಲ್ಲಿ ಜನತೆ ತುಂಬು ಬೆಂಬಲ ನೀಡಿ ಪ್ರೋತ್ಸಾಹಿಸಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

ಬೀಡಿ ಕಾರ್ಮಿಕರಿಗೆ ನ್ಯಾಯಕೊಡಿ

ಕಾರ್ಮಿಕರ ಬೃಹತ್ ವಿಧಾನಸೌಧ ಚಲೋ



ಕರ್ನಾಟಕ ರಾಜ್ಯದಲ್ಲಿರುವ ಸರಿಸುಮಾರು 10 ಲಕ್ಷ ಬೀಡಿ ಕಾರ್ಮಿಕರಿಗೆ ಕನಿಷ್ಟಕೂಲಿ ಜಾರಿಗೊಳಿಸಬೇಕು ಹಾಗೂ ಬೀಡಿ ಕಾರ್ಮಿಕರಿಗೆಲ್ಲಾ ಲಾಗ್ ಪುಸ್ತಕ, ವೇತನ ಚೀಟಿ, ಪಿಎಫ್ ನೀಡಬೇಕು, ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯಿದೆ 1966 ರ ಸೆಕ್ಷನ್ 1(3)ನ್ನು ಕಾರ್ಮಿಕರ ಪರವಾಗಿ ತಿದ್ದುಪಡಿ ಮಾಡಬೇಕು ಹಾಗೂ ಎಲ್ಲಾ ಬೀಡಿ ಕಾರ್ಮಿಕರ ಮಕ್ಕಳಿಗೂ ವೆಲ್‌ಫೇರ್ ವಿದ್ಯಾರ್ಥಿ ವೇತನ ಮಂಜೂರು ಮಾಡಬೇಕು, ಎಲ್ಲಾ ಬೀಡಿಗಳಿಗೆ ಯಾವುದೇ ವಿನಾಯಿತಿ ನೀಡದೆ ಕಡ್ಡಾಯವಾಗಿ ಸುಂಕ ವಸೂಲಾತಿ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಜೂನ್ 30 ರಂದು 4ನೇ ಅಖಿಲ ಭಾರತ ಸಮ್ಮೇಳನದ ಕರೆಯಂತೆ ವಿಧಾನಸೌಧ ಚಲೋ ಕಾರ್ಯಕ್ರಮ ನಡೆಸಿತು.

ಅಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅಖಿಲ ಭಾರತ ಬೀಡಿಕಾರ್ಮಿಕರ ಫೆಡರೇಷನ್ ಕಾರ್ಯಾಧ್ಯಕ್ಷರಾದ ಕಾಂ. ಬಿ.ಮಾಧರವರು ಮಾತನಾಡಿ, ರಾಜ್ಯ ಸರ್ಕಾರ ಕಳೆದ ಮೂರು ವರ್ಷಗಳಿಂದಲೂ ಬೀಡಿ ಮಾಲೀಕರು ಹೆಚ್ಚುವರಿ ತುಟ್ಟಿಭತ್ಯೆಯನ್ನು ಜಾರಿಗೊಳಿಸದೆ ಇರುವುದನ್ನು ನೋಡಿ ಸಹ ಸುಮ್ಮನೆ ಇರುವುದು ಕಾರ್ಮಿಕ ವಿರೋಧಿ ಕ್ರಮ ಎಂದರಲ್ಲದೆ, ಸರ್ಕಾರ ನೇಮಿಸಿದ್ದ ಐಸಾಕ್ ಕಮಿಟಿ ವರದಿಯು ಅಸಂಬದ್ಧ ಹಾಗೂ ಕಾರ್ಮಿಕ ವಿರೋಧಿ ನಿಲುವನ್ನು ತಾಳಿದೆ ಎಂದರು. ಸರ್ಕಾರ ರಾಜ್ಯದ ಬೀಡಿ ಕಾರ್ಮಿಕರ ಬದುಕಿನ ಪ್ರಶ್ನೆಯನ್ನು ಕುರಿತು ಗಂಭೀರವಾಗಿ ಚರ್ಚೆ ನಡೆಸಿ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು.

ಈ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ, ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರಾದ ಕಾಂ. ವಿ.ಜೆ.ಕೆ.ನಾಯರ್ ರವರು ಮಾತನಾಡಿ ದುಡಿಯುವ ಜನರು ಕೂಲಿ ಮತ್ತು ಸೌಲಭ್ಯಗಳಿಗಾಗಿ ಹೋರಾಟ ನಡೆಸುವುದು ಅಗತ್ಯವೆಂದರು. ಬೀಡಿ ಕಾರ್ಮಿಕರ ಹೋರಾಟಕ್ಕೆ ಸಿಐಟಿಯು ಸದಾ ಬೆಂಬಲಿಸುತ್ತದೆ ಎಂದು ಹೇಳಿದರು.

ಪ್ರತಿಭಟನಾ ಸಭೆಯ ಸ್ಥಳಕ್ಕೆ ಆಗಮಿಸಿದ ಕರ್ನಾಟಕ ರಾಜ್ಯ ಸರ್ಕಾರದ ಕೃಷಿ ಮತ್ತು ಮಾರುಕಟ್ಟೆ ಸಚಿವರಾದ ಶ್ರೀ ಪ್ರಕಾಶ್ ಹುಕ್ಕೇರಿ ಅವರು ಮನವಿ ಪತ್ರವನ್ನು ಸ್ವೀಕರಿಸಿ ತಮಗೂ ಬೀಡಿ ಕಾರ್ಮಿಕರ ಸಮಸ್ಯೆಗಳ ಅರಿವಿದ್ದು, ತಾವು ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ಪರಿಗಣಿಸಿ ಬಗೆಹರಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಾಗಿ ತಿಳಿಸಿದರು.

ನಂತರ ಮಾತನಾಡಿದ ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ರಾಜ್ಯದ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಕಾರ್ಮಿಕರನ್ನು ಕಡೆಗಣಿಸಲಾಗಿದೆ ಎಂದು ಆಪಾದಿಸಿದರಲ್ಲದೆ, ರಾಜ್ಯ ಸರ್ಕಾರ ದುಡಿಯುವ ಜನರ ಪರವಾದ ಯಾವುದೇ ಸಕಾರಾತ್ಮಕ ನಿಲುವನ್ನು ತಾಳುತ್ತಿಲ್ಲ ಎಂದು ಟೀಕಿಸಿದರು. ಅವರು ಬೀಡಿ ಕಾರ್ಮಿಕರ ಸಮಸ್ಯೆಗಳ ಕುರಿತು ಸರ್ಕಾರದೊಂದಿಗೆ ಹಾಗೂ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವುದಾಗಿ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಷನ್‌ನ ಅಧ್ಯಕ್ಷರಾದ ಕಾಂ.ಜೆ.ಬಾಲಕೃಷ್ಣ ಶೆಟ್ಟಿ ಅವರು ಮಾತನಾಡಿ ಬೀಡಿಕಾರ್ಮಿಕರ ಬಗ್ಗೆ ಸರ್ಕಾರವು ದಿವ್ಯ ನಿರ್ಲಕ್ಷ್ಯ ತಾಳಿರುವುದನ್ನು ಖಂಡಿಸಿದರು.



ವೆಲ್‌ಫೇರ್ ಕಮಿಷನರ್‌ಗೆ ಪ್ರಶ್ನೆಗಳ ಸುರಿಮಳೆ

ವಿದ್ಯಾರ್ಥಿ ವೇತನ ಬಾರದೆ ಇರುವ ಕಾರಣದಿಂದಾಗಿ ತೀವ್ರವಾಗಿ ಬೇಸತ್ತಿದ್ದ ಬೀಡಿ ಕಾರ್ಮಿಕರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಬೀಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ನಿಧಿಯ ಸಹಾಯಕ ಆಯುಕ್ತರಾದ ಶ್ರೀ ಸಿದ್ದವೀರಯ್ಯನವರಿಗೆ ಪ್ರಶ್ನೆಗಳ ಸುರಿಮಳೆಗೈದರು. ಕಳೆದ ವರ್ಷ ಶೇ 50 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವೇತನ ಬಾರದೇ ಇರುವುದರ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ಪ್ರಶ್ನೆಗಳಿಗೆ ಉತ್ತರಿಸಿದ ಸಹಾಯಕ ಆಯುಕ್ತರು ಕಳೆದ ಬಾರಿ ಸರ್ಕಾರ ಕೇವಲ ರೂ. 6.5 ಕೋಟಿ ನೀಡಿದ್ದರಿಂದ ವಿದ್ಯಾರ್ಥಿವೇತನವನ್ನು ಎಲ್ಲರಿಗೂ ನೀಡಲು ಸಾಧ್ಯವಾಗಲಿಲ್ಲ. ಒಟ್ಟಾರೆ ಎಲ್ಲರಿಗೂ ವಿದ್ಯಾರ್ಥಿ ವೇತನ ನೀಡಬೇಕಾದಲ್ಲಿ ರೂ. 13 ಕೋಟಿ ಅಗತ್ಯವಿದೆ ಎಂದರು. ಈ ಬಾರಿಯೂ ಸಹ ಕೇಂದ್ರದಿಂದ ಹಿಂದಿನಸಾಲಿನ ರೂ. 6.5 ಕೋಟಿ ಮಾತ್ರ ಬಿಡುಗಡೆ ಆಗಿದೆ. ಕೇಂದ್ರಕ್ಕೆ ಎಲ್ಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಅಗತ್ಯವಾದಷ್ಟು ಹಣವನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡುವುದಾಗಿ ತಿಳಿಸಿದರು.

ಆರಂಭದಲ್ಲಿ ಫೆಡರೇಷನ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಸಯ್ಯದ್ ಮುಜೀಬ್ ಪ್ರಾಸ್ತಾವಿಕ ಮಾತನಾಡಿದರು. ಪ್ರತಿಭಟನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮುಖಂಡರಾದ ಕಾಂ. ಬಿ.ಎಂ.ಭಟ್, ಕಾ. ಯು.ಬಿ.ಲೋಕಯ್ಯ, ಕಾಂ. ಪದ್ಮಾವತಿ ಶೆಟ್ಟಿ, ಕಾಂ. ಗೀತಾ, ಕಾಂ. ಸುಕುಮಾರ್, ಕಾಂ. ಕೆ.ಶಂಕರ್, ಕಾಂ. ದೋಗು ಸುವರ್ಣ, ಕಾಂ. ರಮೇಶ್ ಮೆಂಡನ್, ಬೆಂಗಳೂರಿನ ಕಾಂ.ಜಲೀಲ್, ಕಾಂ.ಬಸಮ್ಮ ಬೆಳಗಾಂನ ಕಾಂ. ಸಿ.ಎ.ಕಾರಡೆ, ಕಾಂ. ಗೈಬು ಜೈನಾಖಾನ್ ಮುಂತಾದವರು ಪಾಲ್ಗೊಂಡಿದ್ದರು. ○

ಅಯೋಧ್ಯೆಯಲ್ಲಿ ಭಯೋತ್ಪಾದಕರ ಧಾಳಿ ಮತ್ತು ಬಿಜೆಪಿ ಪ್ರತಿಕ್ರಿಯೆ

ವಿವಾದಗ್ರಸ್ತ 'ಅಯೋಧ್ಯಾ' ಕೇಂದ್ರದ ಮೇಲೆ ಭಯೋತ್ಪಾದಕರ ಹೀನ ದಾಳಿ ನಡೆದಿದೆ. ಅದೃಷ್ಟವಶಾತ್ ಈ ಧಾಳಿಯನ್ನು ವಿಫಲಗೊಳಿಸಲಾಗಿದೆ. ಆದರೆ ಇಂತಹದ್ದೊಂದು ಅವಕಾಶಕ್ಕಾಗಿಯೇ ಕಾದಿದ್ದಂತೆ ಸಂಘ ಪರಿವಾರ ಕೋಮುದ್ವೇಷದ ವಿಷ ಕಾರುತ್ತಾ ಕೋಮುಉನ್ಮಾದ ಸೃಷ್ಟಿಸಲು ಸಂಚು ನಡೆಸಿದೆ. ಕೋಮುವಾದಿ ಶಕ್ತಿಗಳ ಈ ಹುನ್ನಾರವನ್ನು ಲೇಖನದಲ್ಲಿ



ಹಲವಾರು ಶತಮಾನಗಳಿಂದ ಭಾರತದ ಜಾತ್ಯಾತೀತತೆಯ ಸಾಕ್ಷಿಯೆಂಬಂತಿದ್ದ ಬಾಬ್ರಿ ಮಸೀದಿಯನ್ನು ಡಿಸೆಂಬರ್ 6, 1992ರಂದು ಕೋಮುಶಕ್ತಿಗಳು ನೆಲಸಮಗೊಳಿಸಿ ತಾತ್ಕಾಲಿಕವಾಗಿ ನಿರ್ಮಿಸಿದ ರಾಮಮಂದಿರ ಸ್ಥಳದಲ್ಲಿ ಮೊನ್ನೆಯಷ್ಟೇ ರಾಷ್ಟ್ರವಿರೋಧಿ ಉಗ್ರಗಾಮಿಗಳು ಧಾಳಿ ನಡೆಸಿರುವುದು ಆತಂಕವುಂಟುಮಾಡಿದರೂ ಆ ಉಗ್ರಗಾಮಿಗಳ ಯತ್ನವನ್ನು ವಿಫಲಗೊಳಿಸಿ ಎಲ್ಲರನ್ನೂ ಸ್ಥಳದಲ್ಲೇ ಭದ್ರತಾಪಡೆಗಳು ಕೊಲ್ಲಲು ಯಶಸ್ವಿಯಾಗಿರುವುದು ಸಮಾಧಾನಕರ ಸಂಗತಿ. ಭಾರತದ ಇತರೆಡೆಗಳಲ್ಲೂ ಉಗ್ರಗಾಮಿಗಳ ಧಾಳಿ ಸಾಧ್ಯತೆಯಿದೆಯೆಂಬುದು ಈ ಸಂಗತಿಯಿಂದ ತಿಳಿಯುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆಲ್ಲವೂ ಉಗ್ರಗಾಮಿಗಳ ದೇಶ ಒಡೆಯುವ ಯತ್ನಕ್ಕೆ ಸರಿಯಾದ ಪಾಠ ಕಲಿಸಲು ಸದಾ ಜಾಗೃತರಾಗಿರಬೇಕಾಗಿದೆ.

ಇಡೀ ರಾಷ್ಟ್ರದ ಜನತೆ ದಿಗ್ಭ್ರಮೆ, ಆತಂಕಗಳಿಂದ ಉಗ್ರರ ಈ ಧಾಳಿಯನ್ನು ಖಂಡಿಸುತ್ತಿದ್ದರೆ 'ದೈವ ಆಯ್ಕೆ ಮಾಡಿದ ಅಸ್ತ್ರ' ತಮ್ಮ ಪಕ್ಷವೆಂದು ಬೊಗಳೆ ಬಿಡುವ ಬಿಜೆಪಿಯ ಅಡ್ವಾಣಿ, ಧಾಳಿ ನಡೆದ ತಕ್ಷಣ ಈ ರೀತಿ ಪ್ರತಿಕ್ರಿಯಿಸಿದ್ದಾರೆ "ನಂಗೆ ಇದೊಂದು ಸುವರ್ಣಾವಕಾಶವಾಗಿ ಒದಗಿ ಬಂದಿದೆ. ನಾವು ಮತ್ತೆ ರಾಮನ ವಿಷಯವನ್ನು ಕೈಗೊತ್ತಿಕೊಳ್ಳುತ್ತೇವೆ. ಅಯೋಧ್ಯೆಯಲ್ಲಿ ರಾಮಮಂದಿರವನ್ನು ಕಟ್ಟೇ ತೀರುತ್ತೇವೆ." ಉಗ್ರರ ಧಾಳಿಯನ್ನು ಭಾರತದ ಜಾತ್ಯಾತೀತತೆಯ ಮೇಲಾದ ಧಾಳಿಯೆಂದು ಪರಿಗಣಿಸದೆ ಬಿಜೆಪಿ ಸಂಘಪರಿವಾರಗಳು ಇದನ್ನು ಕೋಮು ಭಾವನೆ ಬೀಜ ಬಿತ್ತಿ ರಾಜಕೀಯದ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಭಾರತದ ಐಕ್ಯತೆ ಮತ್ತು ಸಮಗ್ರತೆಗೆ ಒದಗಿ ಬಂದಿರುವ ಸಂಚಕಾರ. ಇದು ಭಯೋತ್ಪಾದನೆಯಷ್ಟೇ ಅಪಾಯಕಾರಿ. ಇಂತಹ ಧಾಳಿಗಳ ವಿರುದ್ಧ ಜನತೆಯ ಐಕ್ಯತೆಯನ್ನು ಕಾಪಾಡುವುದನ್ನು ಕಡೆಗಣಿಸಿ ಸ್ವಯಂಘೋಷಿತ ದೇಶಭಕ್ತರು ದಾಂಧಲೆ ಎಬ್ಬಿಸಿ ದೇಶದ ಸಂಪತ್ತನ್ನು, ಐಕ್ಯತೆಯನ್ನು ಹಾಳುಗೆಡಹುವ ಕೆಲಸಕ್ಕೆ ನಿಂತಿರುವುದು ಹಾಸ್ಯಾಸ್ಪದ.

ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಕ್ರಿಮಿನಲ್ ಪಿತೂರಿ ಆರೋಪದಿಂದ ಖುಲಾಸೆ ಪಡೆದಿದ್ದ ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿಯವರನ್ನು ಅಲಹಾಬಾದ್ ಉಚ್ಚ ನ್ಯಾಯಾಲಯವು ಈಗಾಗಲೇ ಆರೋಪಪಟ್ಟಿ ಸಲ್ಲಿಸಿರುವುದರಿಂದ ಇತರರೊಂದಿಗೆ ಅವರನ್ನೂ ಆರೋಪಿ ಸ್ಥಾನದಲ್ಲಿ ಮುಂದುವರಿಸಬೇಕೆಂದು ತೀರ್ಪಿತ್ತಿದೆ. ಅಡ್ವಾಣಿಯವರು ಉಪಪ್ರಧಾನಿ ಮತ್ತು ಗೃಹಖಾತೆ ಸಚಿವರಾಗಿದ್ದ ಸಮಯದಲ್ಲಿ ಕೆಳಹಂತದ ನ್ಯಾಯಾಲಯವು ಅವರನ್ನು ವಿನಾಕಾರಣ ಖುಲಾಸೆಗೊಳಿಸಿತ್ತು. ಅಲಹಾಬಾದ್ ನ್ಯಾಯಾಲಯದ ಮೇಲಿನ ಕ್ರಮ ಆರಂಭದಿಂದಲೂ ಜಾತ್ಯಾತೀತತೆಯ ನಂಬುಗೆಯಿಟ್ಟಿರುವ ಜನತೆಯಲ್ಲಿ ವಿಶ್ವಾಸ ಮೂಡಿಸಿದೆ. ಈ ದೇಶದ ಕಾನೂನಿನ ಹಾದಿಯಲ್ಲಿ ಈ ತೀರ್ಪು ಸಾಗಿರುವುದು ಸಮಾಧಾನಕರ.

ಗೋಧ್ರಾದಲ್ಲಿ ನಡೆದ ಆಕಸ್ಮಿಕ ದುರಂತವನ್ನು ವ್ಯವಸ್ಥಿತ ಪಿತೂರಿಯೆಂಬಂತೆ ಬಿಂಬಿಸಿ ಕೋಮುವಾದಿ ವಿಷ ಬೀಜಗಳಿಂದ ಮುಗ್ಧ ಜನರ ಭಾವನೆಗಳನ್ನು ಪ್ರಚೋದಿಸಿ ಲಕ್ಷಾಂತರ ಜನತೆಯ ಸಮಾಧಿಯ ಮೇಲೆ ಗುಜರಾತ್‌ನಲ್ಲಿ ಸರ್ಕಾರ ರಚಿಸಲು ಯಶಸ್ವಿಯಾದ ರೀತಿಯಲ್ಲೇ ಮೊನ್ನೆ ಆಯೋಧ್ಯಾ ಮೇಲೆ ನಡೆದ ಧಾಳಿಯನ್ನು ಬಳಸಿಕೊಳ್ಳಲು ಬಿಜೆಪಿ ತಂತ್ರ ಹೊಸೆಯುತ್ತಿದೆ. ಪ್ರಜಾಪ್ರಭುತ್ವದ ಗಂಧಗಾಳಿಯಿಲ್ಲದ ಸಂಘ ಪರಿವಾರ ತನ್ನ ಕರುಳಬಳ್ಳಿ ಬಿಜೆಪಿಯನ್ನು ನೇರವಾಗಿ ನಿಯಂತ್ರಿಸುತ್ತಿರುವ ಆತಂಕಕಾರಿ ವಿಷಯದ ಜೊತೆಗೆ ಅಧಿಕಾರಕ್ಕಾಗಿ ಬಿಜೆಪಿಯ ಆಂತರಿಕ ಮುಸುಕಿನ ಗುದ್ದಾಟ ಎಲ್ಲವೂ ಅದರ ಸಂಘಟನೆಯ ರೂಪ ಅಸ್ತವ್ಯಸ್ತತೆಯಲ್ಲಿರುವಾಗ, ಅಯೋಧ್ಯೆಯ ಹೆಸರಿನಲ್ಲಿ ಮೈಕೊಡವಿ ಎದ್ದು ಬರಲು ಯತ್ನಿಸುತ್ತಿದೆ.

ಬಾಬ್ರಿ ಮಸೀದಿಯ ಧ್ವಂಸ ತದನಂತರ ರಾಷ್ಟ್ರವಿರೋಧಿ ಉಗ್ರಗಾಮಿಗಳ ಮುಯ್ಯಿ ತೀರಿಸಿಕೊಳ್ಳುವ ಕಾರ್ಯಗಳು ಇವೆರಡೂ ತಮ್ಮ ಉಳಿವಿಗಾಗಿ ಒಂದನ್ನೊಂದು ಅವಲಂಬಿಸಿವೆ. ಇಸ್ಲಾಂ ಮೂಲಭೂತವಾದ ಮತ್ತು ಹಿಂದೂ ಮೂಲಭೂತವಾದಗಳೆರಡಕ್ಕೂ ತಮ್ಮ ಅಸ್ತಿತ್ವಕ್ಕಾಗಿ ಒಬ್ಬರಿಗೆ ಮತ್ತೊಬ್ಬರ ಅಗತ್ಯವಿದೆ ಮತ್ತು ತಮ್ಮ ಬೆಳವಣಿಗೆಗಾಗಿ ಮತ್ತೊಬ್ಬರ ಮೇಲೆ ಅವಲಂಬಿತವಾಗಿರುತ್ತಾರೆ. ಇವೆರಡೂ ಭಾರತದ ಜಾತ್ಯಾತೀತ ಪ್ರಜಾಸತ್ತೆಯ ಗುಣವನ್ನು ಕಡೆಗಣಿಸುತ್ತವೆ.

ಈ ಹಿನ್ನೆಲೆಯಲ್ಲಿ, ಕಾರ್ಗಿಲ್ ಯುದ್ಧಾನಂತರ ಬಿಜೆಪಿ ನೇತೃತ್ವದ ಎನ್.ಡಿ.ಎ ಚುನಾವಣೆ ಎದುರಿಸುವ ಸಂದರ್ಭದಲ್ಲಿ ಇಸ್ಲಾಮಿಕ್ ಮೂಲಭೂತವಾದಿ ಸಂಸ್ಥೆಯಾದ ಲಷ್ಕರ್ -ಇ - ತೊಯಿಬಾದ ಮಾಹಿತಿ ಕಾರ್ಯದರ್ಶಿ ಹೇಳಿದ ಮಾತುಗಳಿವು : " ನಮಗೆ ಬಿಜೆಪಿ ಹೊಂದಾಣಿಕೆಯಾಗುತ್ತಿದೆ. ಒಂದೇ ವರ್ಷದಲ್ಲಿ ಅದು ನಮ್ಮನ್ನು ಅಣುಶಕ್ತಿ ಮತ್ತು ಕ್ಷಿಪಣಿ ಶಕ್ತಿಯನ್ನಾಗಿಸಿತು. ಬಿಜೆಪಿಯ ಹೇಳಿಕೆಗಳಿಂದಾಗಿ ಲಷ್ಕರ್-ಇ -ತೊಯಿಬಾಕ್ಕೆ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ಹಿಂದಿಗಿಂತ ಇದು ಅತ್ಯುತ್ತಮ. ಅವರು ಮತ್ತೊಮ್ಮೆ ಅಧಿಕಾರಕ್ಕೆ ಬರಲೆಂದು ದೇವರಲ್ಲಿ ನಾವು ಪ್ರಾರ್ಥಿಸುತ್ತೇವೆ. ಆಗ ಇಂದಿಗಿಂತಲೂ ನಾವು ಹೆಚ್ಚು ಶಕ್ತಿಶಾಲಿಯಾಗಿ ಹೊರಹೊಮ್ಮುತ್ತೇವೆ" (ಹಿಂದೂಸ್ತಾನ್ ಟೈಮ್ಸ್, ಜುಲೈ 19,1999) ಇದೊಂದು ಸಣ್ಣ ಉದಾಹರಣೆಯಷ್ಟೇ.

ಆದ್ದರಿಂದ, ಅನಾಗರೀಕ ಕೃತ್ಯಕ್ಕೆ ಕಾರಣರಾದ ಉಗ್ರಗಾಮಿಗಳನ್ನು ಪತ್ತೆಹಚ್ಚಲು ತ್ವರಿತವಾದ, ಸಮಗ್ರ ತನಿಖೆ ನಡೆಸುವ ಕಾರ್ಯವನ್ನು ಸರ್ಕಾರ ಮಾಡಬೇಕಿದೆ. ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತೆಯ ಗುಣವನ್ನು ಕೋಮುಶಕ್ತಿಗಳು ಅಪಹರಿಸಿಕೊಂಡು ಹೋಗದಂತೆ ನೋಡಿಕೊಳುವ ಗುರುತರ ಜವಾಬ್ದಾರಿ ಭಾರತೀಯ ಜನತೆಯ ಮೇಲಿದೆ. ○

ದೇವರ ಸ್ವಂತ ನಾಡಿನಲ್ಲಿ ಎಂಥಾ ಭೂತ ನೃತ್ಯ !!

'ದೇವರ ಸ್ವಂತ ನಾಡು' ಎಂದು ಕರೆಯಲಾಗುವ ಕೇರಳ ರಾಜ್ಯದಲ್ಲಿ ಸರ್ಕಾರದ ಕರಾಳ ದಬ್ಬಾಳಿಕೆಯ ಯಂತ್ರ ಜನಪರ ಚಳುವಳಿಯ ಮೇಲೆ ಮತ್ತೊಮ್ಮೆ ಎರಗಿ ಬಿದ್ದಿದೆ. ಈ ಕರಾವಳಿ ರಾಜ್ಯದ್ದಕ್ಕೂ ಈಗ ಸರ್ಕಾರಿ ಪ್ರೇರಿತ ಪೊಲೀಸರ ಭೀಕರ 'ಭೂತ ನೃತ್ಯ' ಆರಂಭವಾಗಿದೆ. ವೃತ್ತಿ ಶಿಕ್ಷಣ ಬಿಕ್ಕಟ್ಟಿನ ಪ್ರಶ್ನೆಯಲ್ಲಿ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳೊಂದಿಗೆ ಶಾಮೀಲಾಗಿರುವ ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್. ಸರ್ಕಾರದ ಶಿಕ್ಷಣ ದ್ರೋಹಿ ನೀತಿಯಿಂದಾಗಿ ಶಿಕ್ಷಣ ರಂಗದಲ್ಲಿ ಕುರುಡು ಕಾಂಚಾಣದ ಕ್ರೂರ ಅಟ್ಟಹಾಸ ಮುಗಿಲು ಮುಟ್ಟಿದೆ. ಇದಕ್ಕೆ ತೀವ್ರ ಪ್ರತಿರೋಧ ಒಡ್ಡುತ್ತಿರುವ ವಿದ್ಯಾರ್ಥಿ-ಯುವಜನ ಚಳುವಳಿಯು ಇದನ್ನು ಒಂದು ಸವಾಲಾಗಿ ಸ್ವೀಕರಿಸಿ ಎದುರಿಸಲು ತೀರ್ಮಾನಿಸಿದೆ.



ಕೇರಳದಲ್ಲಿ ಕಾಂಗ್ರೆಸ್‌ನ ಊಮ್ಮನ್ ಚಾಂಡಿ ನೇತೃತ್ವದ ಯು.ಡಿ.ಎಫ್. ಸರ್ಕಾರದ ಕ್ರೌರ್ಯ ಮೇರೆ ಮೀರಿದೆ. ವಿದ್ಯಾರ್ಥಿ-ಯುವಜನ ಚಳುವಳಿಯ ಮೇಲೆ ಘೋರ ಹಲ್ಲೆಯ ಮೂಲಕ ಅದು ತನ್ನ ನಗ್ನ ಮುಖದರ್ಶನ ಕೊಟ್ಟಿದೆ. ಜೂನ್ 4 ರಂದು ಕೇರಳದ ರಾಜಧಾನಿ ತಿರುವನಂತಪುರ ಸೇರಿದಂತೆ ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಚಳುವಳಿ ನಿರತ ವಿದ್ಯಾರ್ಥಿ ಯುವಜನರ ಮೇಲೆ ಅಮಾನುಷ ದೌರ್ಜನ್ಯ ನಡೆಸಿದೆ. ಲಾಠಿ ಪ್ರಹಾರ... ಟಿಯರ್ ಗ್ಯಾಸ್‌ಶೆಲ್ ಪ್ರಯೋಗ.... ಗ್ರೆನೇಡ್ ಧಾಳಿ... ವಾಟರ್ ಜೆಟ್ ಧಾಳಿ... ಏನಿಲ್ಲ! ಅಷ್ಟಕ್ಕೂ ವಿದ್ಯಾರ್ಥಿ-ಯುವಜನ ಚಳುವಳಿಗಾರರು ಕೇಳುತ್ತಿರುವುದಾದರೂ ಏನು? ಖಾಸಗಿ ಆಡಳಿತ ಮಂಡಳಿಗಳು ನಡೆಸುತ್ತಿರುವ ಶಿಕ್ಷಣದ ನಿರ್ದಯ-ನಗ್ನ ವ್ಯಾಪಾರ ಪ್ರವೃತ್ತಿಗೆ ತಡೆ ಹಾಕಬೇಕು. ದುಬಾರಿಯಾಗಿರುವ 'ಉಚಿತ(!) ಸೀಟು'ಗಳ ಶುಲ್ಕ ಇಳಿಸಬೇಕು. ಇವೇ ಅವರ ಬೇಡಿಕೆ. ಇದೊಂದು ಅಪರಾಧವೇ?

ಇದನ್ನು ಕೇಳದೆ ಬಿಡುವುದೇ ನಿಜಕ್ಕೂ ಅಪರಾಧ.

ಕಳೆದ ಶೈಕ್ಷಣಿಕ ವರ್ಷದಲ್ಲಿ ಸರಿ ಸುಮಾರು ಇದೇ ಸಮಯದಲ್ಲಿ ಇಡೀ ಕೇರಳ ರಾಜ್ಯ - ಕರ್ನಾಟಕ ಸೇರಿದಂತೆ ದೇಶಾದ್ಯಂತ ವಿವಿಧ ರಾಜ್ಯಗಳೂ ಪ್ರಕ್ಷುಬ್ಧಗೊಂಡಿದ್ದವು. ತಿರುವನಂತಪುರದಲ್ಲಿ ಎರಡನೇ ವರ್ಷದ ವೈದ್ಯಕೀಯ ಶುಲ್ಕಗಳನ್ನು ಕಟ್ಟಬೇಕಿದ್ದ ಪ್ರತಿಭಾನ್ವಿತ ವಿದ್ಯಾರ್ಥಿನಿಯಾದ ರಜನಿ, ಖಾಸಗಿ ಶಿಕ್ಷಣ ಸಂಸ್ಥೆಗಳು ನಿಗದಿ ಮಾಡಿರುವ ದೊಡ್ಡ ಮೊತ್ತದ ಶುಲ್ಕ ತೆರಲಾಗದೆ ಬ್ಯಾಂಕಿನ ಸಾಲಕ್ಕಾಗಿ ಅಲೆದಾಡಿದಳು. ಈ ಪ್ರಯತ್ನದಲ್ಲೂ ನಿರಾಶೆಯನ್ನೇ ಉಂಡ ಆಕೆ ಇದೇ ಕೇರಳದ ರಾಜಧಾನಿ ತಿರುವಂತಪುರದಲ್ಲಿ ಎಂಟು ಅಂತಸ್ತಿನ ಕಟ್ಟಡದ ಮೇಲೊಂದರಿಂದ ಕೆಳಕ್ಕೆ ನೆಗೆದು ಆತ್ಮಹತ್ಯೆ ಮಾಡಿಕೊಂಡಳು. ನೂತನವಾಗಿ ಮುಖ್ಯಮಂತ್ರಿಯಾಗಿರುವ ಉಮ್ಮನ್ ಚಾಂಡಿಯವರಿಗೆ ಈ ಘಟನೆಯ ಕರಾಳ ನೆನಪು ಮಾಸಿಹೋಗಿರಬಹುದು. ಆದರೆ ಕೇರಳ ಮತ್ತು ದೇಶದ ವಿದ್ಯಾರ್ಥಿ ಯುವಜನರು ಈ ಘಟನೆಯನ್ನು ಮರೆತಿಲ್ಲ.

ರಜನಿಯ ಬದುಕು ಕಂಡ ದುರಂತವನ್ನು ಮತ್ತಾರೂ ಕಾಣಬಾರದೆನ್ನುವ ಕಾಳಜಿಯೇ ಈ ಚಳುವಳಿಯ ನೇತೃತ್ವ ವಹಿಸಿರುವ ಎಸ್ಸೆಫ್ಐ ಮತ್ತು ಡಿವೈಎಫ್‌ಐ ಸಂಘಟನೆಗಳ ಆಶಯ ಮತ್ತು ಆಗ್ರಹವಾಗಿದೆ.

ಕರ್ನಾಟಕ ರಾಜ್ಯದಲ್ಲಿಇದೇ ಶಿಕ್ಷಣದ ವ್ಯಾಪಾರೀಕರಣದ ಭೂತಕ್ಕೆ ಬಲಿಯಾದ ಪ್ರತಿಭಾ-ಮಮತರ ನೆನಪು ಜನಮನದಲ್ಲಿ ಇನ್ನೂ ಹಸಿರಾಗಿದೆ. ಖಾಸಗಿ ಆಡಳಿತ ಮಂಡಳಿಗಳೊಂದಿಗೆ - ಈ ಶಿಕ್ಷಣರಂಗದ ಬಂಡವಾಳಿಗರೊಂದಿಗೆ ಶಾಮೀಲಾಗಿರುವ ಸರ್ಕಾರಗಳಿಗೆ ವಿದ್ಯಾರ್ಥಿ-ಪೋಷಕರ ಈ ಶಿಕ್ಷಣದ ಹಂಬಲ ಅರ್ಥವಾಗುವುದಾದರೂ ಹೇಗೆ.


ಎಸ್ಸೆಫ್ಐ-ಡಿವೈಎಫ್‌ಐ ಸಂಘಟನೆಗಳು ಕೇಳಿದ್ದಿಷ್ಟೆ. ಖಾಸಗಿ ಕಾಲೇಜುಗಳಲ್ಲಿ ನ್ಯಾಯಬದ್ಧವಾಗಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ದೊರೆಯಬೇಕಾದ ಉಚಿತ ಸೀಟುಗಳಿಗೆ ಸರ್ಕಾರಿ ಕಾಲೇಜುಗಳಲ್ಲಿ ಪಡೆದು ಕೊಳ್ಳುತ್ತಿರುವಷ್ಟೆ ಶುಲ್ಕವನ್ನು ನಿಗದಿಗೊಳಿಸಬೇಕು. ಉಚಿತ ಸೀಟು ಎಂದು ಕರೆಸಿಕೊಳ್ಳುವ ಸೀಟುಗಳಿಗೆ ಇದನ್ನು ಕೇಳುವುದರಲ್ಲಿ ತಪ್ಪೇನಿದೆ. ಇನ್ನೊಂದು ಬೇಡಿಕೆ, ಒಂದು ಕೇಂದ್ರೀಯ ಶಾಸನದ ಮೂಲಕ ವೃತ್ತಿ ಶಿಕ್ಷಣ ಬಿಕ್ಕಟ್ಟಿಗೆ ಶಾಶ್ವತವಾದ ಪರಿಹಾರ ಕಂಡುಕೊಳ್ಳಬೇಕೆಂಬುದು. ಇಷ್ಟಕ್ಕೇ ಸರ್ಕಾರದ ಕಣ್ಣು ಕೆಂಪಗಾಗಿದೆ. ಸರ್ಕಾರದ ಕಣ್ಣು ಕೆಂಪಗಾದರೆ ಪೊಲೀಸರ ಲಾಠಿಗಳು ರುದ್ರ ನರ್ತನಗೈಯುತ್ತವೆ. ಟಿಯರ್ ಗ್ಯಾಸ್ ಷೆಲ್‌ಗಳು ಸಿಡಿಯುತ್ತವೆ. ಗ್ರೆನೇಡ್‌ಗಳು ಬಂದು ಬಡಿಯುತ್ತವೆ. ಇದು ಜನಪರ ಹೋರಾಟಕ್ಕೆ ಸ್ಪಂದಿಸುವ ಸರಕಾರದ ನೀತಿ.

ತಿರುವನಂತಪುರದಲ್ಲಿ ಪ್ರತಿಭಟನಾ ಸ್ಥಳಕ್ಕೆ ಸಮೀಪವಿರುವ ಎ.ಕೆ.ಜಿ. ಕೇಂದ್ರ (ಸಿಪಿಐ(ಎಂ) ಪಕ್ಷದ ಕಛೇರಿ)ದ ಮೇಲೆಯೇ ಒಟ್ಟು 25 ಗ್ರೆನೇಡ್‌ಗಳನ್ನು ಪೊಲೀಸರು ಎಸೆದಿದ್ದಾರೆ. ಕೇರಳ ಸರ್ಕಾರದ ಸಚಿವಾಲಯದ ಸಮೀಪದ ಯೂನಿವರ್ಸಿಟಿ ಕಾಲೇಜ್ ಮೇಲೆ 12 ಟಿಯರ್ ಗ್ಯಾಸ್ ಷೆಲ್ ಎಸೆಯಲಾಗಿದೆ. ಇವರೇನು ಪೊಲಿಸರೋ ಇಲ್ಲಾ ಭಯೋತ್ಪಾದಕರೋ ಎಂದು ಜನ ಯೋಚಿಸುವಂತಾಗಿದೆ.

ವಿದ್ಯಾರ್ಥಿ - ಯುವಜನರ ಸಾಮೂಹಿಕ ಆಂದೋಲನ

2005, ಜುಲೈ 4ರಂದು ಕೇರಳ ರಾಜ್ಯಾದ್ಯಂತ ಸಹಸ್ರಾರು ಸಂಖ್ಯೆಯಲ್ಲಿ ವಿದ್ಯಾರ್ಥಿ-ಯುವಜನರು ಬೀದಿಗಿಳಿದರು. ರಾಜ್ಯದ ವಿವಿಧ ಭಾಗಗಳಲ್ಲಿ

ಪುಟ 12 ಕ್ಕೆ



ಪ್ರಜಾಪ್ರಭುತ್ವಕ್ಕೆ ಅಪಾಯ ಒಂದು ನಿರ್ದಿಷ್ಟ ರಾಜಕೀಯ ಪಕ್ಷದಿಂದ ಬರು... ಜನಗಳು, ಆಳುವವರ್ಗಗಳು ಹಾಗೂ ಅವುಗಳು ಜನಗಳ ಮೇಲೆ ಹೇರಬಂ... ಸಂಘರ್ಷಗಳಲ್ಲೇ ಈ ಅಪಾಯ ಅಡಗಿರುತ್ತದೆ. ಇದು 'ಆಂತರಿಕ ತುರ್ತುಪ... ದಶಕಗಳ ಅನುಭವದಿಂದ ಸ್ಪಷ್ಟವಾಗುತ್ತದೆ. 'ತುರ್ತುಪರಿಸ್ಥಿತಿ'ಯ 30ನೇ ವ... - ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು ಹಾಗೂ ಪಶ್ಚಿಮಬಂಗಾಳ ರಾ... ಅನಿಲ್‌ಬಿಸ್ವಾಸ್‌ರವರಿಂದ

ಆಂತರಿಕ ತುರ್ತುಪರಿಸ್ಥಿತಿಯ 3...

ಪ್ರಜಾಪ್ರಭುತ್ವ ಮರುಸ... ಕಮ್ಯೂನಿಸ್ಟ...

ಅನಿಲ್ ಬಿಸ್ವಾಸ್

ಜೂನ್ 26, 1975 ರಂದು ಆಂತರಿಕ ತುರ್ತುಪರಿಸ್ಥಿತಿಯ ಹೇರಿಕೆ ಹಾಗೂ ನಂತರ 19 ತಿಂಗಳ ಕಾಲ ಅದರಕಾರ್ಯಾಚರಣೆ ಭಾರತದ ಇತಿಹಾಸದ ಒಂದು ಅತ್ಯಂತ ಕರಾಳ ಅವಧಿ. ಈ ಅವಧಿಯಲ್ಲಿ ಭಾರತದ ಸಂವಿಧಾನ ಸುಮಾರಾಗಿ ಅವಸಾನತ್ತಿನಲ್ಲೇ ಇತ್ತು. ಸಂಸದೀಯ ಪ್ರಜಾಪ್ರಭುತ್ವವನ್ನು ತುಳಿದು ಹಾಕಲಾಯಿತು ಹಾಗೂ ಒಂದು ಸರ್ವಾಧಿಕಾರಶಾಹಿ ಆಳ್ವಿಕೆ ನಡೆಯಿತು. ಆ ಕೆಟ್ಟ ಘಟನೆಯ ಮೂರು ದಶಕಗಳ ನಂತರ ಪ್ರಜಾಪ್ರಭುತ್ವದ ರಕ್ಷಣೆಯ ಹೋರಾಟವನ್ನು ಮುಂದುವರೆಸುವುದರ ಮಹತ್ವವನ್ನು ಸರಿಯಾಗಿ ಅರಿಯಬೇಕಾಗಿದೆ.

'ತುರ್ತುಪರಿಸ್ಥಿತಿ'ಯ ಹೇರಿಕೆಯ ಮೊದಲಿನ ಇಡೀ ದಶಕ ವಿಪರೀತ ದಾರಿದ್ರ್ಯ ತಾಂಡವವಾಡಿದ ದಶಕ. 'ಗರೀಬಿ ಹಟಾವೋ' ದ ಘೋಷಣೆಗಳೇನೇ ಇದ್ದರೂ 70 ಶೇಕಡಾ ಕ್ಕಿಂತ ಹೆಚ್ಚಿನ ಜನ ಬಡತನದ ರೇಖೆಯ ಕೆಳಗಿದ್ದರು. ಈ ಸಂಖ್ಯೆ ಆತಂಕಕಾರಿಯಾಗಿ ಹೆಚ್ಚುತ್ತಲೇ ಇತ್ತು. 'ಹಸಿರು ಕ್ರಾಂತಿ' ಗ್ರಾಮೀಣ ಬಡವರ ಇದ್ದಬದ್ದ ಖರೀದಿ ಸಾಮರ್ಥ್ಯವನ್ನು ಕುಂಠಿತಗೊಳಿಸಿತ್ತು. ಒಂದೆಡೆ ಸೆಣಬು, ಎಣ್ಣೆ



ಕಾಳುಗಳು ಮತ್ತು ಹತ್ತಿಯ ಬೆಲೆ ಕುಸಿತ ರೈತರನ್ನು ಕಂಗಾಲು ಮಾಡಿದರೆ, ಇನ್ನೊಂದು ಕಡೆ ಕಾಳಸಂತೆಕೋರತನ ಹರಡಿತ್ತು. ಬೆಲೆಗಳಲ್ಲಿ ಶೇ. 22 ಹೆಚ್ಚಳವಾಗಿತ್ತು.

ಕೈಗಾರಿಕೆಗಳು ಆಳವಾದ ಬಿಕ್ಕಟ್ಟಿನಲ್ಲಿದ್ದವು. 1971 ರಲ್ಲಿ ಅಧಿಕಾರಕ್ಕೆ ಮರಳಿದ ಇಂದಿರಾಗಾಂಧಿ ಸುಮಾರು 3000 ಘಟಕಗಳನ್ನು ಮುಚ್ಚಿದರು. ಜೂನ್ 10-12, 1975 ರಂದು ಕಲ್ಕತ್ತೆಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆರ್ಥಿಕ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಗಮನಿಸಿತು. ಕಾರ್ಮಿಕರು, ರೈತರು, ನೌಕರರು, ಸಣ್ಣ ಉದ್ದಿಮೆಗಾರರನ್ನು ಸುಲಿದು ಗುತ್ತೇದಾರಿ ಬಂಡವಾಳಶಾಹಿಗಳು, ಭೂಮಾಲಕರ ಲೂಟಿಗಳಿಗೆ ಅವಕಾಶ ನೀಡಲಾಗಿತ್ತು.

ಈ ಆರ್ಥಿಕ ಅವ್ಯವಸ್ಥೆಯ ಹಿನ್ನೆಲೆಯಲ್ಲಿ ನಡೆದ ರಾಜಕೀಯ ಬೆಳವಣಿಗೆಗಳು 'ತುರ್ತುಪರಿಸ್ಥಿತಿ'ಗೆ ಜನ್ಮನೀಡಿದವು.

ರಾಜಕೀಯ ಹಿನ್ನೆಲೆ

ನಾಲ್ಕನೇ ಸಾರ್ವತ್ರಿಕ ಚುನಾವಣೆಗಳ ನಂತರ ಕಾಂಗ್ರೆಸ್‌ನೊಳಗೆ ತೀವ್ರ ಕಿತ್ತಾಟ ಆರಂಭವಾಯಿತು. ಎರಡು ಪ್ರವೃತಿಗಳು ಕಂಡುಬಂದವು. ಒಂದೆಡೆ 'ಸಿಂಡಿಕೇಟ್' ಕಾಂಗ್ರೆಸ್ ಜನಸಂಘ-ಸ್ವತಂತ್ರ ಪಕ್ಷದ ರಾಜಕೀಯ ಗುಂಪಿನತ್ತ ವಾಲುತ್ತಿತ್ತು. ಇನ್ನೊಂದೆಡೆ ಎಡ-ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಭಿನ್ನಾಭಿಪ್ರಾಯವಿತ್ತು. ಅವುಗಳಲ್ಲಿ ಕೆಲವು ಇಂದಿರಾ ಕಾಂಗ್ರೆಸ್ಸಿನತ್ತ ವಾಲುತ್ತಿದ್ದವು. 1972 ರಲ್ಲಿ ಮಧುರೈನಲ್ಲಿ ನಡೆದ ಪಕ್ಷದ ಮಹಾಧಿವೇಶನ ಇದನ್ನು ಗಮನಿಸಿತ್ತು. ಕೆಲವರಂತೂ ಸಿಪಿಐ(ಎಂ) ದೂಷಣೆಯಲ್ಲಿಯೂ ಸೇರಿಕೊಂಡಿದ್ದವು.

ಎಡ-ಪ್ರಜಾಪ್ರಭುತ್ವ ಶಕ್ತಿಗಳ ದೌರ್ಬಲ್ಯಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಗಳಿಸಲು ಸಾಧ್ಯವಾದ ಬೃಹತ್ ವಿಜಯ ನಂತರದ ರಾಜಕೀಯ ಬೆಳವಣಿಗೆಗಳಿಗೆ ಹಾದಿ ಮಾಡಿಕೊಟ್ಟಿತು. ಬಾಂಗ್ಲಾದೇಶದ ಘಟನೆಗಳ ಯಶಸ್ಸಿಗೆ ತಾನೇ ಕಾರಣ ಎನ್ನುತ್ತಾ 'ಸಮಾಜವಾದಿ' ಎಂಬ ಪೋಸು ಕೊಡುತ್ತಾ ಇಂದಿರಾಗಾಂಧಿ ಚುನಾವಣೆಗಳನ್ನು ಗೆಲ್ಲಲು ಹಲವಾರು ಪ್ರಜಾಪ್ರಭುತ್ವ-ವಿರೋಧಿ ತಂತ್ರಗಳನ್ನು ಅನುಸರಿಸಿದರು.

ಬಂಗಾಳದಲ್ಲಿ

ಇಲ್ಲಿ ಕಾಂಗ್ರೆಸ್ ಸಿಪಿಐ(ಎಂ), ಪ್ರಜಾಪ್ರಭುತ್ವ ಶಕ್ತಿಗಳು ಹಾಗೂ ಸಾಮೂಹಿಕ ಸಂಘಟನೆಗಳ ಮೇಲೆ ಧಾಳಿಗಳನ್ನು ನಡೆಸಿದರೂ 1971 ರ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) 113 ಸ್ಥಾನಗಳನ್ನು ಗಳಿಸಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಆದರೂ ಸಿಪಿಐ(ಎಂ) ಸರ್ಕಾರ ರಚಿಸದಂತೆ ತಡೆಯಲು ಒಂದು ತಾತ್ಕಾಲಿಕ ಕೂಟ ರಚಿಸಿ ಸಮ್ಮಿಶ್ರ ಸರ್ಕಾರವನ್ನು ಪ್ರತಿಷ್ಠಾಪಿಸಲಾಯಿತು. ಎರಡು ತಿಂಗಳ ನಂತರ ರಾಷ್ಟ್ರಪತಿ ಆಳ್ವಿಕೆ ಹೇರಿ ಬಂಗಾಳದಾದ್ಯಂತ ಅರೆಸೈನಿಕ ಪಡೆಗಳು ಮತ್ತು ಕಾಂಗ್ರೆಸ್ ಗೂಂಡಾಗಳನ್ನು ಬಳಸಿ ಭಯೋತ್ಪಾದನೆ ಹರಿಯಬಿಡಲಾಯಿತು.

ಇದಕ್ಕೆ ಸಿಪಿಐ(ಎಂ) ಪ್ರಥಮ ಗುರಿಯಾಗಿತ್ತು. 1100 ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರನ್ನು ಸಾಯಿಸಲಾಯಿತು. ಕಾರ್ಮಿಕ ಸಂಘಗಳ, ಸಾಮೂಹಿಕ ಸಂಘಟನೆಗಳ ಕಚೇರಿಗಳಿಗೆ ನುಗ್ಗಿ ಹಾಳುಗೆಡವಲಾಯಿತು, ಆಕ್ರಮಿಸಿಕೊಳ್ಳಲಾಯಿತು. ಸಾವಿರಾರು ಜನಗಳ ಮೇಲೆ ಸುಳ್ಳು ಮೊಕದ್ದಮೆಗಳು, ಇನ್ನೂ ಸಾವಿರಾರು ಜನಗಳನ್ನು ವಿಚಾರಣೆಯಿಲ್ಲದೆ ಜೈಲಿಗೆ ಹಾಕಲಾಯಿತು. ಇಂತಹ ವಾತಾವರಣದಲ್ಲಿ ಮೋಸದ ಚುನಾವಣೆಯಲ್ಲಿ 1972 ರಲ್ಲಿ ಕಾಂಗ್ರೆಸ್ 'ಗೆದ್ದಿತು'.

ಜ್ಯೋತಿಬಸುವರವರು ಈ ಬಗ್ಗೆ ಬರೆದ ಒಂದು ಕಿರು ಹೊತ್ತಗೆಯಲ್ಲಿ ಪಶ್ಚಿಮ ಬಂಗಾಳದ ಜನತೆ ಕಾಂಗ್ರೆಸ್ ನೀತಿಗಳ ವಿರುದ್ಧ ಪ್ರತಿರೋಧದಲ್ಲಿ ಮುಂಚೂಣಿಯಲ್ಲಿದ್ದರು. ಎಡ ಪ್ರಜಾಪ್ರಭುತ್ವ ಶಕ್ತಿಗಳು ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸಿಗೆ ಸವಾಲೊಡ್ಡಿದವು. ಪಶ್ಚಿಮ ಬಂಗಾಳದಲ್ಲಿ ಜನಸಮೂಹಗಳ ವಿಜಯ ಬೇರೆಡೆ ಕಾಂಗ್ರೆಸ್‌ನ ಸರ್ವಾಧಿಕಾರಶಾಹಿಯನ್ನು ಎದುರಿಸುವಲ್ಲಿ ಜನಗಳಿಗೆ ಉತ್ಸಾಹ ತುಂಬುತ್ತದೆ ಎಂದರು.

> **ಗುತ್ತೇದಾರಿ ಮತ್ತು ದೊಡ್ಡ ಬಂಡವಾಳಿಗರು, ಭೂಮಾಲಕ ಪ್ರಾಬಲ್ಯದಲ್ಲಿ ಹಾಗೂ ವಿದೇಶಿ ಗುತ್ತೇದಾರಿ ಬಂಡವಾಳದ ಹೆಚ್ಚುತ್ತಿರುವ ಪ್ರಭಾವದಲ್ಲಿ ಸರ್ವಾಧಿಕಾರಶಾಹಿಯ ಅಪಾಯ ಅಡಗಿದೆ ಎಂಬುದನ್ನು ಸಿಪಿಐ(ಎಂ)ನ ಹತ್ತನೇ ಮಹಾಧಿವೇಶನ ಗಮನಿಸಿತು. ಸರ್ವಾಧಿಕಾರಶಾಹಿಯ ವಿರುದ್ಧ ವಿಶಾಲ ಪ್ರತಿರೋಧದ ಸಾಮರ್ಥ್ಯವನ್ನು ಬಳಸಿಕೊಳ್ಳುವಾಗ ಈ ವರ್ಗಗಳ ಪ್ರಾಬಲ್ಯ ಮತ್ತು ಪ್ರಭಾವ ಕಮ್ಮಿಯಾಗುತ್ತಾ ಹೋಗುವಂತೆಯೂ ಕಾರ್ಮಿಕ ವರ್ಗ ಮತ್ತು ಸಿಪಿಐ(ಎಂ) ನೋಡಿಕೊಳ್ಳಬೇಕು ಎಂದೂ ಸಿಪಿಐ(ಎಂ) ಹೇಳಿತು.**

ಸಿಪಿಐ(ಎಂ) ಎಚ್ಚರಿಕೆ


ಸಿಪಿಐ(ಎಂ)ನ ಒಂಭತ್ತನೇ ಮಹಾಧಿವೇಶನ 1972 ರಲ್ಲೇ ಏಕ-ಪಕ್ಷ ಸರ್ವಾಧಿಕಾರಶಾಹಿಯ ಅಪಾಯದ ಬಗ್ಗೆ ಎಚ್ಚರಿಕೆ ನೀಡಿತ್ತು. ಜನಸಮೂಹಗಳಿಗೆ ಪರಿಹಾರ ಒದಗಿಸುವಲ್ಲಿ ವಿಫಲತೆ, ದಮನದ ಸಾಧನಗಳನ್ನು ಬಳಸುವ ಪ್ರವೃತ್ತಿ ಹಾಗೂ ಎಡ ಪ್ರತಿಪಕ್ಷಗಳು ಹಾಗೂ ಬೂರ್ಜ್ವಾ ಪಕ್ಷಗಳ ದೌರ್ಬಲ್ಯ ಈ ಅಪಾಯವನ್ನು ಸೂಚಿಸಿವೆ ಎಂದಿತು. ಆದರೆ ಸಿಪಿಐ(ಎಂ)ನ ಈ ಎಚ್ಚರಿಕೆಗೆ ಗಮನ ಕೊಡಲಿಲ್ಲ.

'ತುರ್ತುಪರಿಸ್ಥಿತಿ' ಯ ಮೊದಲಿನ ಅವಧಿಯಲ್ಲಿ ಹಲವುದೊಡ್ಡ ಚಳುವಳಿಗಳು ನಡೆದವು. 22 ದಿನಗಳ ರೈಲ್ವೆ ಮುಷ್ಕರವನ್ನು ಅಮಾನುಷವಾಗಿ ದಮನ ಮಾಡಲಾಯಿತು. ಇನ್ನೊಂದೆಡೆ ಜಯಪ್ರಕಾಶ ನಾರಾಯಣ ನೇತೃತ್ವದಲ್ಲಿ ಚಳುವಳಿ ಜನಗಳ ಅಗತ್ಯಗಳು, ಪ್ರಜಾಪ್ರಭುತ್ವದ ರಕ್ಷಣೆಯತ್ತ ಗಮನ ಸೆಳೆಯಿತು, ಭ್ರಷ್ಟಾಚಾರದ ವಿರುದ್ಧ ಹರಿಹಾಯಿತು.

ಬಂತು ತುರ್ತುಪರಿಸ್ಥಿತಿ

ವಿಧಾನಸಭಾ ಚುನಾವಣೆಗಳಲ್ಲಿ ಜೂನ್ 12, 1975 ರಂದು ಗುಜರಾತಿನಲ್ಲಿ ಕಾಂಗ್ರೆಸ್ ತೀವ್ರ ಪರಾಭವ ಅನುಭವಿಸಿತು. ಅದೇ ದಿನ ಅಲಹಾಬಾದ್ ಹೈಕೋರ್ಟ್ ತೀರ್ಪು ಕೂಡಾ ಬಂತು. ರಾಯ್‌ಬರೇಲಿ ಕ್ಷೇತ್ರದಲ್ಲಿ ಇಂದಿರಾಗಾಂಧಿಯವರು ಅಕ್ರಮ ಸಾಧನಗಳನ್ನು ಬಳಸಿ ಗೆದ್ದರು ಎಂದು ಹೇಳಿದ ನ್ಯಾಯಾಲಯ ಚುನಾವಣೆಯನ್ನು ರದ್ದು ಮಾಡಿ ಇಂದಿರಾ ಗಾಂಧಿಯವರು ಮುಂದಿನ ಆರು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂದು ತೀರ್ಪು ನೀಡಿತು.

ಈ ಬೆಳವಣಿಗೆ ಕಾಂಗ್ರೆಸ್‌ನೊಳಗೇ ಇಂದಿರಾಗಾಂಧಿಯವರ ವಿರುದ್ಧ ಅಲೆಯೆಬ್ಬಿಸಿತು. ಅವರು ರಾಜಿನಾಮೆ ಸಲ್ಲಿಸುವ ಬದಲು ಜೂನ್ 26, 1975 ರಂದು 'ಆಂತರಿಕ ತುರ್ತುಪರಿಸ್ಥಿತಿ' ಹೇರಿದರು. ದೇಶವನ್ನು ಬಲಪ್ರತಿಗಾಮಿ ಶಕ್ತಿಗಳು ಹಾಗೂ ಎಡ ಉಗ್ರಗಾಮಿಗಳಿಂದ ರಕ್ಷಿಸಲು ಹೀಗೆ ಮಾಡಲಾಯಿತು ಎಂದು ಜಗತ್ತನ್ನು ನಂಬಿಸಲು ಆಕೆ ಪ್ರಯತ್ನಿಸಿದರು. ಅವರ ಈ ವಾದಗಳಲ್ಲಿ ಹುರುಳಿರಲಿಲ್ಲ. ಏಕೆಂದರೆ ಆರ್‌ಎಸ್‌ಎಸ್ ಮತ್ತದರ ಸಂಸ್ಥೆಗಳನ್ನು ಆಕೆ ಹಲವು ಬಾರಿ ಹೊಗಳಿದ್ದರು. ಎಡ ಉಗ್ರಗಾಮಿಗಳಾದ ನಕ್ಸಲೀಯರು ಆಗ


ಕಮ್ಯುನಿಸ್ಟ್ ದಿಗ್ಗಜರಾದ ಇಎಂಎಸ್-ಎಕೆಜಿ

ಚದುರಿಹೋಗಿದ್ದರು. ಇವು ಸರ್ವಾಧಿಕಾರಶಾಹಿಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನಗಳಾಗಿದ್ದವಷ್ಟೆ.

ಎಡಪಕ್ಷಗಳ ನಡುವೆ ಇನ್ನೂ ಅನೈಕ್ಯತೆ ಇತ್ತು. ಸಿಪಿಐ ಇಂದಿರಾಗಾಂಧಿಯ ಹಿಂದೆ ಹೋಯಿತು. ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ ಮತ್ತು ಕೆಲವು ಸಮಾಜವಾದಿ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಬಹಿರಂಗವಾಗಿ ಇಂದಿರಾಗಾಂಧಿಯವರನ್ನು ಬೆಂಬಲಿಸಿದವು. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಒಂದು ವಿಶಾಲ ರಂಗಕ್ಕೆ ಕರೆನೀಡುತ್ತಲೇ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಹೆಚ್ಚಿನ, ಬಲಯುತ ಐಕ್ಯತೆಗೆ ನಿರಂತರವಾಗಿ ಶ್ರಮಿಸಬೇಕು ಎಂದು ಘೋಷಿಸಿದರು.

ಎ.ಕೆ.ಜಿ. ಭಾಷಣ



ಸಿಪಿಐ(ಎಂ) ಸಂಸದೀಯ ಪಕ್ಷದ ಮುಖಂಡ ಎ.ಕೆ.ಗೋಪಾಲನ್ ಲೋಕಸಭೆಯಲ್ಲಿ ಜುಲೈ 21, 1975 ರಂದು 'ತುರ್ತುಪರಿಸ್ಥಿತಿ' ಯ ಮಂಜೂರಾತಿಗೆ ಮಸೂದೆ ಮಂಡಿಸಿದಾಗ ಅದರ ಮೇಲೆ ಮಾಡಿದ ಭಾಷಣದಲ್ಲಿ 'ತುರ್ತುಪರಿಸ್ಥಿತಿ'ಯನ್ನು ಕಠೋರವಾಗಿ ಖಂಡಿಸಿದರು. ಅವರು ಎತ್ತಿದ ವಿಷಯಗಳು ಹೀಗಿದ್ದವು -

- ದೊಡ್ಡ ಸಂಖ್ಯೆಯಲ್ಲಿ ಪ್ರತಿಪಕ್ಷಗಳ ಮುಖಂಡರು ಜೈಲಿನಲ್ಲಿದ್ದಾರೆ. 39 ಸಂಸತ್‌ಸದಸ್ಯರೂ ಜೈಲಿನಲ್ಲಿದ್ದಾರೆ. ಅವರಲ್ಲಿ ಬಹಳ ಮಂದಿ ಕಾಂಗ್ರೆಸ್ಸಿಗರು.
- 'ತುರ್ತುಪರಿಸ್ಥಿತಿ' ಜನಗಳ ಮೇಲಿನ ಒಂದು ಪ್ರಹಾರ. ಜನಗಳನ್ನು ಪ್ರಜಾಪ್ರಭುತ್ವದ ಅವರ ಹಕ್ಕುಗಳಿಂದ ವಂಚಿಸಲಾಗಿದೆ.
- ಕೇಂದ್ರ ಸರ್ಕಾರ ಪ್ರತಿಪಕ್ಷಗಳನ್ನು ಸಹಿಸಿಕೊಳ್ಳುತ್ತಿಲ್ಲ, ಟೀಕೆಯನ್ನು ಸಹಿಸುತ್ತಿಲ್ಲ; ಆಂದೋಲನಗಳನ್ನು, ಹೋರಾಟಗಳನ್ನು ಹತ್ತಿಕ್ಕುತ್ತಿದೆ.
- ಮೂರು ಸಾವಿರ ಸಿಪಿಐ(ಎಂ) ಕಾರ್ಯಕರ್ತರನ್ನು ಬಲಪಂಥ-ವಿರೋಧಿ ಆಂದೋಲನದ ಹೆಸರಿನಲ್ಲಿ ಬಂಧಿಸಲಾಗಿದೆ.

'ತುರ್ತುಪರಿಸ್ಥಿತಿ'ಯ ಒಟ್ಟಾರೆ ಪರಿಣಾಮಗಳು ಹೀಗಿದ್ದವು :

- ಸಂಸತ್ತನ್ನು ಎಲ್ಲಾ ಹಕ್ಕುಗಳು, ವಿಶೇಷಾಧಿಕಾರಗಳಿಂದ ವಂಚಿಸಲಾಯಿತು.
- ವಾಕ್ ಸ್ವಾತಂತ್ರ್ಯ ಅಮಾನತುಗೊಂಡಿತು.
- ಮಾಧ್ಯಮದ ಸೆನ್ಸಾರ್ ಶಿಪ್ ಭಯಾನಕ ಪ್ರಮಾಣ ತಲುಪಿತು.
- ಸಾವಿರಾರು ರಾಜಕೀಯ ಕಾರ್ಯಕರ್ತರನ್ನು, ಸಂಸದರು, ಶಾಸಕರನ್ನು ಕೂಡಾ ಬಂಧಿಸಲಾಯಿತು.
- ಪ್ರತಿಪಕ್ಷಗಳು ನಡೆಸುತ್ತಿದ್ದ ಸ್ವಾಯತ್ತ ಸಂಸ್ಥೆಗಳನ್ನು ಬದಿಗೊತ್ತಲಾಯಿತು.
- ಜನಸಂಖ್ಯಾ ಹತೋಟಿ ಕ್ರಮಗಳ ಹೆಸರಿನಲ್ಲಿ

ಯೋಚಿಸುವುದು ಸರಿಯಲ್ಲ.
ರ್ಥಿಕ ನೀತಿಗಳ
ಗೂ ನಂತರದ ಮೂರು
ದರ್ಭದಲ್ಲಿ ಒಂದು ಹಿನ್ನೋಟ
ದರ್ಶಿಗಳಾದ ಕಾಂ.

ಾ ವಾರ್ಷಿಕ

ಚನೆಯಲ್ಲಿ ಪಾತ್ರ

ಜನಗಳ ಮೇಲೆ ದಮನ ಹರಿಯಬಿಡಲಾಯಿತು. 42ನೇ ತಿದ್ದುಪಡಿಯ ಮೂಲಕ ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳನ್ನು ತೆಗದುಹಾಕುವ ಪ್ರಯತ್ನ ನಡೆಯಿತು.
ಕಾಂಗ್ರೆಸ್ ಮತ್ತು ಯುವಕಾಂಗ್ರೆಸ್‌ನ ಗಲಭೆಕೋರರು ದೇಶದಲ್ಲಿ ಭಯೋತ್ಪಾದನೆಯ ವಾತಾವರಣ ಸೃಷ್ಟಿಸಿದರು.

ತಿರೋಧ

ಸರ್ವಾಧಿಕಾರಶಾಹಿಗೆ ವಿರೋಧವಾಗಿ ಪ್ರತಿರೋಧದ ಎರಡು ಪ್ರವಾಹಗಳಿದ್ದವು. ಸಿಪಿಐ(ಎಂ) ಮತ್ತು ಎಡಪಕ್ಷಗಳು ಸಹಜವಾಗಿ ವಿರೋಧಿಸಿದವು. ಕೇರಳ, ತ್ರಿಪುರಾಗಳಲ್ಲಿ, ಬಂಗಾಳದಲ್ಲಿ ಅವರು ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಇನ್ನೊಂದೆಡೆ ಬಲಪಂಥೀಯ ಪಕ್ಷಗಳು ಕಾಂಗ್ರೆಸ್(ಒ), ಜನಸಂಘ ತ್ತು ಸ್ವತಂತ್ರ ಪಾರ್ಟಿ ಜಾಪ್ರಭುತ್ವದ ವಿಷಯವಾಗಿ ಳ ಮಾತಾಡಿದವು. ಯಪ್ರಕಾಶ ನಾರಾಯಣ ತೃತ್ವದಲ್ಲಿ ಈ ಆಂದೋಲನದ ಷ್ಟೆ ಉತ್ತರ ಮತ್ತು ಪಶ್ಚಿಮ ಗಗಳಲ್ಲಿ ಹೆಚ್ಚಿತು. ಸಿಪಿಐ(ಎಂ) ತ್ತು ಎಡಪಕ್ಷಗಳು ದಿಲ್ಲಿ ಮತ್ತು ಲ್ಕತ್ತದಲ್ಲಿ ಜಯಪ್ರಕಾಶ ರಾಯಣರನ್ನು ಭೇಟಿ ಮಾಡಿ ಗರಿಕ ಹಕ್ಕುಗಳ ಮೇಲೆ ಟಿಯಾಗಿ, ಸಮಾಂತರವಾಗಿ ಗೂ ಸಂಯೋಜಿತ ದೋಲನಗಳನ್ನು ನಡೆಸಬೇಕು ದು ಪ್ರಸ್ತಾಪವನ್ನಿಟ್ಟವು.

ಈ ನಡುವೆ ಸಿಪಿಐ(ಎಂ) ಕೇಂದ್ರ ಸಮಿತಿ ಎಲ್ಲಾ ಜಕೀಯ ಪಕ್ಷಗಳ ಪ್ರತಿಷ್ಠಿತ ಗಳನ್ನೊಳಗೊಂಡ ಒಂದು ವಿಶಾಲ ರಂಗದ ನೆಯಾಗಬೇಕು ಎಂದು ಕರೆ ನೀಡಿತು. ಲವಾಗಿ ಶಕ್ತಿಗಳನ್ನು ಒಟ್ಟುಗೂಡಿಸಬೇಕು, ಪಕ್ಷಗಳ ಬೆಂಬಲಿಗರ 'ಕೆಳಗಿನಿಂದ ಯುಕ್ತರಂಗ' ದ ಕಾರ್ಯತಂತ್ರವನ್ನು ಸರಿಸಬೇಕು ಎಂದು ಕರೆ ನೀಡಿತು. ಎಡ ಮತ್ತು ಾಪ್ರಭುತ್ವ ಶಕ್ತಿಗಳು ವಿವಿಧ ಶಕ್ತಿಗಳ ವಿಶಾಲ ದ ಪ್ರಧಾನ ಸಾಧನಗಳಾಗಿ ಕೆಲಸ ಮಾಡುತ್ತವೆ ಹೇಳಲಾಯಿತು. ಆದರೆ ಇದು ಒಂದು ಕೀಯ ಪಕ್ಷದ ಅಥವಾ ಚುನಾವಣಾ ರಂಗದ ನೆಯನ್ನು ಬಿಂಬಿಸುವುದಿಲ್ಲ ಎಂದೂ ಲಾಯಿತು.
ಈ ತಿಳುವಳಿಕೆಯ ಆಧಾರದಲ್ಲಿ

ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಟ ದೇಶಾದ್ಯಂತ ಬೆಳೆಯಿತು. ಅದು ನೇರ, ಪರೋಕ್ಷ ಸ್ವರೂಪ ಪಡೆಯಿತು. ಪ್ರಜಾಪ್ರಭುತ್ವದ ಮರು ಸ್ಥಾಪನೆಯ ಈ ಆಂದೋಲನದಲ್ಲಿ ಕಾರ್ಮಿಕ ವರ್ಗ ದೊಡ್ಡ ಪಾತ್ರವನ್ನು ವಹಿಸಿತು. ನಿಷೇಧಗಳನ್ನು ಲೆಕ್ಕಿಸದೆ ಈ ಆಂದೋಲನ ನಡೆಯಿತು. ಇನ್ನೊಂದೆಡೆ ಕಾಂಗ್ರೆಸ್(ಒ), ಜನಸಂಘ ಮತ್ತು ಸ್ವತಂತ್ರ ಪಾರ್ಟಿ ಮತ್ತು ಸಮಾಜವಾದಿ ಪಕ್ಷಗಳು ಒಟ್ಟು ಸೇರಿ 'ಜನತಾಪಾರ್ಟಿ' ರಚಿಸಿದವು. ಜನತಾ ಪಕ್ಷದ ಕಾರ್ಯಕ್ರಮ, ತಿಳುವಳಿಕೆಯ ಬಗ್ಗೆ ಸಿಪಿಐ(ಎಂ)ಗೆ ಭ್ರಮೆಗಳೇನೂ ಇರಲಿಲ್ಲ. ಅದು 'ತುರ್ತುಪರಿಸ್ಥಿತಿ'ಯ ವಿರುದ್ಧ ಅತಿಹೆಚ್ಚು ಮತ ಬೀಳಬೇಕು ಎಂದು ಮತ್ತು ಪ್ರತಿಪಕ್ಷಗಳ ಐಕ್ಯತೆಗೆ ಭಾದಕ ಬಾರದಂತೆ ಮಾಡಲು ಪ್ರಯತ್ನಗಳನ್ನು ನಡೆಸಿತು. 'ತುರ್ತುಪರಿಸ್ಥಿತಿ'ಯ ವಿರುದ್ಧ ಮತ ನೀಡಿ ಎಂಬುದು ಸಿಪಿಐ(ಎಂ)ನ ಚುನಾವಣಾ ಘೋಷಣೆಯಾಗಿತ್ತು. 1977 ರ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಸೋತಿತು. ಹೊಸ ಜನತಾಪಕ್ಷ ಮತ್ತು ಸಿಎಫ್‌ಡಿ(ಕಾಂಗ್ರೆಸ್ ಫಾರ್ ಡೆಮಾಕ್ರಸಿ) ಪಕ್ಷದ ಸರ್ಕಾರ ಬಂದು ತುರ್ತುಪರಿಸ್ಥಿತಿಯನ್ನು ಹಿಂತೆಗೆದುಕೊಂಡಿತು. ಆದರೆ ಹೋರಾಟ ಅಲ್ಲಿಗೆ ನಿಲ್ಲಲಿಲ್ಲ.

ಮುಂದುವರೆದ ಹೋರಾಟ

ತುರ್ತುಪರಿಸ್ಥಿತಿ ವಜಾ ಮಾಡಿದ ಪ್ರಜಾಪ್ರಭುತ್ವ ಹಕ್ಕುಗಳ ಮರು ಸ್ಥಾಪನೆ ಕೂಡಲೇ ನಡೆಯಲಿಲ್ಲ. ಸಿಪಿಐ(ಎಂ) ಮತ್ತು ಎಡಪಕ್ಷಗಳ ನೇತೃತ್ವದ, ಅವು ಸಂಘಟಿಸಿದ ಆಂದೋಲನಗಳ ಸತತ ಒತ್ತಡದಿಂದ ಅದು ಕ್ರಮೇಣ ನಡೆಯಿತಷ್ಟೆ. ಮಿಸಾ ಮತ್ತು 42 ನೇ ಸಂವಿಧಾನ ತಿದ್ದುಪಡಿಯನ್ನು ವಾಪಾಸು ಪಡೆಯಲು ಕೂಡಾ ಹೊಸ ಸರ್ಕಾರ ಹಿಂದೇಟು ಹಾಕಿತು. ಸಿಪಿಐ(ಎಂ) ಮತ್ತು ಎಡಪಕ್ಷಗಳ ಒತ್ತಡದಿಂದಷ್ಟೇ ಕೇಂದ್ರ ಸರ್ಕಾರ ಅವನ್ನು ಕೈಗೆತ್ತಿಕೊಂಡಿತು.

ಸರ್ವಾಧಿಕಾರಶಾಹಿಯನ್ನು ಹೇರುವ ಪರೋಕ್ಷ ಪ್ರಯತ್ನಗಳ ವಿರುದ್ಧ ಹೋರಾಟ ದೀರ್ಘಕಾಲದ್ದು, ಸತತವಾಗಿ ನಡೆಯಬೇಕಾದ್ದು ಎಂದುಸಿಪಿಐ(ಎಂ)ನ ಹತ್ತನೇ ಮಹಾಧಿವೇಶನ ಹೇಳಿದ್ದು ಸರಿಯಾಗಿತ್ತು. ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಸೋಲೆಂದರೆ



ಸರ್ವಾಧಿಕಾರಶಾಹಿಯ ವಾತಾವರಣ ಸೃಷ್ಟಿಸಿದ ವರ್ಗಗಳ ಸೋಲು ಎಂದೇನೂ ಆಗಿರಲಿಲ್ಲ. ವರ್ಗಗಳ ಬಲಾಬಲ ಬದಲಾಗಿರಲಿಲ್ಲ. ಸರ್ವಾಧಿಕಾರಶಾಹಿ ರಚನೆಯನ್ನು ತೆಗೆದುಹಾಕುವ ಪ್ರಶ್ನೆಯ ಮೇಲೆ ಸಂಸದೀಯ ರಾಜಿಯ ಅಪಾಯ ಮುಂದುವರೆದೇ ಇತ್ತು. ಸರ್ವಾಧಿಕಾರಶಾಹಿಯ ವಿರುದ್ಧ ಜನಸಮೂಹಗಳನ್ನು ಒಂದುಗೂಡಿಸುವುದು ಆಗಿನ ಅಗತ್ಯ ಎಂದು ಸಿಪಿಐ(ಎಂ) ಹೇಳಿತು.

ವಿಶಾಲ ವೇದಿಕೆ ಮತ್ತು ಪ್ರಜಾಸತ್ತಾತ್ಮಕ ಪ್ರತಿರೋಧದ ಮಹತ್ವವನ್ನು ಅರಿತ ಸಿಪಿಐ(ಎಂ) ಬೂರ್ಜ್ವಾ ಪಕ್ಷಗಳಲ್ಲಿನ ಭಿನ್ನಾಭಿಪ್ರಾಯಗಳಿಂದಾಗಿ ಉಂಟಾಗಿರುವ ಅವಕಾಶವನ್ನು ಒಂದು ವಿಶಾಲ ವೇದಿಕೆ ರಚಿಸಿ ಸರ್ವಾಧಿಕಾರಶಾಹಿ ರಚನೆಯನ್ನು ಮುರಿದುಹಾಕುವತ್ತ ಬಳಸಬೇಕು ಎಂದು ಹೇಳಿತು. ಸರ್ವಾಧಿಕಾರಶಾಹಿಯನ್ನು ವಿರೋಧಿಸುವ ಶಕ್ತಿಗಳನ್ನು ಆಳುವ ವರ್ಗಗಳು ಮತ್ತು ಆಳುವ ವರ್ಗಗಳ ಪಕ್ಷಗಳಿಂದ ಹೊರತರುವ ಅಗತ್ಯ ಕಂಡುಬಂತು. ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಯಾವುದೇ ವರ್ಗ ಅಥವಾ ಪಕ್ಷವನ್ನು ಅಣಿನೆರೆಸುವುದು ಮಾರ್ಕ್ಸ್‌ವಾದಿ ಕಾರ್ಯತಂತ್ರವಾಗಿತ್ತು.

ಗುತ್ತೇದಾರಿ ಮತ್ತು ದೊಡ್ಡ ಬಂಡವಾಳಿಗರು, ಭೂಮಾಲಕ ಪ್ರಾಬಲ್ಯದಲ್ಲಿ ಹಾಗೂ ವಿದೇಶಿ ಗುತ್ತೇದಾರಿ ಬಂಡವಾಳದ ಹೆಚ್ಚುತ್ತಿರುವ ಪ್ರಭಾವದಲ್ಲಿ ಸರ್ವಾಧಿಕಾರಶಾಹಿಯ ಅಪಾಯ ಅಡಗಿದೆ ಎಂಬುದನ್ನು ಸಿಪಿಐ(ಎಂ)ನ ಹತ್ತನೇ ಮಹಾಧಿವೇಶನ ಗಮನಿಸಿತು. ಸರ್ವಾಧಿಕಾರಶಾಹಿಯ ವಿರುದ್ಧ ವಿಶಾಲ ಪ್ರತಿರೋಧದ ಸಾಮರ್ಥ್ಯವನ್ನು ಬಳಸಿಕೊಳ್ಳುವಾಗ ಈ ವರ್ಗಗಳ ಪ್ರಾಬಲ್ಯ ಮತ್ತು ಪ್ರಭಾವ ಕಮ್ಮಿಯಾಗುತ್ತಾ ಹೋಗುವಂತೆಯೂ ಕಾರ್ಮಿಕ ವರ್ಗ ಮತ್ತು ಸಿಪಿಐ(ಎಂ) ನೋಡಿಕೊಳ್ಳಬೇಕು ಎಂದೂ ಸಿಪಿಐ(ಎಂ) ಹೇಳಿತು.

ವರ್ಗ ಶಕ್ತಿಗಳ ಬಲಾಬಲಗಳನ್ನು ಬದಲಿಸಲು ಹಾಗೂ ಎರಡು ಬೂರ್ಜ್ವಾ-ಭೂಮಾಲಕ ರಚನೆಗಳಿಂದ ಜನಗಳನ್ನು ಮುಕ್ತಗೊಳಿಸಲು ಒಂದು ಎಡ ಹಾಗೂ ಪ್ರಜಾಸತ್ತಾತ್ಮಕ ರಂಗವನ್ನು ಕಟ್ಟುವುದು ಅಗತ್ಯವಾಗಿತ್ತು. ಸರ್ವಾಧಿಕಾರಶಾಹಿಯ ವಿರುದ್ಧ ಎಡಬಿಡದೆ ಹೋರಾಟವನ್ನು ಮುಂದುವರೆಸಲು ಈ ರಂಗ ಆದ್ಯತೆ ನೀಡಬೇಕಾಗಿತ್ತು. ಪ್ರಜಾಪ್ರಭುತ್ವದ ಕುರಿತು ಜನತಾ ಪಾರ್ಟಿ - ಸಿಎಫ್‌ಡಿ ಸರ್ಕಾರ ಹಾಗೂ ಎಡಪಕ್ಷಗಳ ನಡುವೆ ದೊಡ್ಡ ಸಾಗೂ

ಕರ್ನಾಟಕದಲ್ಲಿ ತುರ್ತುಪರಿಸ್ಥಿತಿ.....

ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾದಾಗ ಅಂದು ಪಕ್ಷದ ಮತ್ತು ಕಾರ್ಮಿಕ ಚಳುವಳಿ ಮುಖಂಡರಾಗಿದ್ದ ಕಾಂ.ಸೂರಿಯವರು ಆಗಿನ ಸಿಐಟಿಯುವಿನ ಅಖಿಲಭಾರತ ಕಾರ್ಯದರ್ಶಿಗಳಾಗಿದ್ದ ಕಾಂ.ಸಮರ್ ಮುಖರ್ಜಿಯವರೊಂದಿಗೆ ಕೆಜಿಎಫ್‌ನಲ್ಲಿದ್ದರು. ಕಾಂ.ಸೂರಿಯವರು ಆಗ ಕೆಜಿಎಫ್‌ನ ಬಿಜಿಎಂಎಲ್ ಕಾರ್ಮಿಕ ಸಂಘದ ಅಧ್ಯಕ್ಷರೂ ಆಗಿದ್ದರು. ಸುದ್ದಿ ತಿಳಿದ ಕೂಡಲೇ ಭೂಗತರಾಗುವ ಕುರಿತು ಚಿಂತಿಸಲಾಯಿತಾದರೂ



ಕಾಂ. ಸೂರಿ

ಕಾರ್ಯತಂತ್ರ ಬದಲಿಸಿ ಕಾರ್ಮಿಕ ಜನಪರ ಚಳುವಳಿಯನ್ನು ತೀವ್ರಗೊಳಿಸಲು ಯೋಜಿಸಲಾಯಿತು.

ರಾಜ್ಯದ ವಿವಿಧ ಭಾಗಗಳಲ್ಲಿ ಹಲವು ಕಾರ್ಮಿಕ ಚಳುವಳಿಗಳು ನಡೆಯುತ್ತಿದ್ದ ಸಮಯ ಅದು. ಬೆಂಗಳೂರಿನಲ್ಲಿ ರೊರಿಚ್ ಮಾಲಿಕತ್ವದ ತಾತಗುಣಿ ಎಸ್ಟೇಟ್ ಕಾರ್ಮಿಕರ ಶೋಷಣೆಯ ವಿರುದ್ಧ ಅವರನ್ನು ಸಂಘಟಿಸಿ ಕಾಂ.ಪಿ.ಜಗನ್ನಾಥ್‌ರವರು ನಾಯಕತ್ವ ನೀಡುತ್ತಿದ್ದರು. ರೋರಿಚ್-ದೇವಿಕಾರಾಣಿ ದಂಪತಿಗಳು ಅಂತರರಾಷ್ಟ್ರೀಯ ಖ್ಯಾತಿಯ ಕಲಾವಿದರಾದರೂ ತಮ್ಮ ತೋಟದಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಟ ವೇತನ ಕೊಡುವ ಮಾನವೀಯತೆಯೂ ಅವರಿಗಿರಲಿಲ್ಲ. ಅತ್ಯಂತ ಬೆಲೆ ಬಾಳುವ ಸುಗಂಧ ಸಸ್ಯಗಳನ್ನು ಬೆಳೆದು ವಿದೇಶಿ ಮಾರುಕಟ್ಟೆಯಲ್ಲಿ ಮಾರಿ ಅಪಾರ ಪ್ರಮಾಣದ ಲಾಭ ಮಾಡಿಕೊಳ್ಳುತ್ತಿದ್ದರೂ ಸಹ ಕಾರ್ಮಿಕರ ಬದುಕು ನಿಕೃಷ್ಟವಾಗಿತ್ತು.


ತುರ್ತು ಪರಿಸ್ಥಿತಿ ಇದ್ದಾಗಲೂ ತಾತಗುಣಿ ಎಸ್ಟೇಟ್ ಕಾರ್ಮಿಕರು ಎದೆಗುಂದಲಿಲ್ಲ. ಚಳುವಳಿ ಮುಂದುವರಿಸಿದರು. ಕಾಂ.ಸೂರಿಯವರೂ ಚಳುವಳಿಯ ಬೆಂಬಲಕ್ಕೆ ನಿಂತರು. ಚಳುವಳಿ ತೀವ್ರ ಸ್ವರೂಪ ಪಡೆದು ಬೆಂಗಳೂರಿನ ಹಾಗೂ ರಾಜ್ಯದ ಜನರ ಗಮನ ಸೆಳೆಯಿತು.

ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಮತ್ತು ರೋರಿಚ್‌ರವರು ಪರಸ್ಪರ ತುಂಬಾ ಆತ್ಮೀಯವಾಗಿದ್ದರು. ಹೀಗಾಗಿ ಅವರು ಕೇಂದ್ರದ ಮೇಲೆಯೂ ಪ್ರಭಾವ ಬೀರಿದ್ದರಿಂದ ಕಾಂ. ಸೂರಿಯವರನ್ನು ಬಂಧಿಸಲಾಯಿತು. ಸುಮಾರು ಒಂಬತ್ತು ತಿಂಗಳು ಕಾಲ ಕಾಂ.ಸೂರಿಯವರು ಬಂಧನದಲ್ಲಿದ್ದರು.

ಕಾಂ. ಪಿ.ಜಗನ್ನಾಥ್‌ರವರನ್ನು ಬಂಧಿಸಿದ ರೀತಿ ಮತ್ತೊಂದು ಬಗೆಯದು. ಒಂದು ದಿನ ಕಾಂ.ಜಗನ್ನಾಥ್ ಆಗ ಬೆಂಗಳೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್.ಪಿ) ಯಾಗಿದ್ದ ವಿಜಯ ಸಾಸನೂರ್‌ರನ್ನು ಭೇಟಿ ಮಾಡಲು ಠಾಣೆಗೆ ಹೋಗಿ ಗಂಟೆಗಟ್ಟಲೆ ಕಾದರೂ ಸಾಸನೂರರ ಸುಳಿವೇ ಇಲ್ಲ. ಏನೋ ಚರ್ಚಿಸುವ ಸಲುವಾಗಿ ಕರೆದಿದ್ದಾರೆ ಎಂದು ಕಾದ ಕಾಂ.ಜಗನ್ನಾಥರಿಗೆ ನಂತರ ಠಾಣೆಯ ಸಿಬ್ಬಂದಿ 'ಡಿಫೆನ್ಸ್ ಆಫ್ ಇಂಡಿಯಾ' ಕಾನೂನಿನಡಿ ಬಂಧಿಸಿರುವುದಾಗಿ ತಿಳಿಸಿ, ಅವರನ್ನು ತತ್‌ಕ್ಷಣವೇ ಬಳ್ಳಾರಿ ಜೈಲಿಗೆ ಕರೆದುಕೊಂಡು ಹೋದರು.

ಒಟ್ಟು ಕಾರ್ಮಿಕರು ರೈತರು ಪರವಾಗಿ ಜನಪರವಾಗಿ ದನಿ ಎತ್ತಲು ಮತ್ತು ಯಾರಿಗೂ ಅವಕಾಶ ನೀಡುವುದಿಲ್ಲ ಎಂಬುದೇ ರಾಜ್ಯದಲ್ಲಿಯೂ ದೇವರಾಜ್ ಅರಸು ಸರ್ಕಾರವೂ ಅನುಸರಿಸಿದ ನೀತಿಯಾಗಿತ್ತು.


ಇದು ಬೆಂಗಳೂರಿನ ಕತೆಯಾದರೆ ಅತ್ತ ಕರಾವಳಿಯ ಮಂಗಳೂರಿನಲ್ಲಿ ಸಿಪಿಐ(ಎಂ) ಮುಖಂಡರಾದ ಕಾಂ.ಬಿ.ಮಾಧವರವರ ಮನೆಗೆ ದಿಡೀರನೆ ನುಗ್ಗಿದ ಪೊಲೀಸರು ಕಾಗದ ಪತ್ರ ಪುಸ್ತಕ ಎಲ್ಲವನ್ನು ಕಿತ್ತೆಸೆದರು, ಚೆಲ್ಲಾಪಿಲ್ಲಿ ಮಾಡಿದರು. ಮನೆಯನ್ನೆಲ್ಲಾ ಶೋಧಿಸಿದರು. ಕೊನೆಗೆ ಅವರಿಗೆ ಬೇಕಾಗಿದ್ದ ವಸ್ತುವನ್ನು ವಶಕ್ಕೆ ತೆಗೆದುಕೊಂಡರು. ಅದು ಕೇರಳದ ಅರ್ಥಶಾಸ್ತ್ರಜ್ಞ ಕೆ.ಎನ್.ರಾಜ್, ತುರ್ತು ಪರಿಸ್ಥಿತಿಗೆ ಮೊದಲೇ ಬರೆದಿದ್ದ 'ಭಾರತದ ಅರ್ಥಪರಿಸ್ಥಿತಿಯ ವಿಶ್ಲೇಷಣಾತ್ಮಕ ಪ್ರಬಂಧ'!



ಕಾಂ. ವಿಜೆಕೆ

ಇಂಥ ಹಾಸ್ಯಾಸ್ಪದ ಕಾರಣ ನೀಡಿ ಸೆಕ್ಷನ್ 107ರ ಅಡಿಯಲ್ಲಿ ಕಾಂ.ಬಿ.ಮಾಧವರನ್ನು ಬಂಧಿಸಲಾಯಿತು.

ತುರ್ತುಪರಿಸ್ಥಿತಿಯ ಕರಾಳ ದಬ್ಬಾಳಿಕೆಯನ್ನು ವಿರೋಧಿಸಿ ಅಂದು ವಿರೋಧ ಪಕ್ಷದ ಮುಖಂಡರಾಗಿದ್ದ ಕಾಂ. ಎ.ಕೆ.ಗೋಪಾಲನ್ ಅವರು ಮಾಡಿದ ಐತಿಹಾಸಿಕ ಭಾಷಣವನ್ನು ಕನ್ನಡದಲ್ಲಿ ಮುದ್ರಿಸಿ, ಎಲ್ಲಾ ನಿಷೇಧ-ನಿರ್ಬಂಧಗಳನ್ನು ಮೀರಿ ಜನತೆಯ ನಡುವೆ ಹಂಚುವ - ಕಾರ್ಮಿಕರನ್ನು, ಜನರನ್ನು ಸಂಘಟಿಸಿ ತುರ್ತುಪರಿಸ್ಥಿತಿಯನ್ನು ವಿರೋಧಿಸುವ ದಿಟ್ಟ ಕ್ರಮಕ್ಕೆ ಮುಂದಾಗಿದ್ದ ಸಿಪಿಐ(ಎಂ) ಪಕ್ಷದ ಹಾಗೂ ಸಿಐಟಿಯುನ ರಾಜ್ಯ ಮುಖಂಡರಾಗಿದ್ದ ಕಾಂ. ವಿ.ಜೆ.ಕೆ.ನಾಯರ್‌ರವರನ್ನು ಬಂಧಿಸಿ ಜೈಲಿಗೆ ತಳ್ಳಲಾಯಿತು. ○



ಭುಗಿಲೇಳುತ್ತಿರುವ ಟಯೋಟ ಕಾರ್ಮಿಕರ ಹೋರಾಟ

ಬೆಂಗಳೂರಿನ ಮೈಸೂರು ರಸ್ತೆ ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ಜಪಾನಿ ಬಹುರಾಷ್ಟ್ರೀಯ ಕಂಪನಿ ಟಯೋಟ-ಕಿರ್ಲೋಸ್ಕರ್‌ನ ಕಾರ್ಮಿಕ ವರ್ಗ ಐತಿಹಾಸಿಕ ಎನ್ನಬಹುದಾದ ಹೋರಾಟವೊಂದಕ್ಕೆ ಸಜ್ಜಾಗುತ್ತಿದೆ. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ನ ಕೆಂಬಾವುಟದಡಿ ಒಂದಾಗಿರುವ ಈ ಕಾರ್ಮಿಕ ವರ್ಗವು ಮಾಲೀಕ ವರ್ಗ ತನ್ನ ಮೇಲೆ ಹೇರಿರುವ ಅಸಹನೀಯ ಅಮಾನವೀಯ ಶೋಷಣೆಯ ವಿರುದ್ಧ ಸೆಟೆದೆದ್ದು ನಿಂತಿದೆ. ಬೆಂಗಳೂರಿನ ಇತರ ಬಹುರಾಷ್ಟ್ರೀಯ ಕಂಪನಿಗಳ ಹಾಗೂ ಸ್ಥಳೀಯ ಕೈಗಾರಿಕಾ ಕಾರ್ಮಿಕವರ್ಗ, ನೌಕರರು, ಒಟ್ಟಾರೆ ದುಡಿಯುವ ವರ್ಗವು ಈ ಕಾರ್ಖಾನೆಯ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ನಿಂತಿರುವುದು ಅವರ ಹೋರಾಟಕ್ಕೆ ಮತ್ತಷ್ಟು ಸ್ಫೂರ್ತಿ ತಂದಿದೆ. ಈ ಹಿನ್ನೆಲೆಯಲ್ಲಿ ನಡೆದ ಸೌಹಾರ್ದ ಸಮಾವೇಶದ ವರದಿ ಇಲ್ಲಿದೆ.

ಹನುಮಂತರಾವ್ ಹವಲ್ದಾರ್

ಅಪಾರ ಕೆಲಸದ ಹೊರೆ ಮತ್ತು ಒತ್ತಡದಲ್ಲಿ ದುಡಿಯುವ ಈ ಕಾರ್ಮಿಕರ ಬೆನ್ನು ಲಟಕ್ಕೆಂದು ಮುರಿಯಲಿ........ ಅತ್ಯಂತ ಭಾರದ ಬಿಡಿ ಭಾಗಗಳನ್ನು ಎತ್ತಿ-ಇಟ್ಟು, ಎತ್ತಿ ಇಟ್ಟು ಕಾರ್ಮಿಕರ ಬೆನ್ನು ಮೂಳೆ ಸವೆದು ಹೋಗಲಿ........ ಈ ಶ್ರಮಿಕರ ಕೈ ಸೋತು ಬಿದ್ದೇಹೋಗಲಿ..... ಉಹೂಂ ಕಾರ್ಖಾನೆಯ ಆಡಳಿತ ವರ್ಗದ ಕಣ್ಣಿಗೆ ಅದು ಯಾವುದೂ ಕಾಣುವುದಿಲ್ಲ. ಪ್ರತಿ 3 ನಿಮಿಷಕ್ಕೊಂದು ಕಾರು ಕಾರ್ಖಾನೆಯಿಂದ ಆಚೆಗೆ-ಬರಲೇಬೇಕು, ಮಾಲೀಕರ ಖಜಾನೆ ತುಂಬಲೇಬೇಕು. ಒಂದು ಟಯೋಟಾ ಲಕ್ಸುರಿ ಕಾರಿನ ಬೆಲೆ 10 ಲಕ್ಷಕ್ಕಿಂತ ಜಾಸ್ತಿ ಎಂದ ಮೇಲೆ ಖಜಾನೆ ತುಂಬದೇ ಇರುತ್ತದೆಯೇ ಮತ್ತೆ! 100 ರೂಪಾಯಿಗಳ ಕೋಟಾ ನೋಟುಗಳನ್ನು ಸಾರಾಸಗಟಾಗಿ ಮುದ್ರಿಸುವ ಖೂಳರ ಕೂಟವು ಹೀಗೆ ಲಾಭ ಕೊಳ್ಳೆ ಮಾಡಲು ಸಾಧ್ಯವಿಲ್ಲವೇನೋ! ಕಾರ್ಮಿಕ ವರ್ಗವನ್ನು ಕಬ್ಬಿನ ಜಲ್ಲೆಯನ್ನು ಹಿಂಡಿದಂತೆ ಹಿಂಡಿ ಹೊಟ್ಟು ಮಾಡಿ ಬಿಸುಡುವ ನಿರ್ದಯ ಸುಲಿಗೆಕೋರ ನೀತಿ ಬಂಡವಾಳಶಾಹಿ ವರ್ಗದ ಅಂತರ್ಗತ ಗುಣ.

ಅದು ಸ್ವದೇಶಿಯಾದರೂ ವಿದೇಶಿಯಾದರೂ ಅಥವಾ ಟಯೋಟಾ ಕಿರ್ಲೋಸ್ಕರ್‌ನಂತೆ ಈ ಇಬ್ಬರೂ ಸೇರಿಕೊಂಡು 'ಕೋಲಾಬರೇಷನ್' ಆದರೂ ಶೋಷಣೆಯ ಗುಣ ಒಂದೆ. ಸುಲಿಗೆಯ ತೀವ್ರತೆಯಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದಷ್ಟೆ.

ಇದುವರೆಗೆ ಸುಮಾರು 50ಕ್ಕೂ ಹೆಚ್ಚು ಜನ ಕಾರ್ಮಿಕರು ಬೆನ್ನುಮೂಳೆ ನೋವು-ಬೆನ್ನುಮೂಳೆ ಸವೆತ ಇತ್ಯಾದಿಗಳ ಸಂಬಂಧ ಶಸ್ತ್ರ ಚಿಕಿತ್ಸೆಗೆ ಗುರಿಯಾಗಿದ್ದಾರೆ. ಈ ಅಸಹನೀಯ ಅಮಾನುಷವಾದ ಕೆಲಸದ ಹೊರೆಯನ್ನು ಕಡಿತ ಮಾಡಿ - ವೈಜ್ಞಾನಿಕವಾಗಿ ಕೆಲಸ ನಿಗದಿ ಮಾಡಿ ಎಂದರೆ ಮಾಲಿಕವರ್ಗಕ್ಕೆ ಕಣ್ಣು ಇಲ್ಲ-ಕಿವಿಯೂ ಇಲ್ಲ. ಹೃದಯವಂತೂ ಮೊದಲೇ ಇಲ್ಲ. ಇವರಲ್ಲಿ ಇರುವುದು ತುಂಬಿ ತುಳುಕುವ ಖಜಾನೆಯೊಂದೆ.

ಈ ಪರಿಯಾಗಿ ಬಸವಳಿದಿರುವ ಕಾರ್ಮಿಕರ ಚಳುವಳಿಗೆ ಬೆಂಬಲ ಸೂಚಿಸುವ ಸಂಬಂಧ ಇದೇ ಜುಲೈ 3ರಂದು ಬೆಂಗಳೂರು ನಗರ ಕೇಂದ್ರದ ಬನಪ್ಪ ಪಾರ್ಕಿನಲ್ಲಿ ಬೃಹತ್ ಸೌಹಾರ್ದ ಸಮಾವೇಶವೊಂದು ಅತ್ಯಂತ ಯಶಸ್ವಿಯಾಗಿ ನಡೆಯಿತು.

ಬೆಂಗಳೂರಿನ ಒಂದು ಅತ್ಯಂತ ಪ್ರತಿಷ್ಠಿತ ಕಾರ್ಮಿಕ ಸಂಘವಾದ ಮೈಕೊ ಕಾರ್ಮಿಕರ ಸಂಘದ ಅಧ್ಯಕ್ಷರಾದ ಕಾಂ.ಶಿವಶಂಕರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾವೇಶದಲ್ಲಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಬಾಗೇಪಲ್ಲಿ ಕ್ಷೇತ್ರದ ಶಾಸಕರೂ ಆದ ಕಾಂ.ಜಿ.ವಿ.ಶ್ರೀರಾಮರೆಡ್ಡಿ, ಬಿಇಎಫ್‌ಐ ಮುಖಂಡರಾದ ಕಾಮ್ರೇಡ್ ರತ್ನಾಕರ ಶೆಣೈ, ವಿಮಾನೌಕರರ ಸಂಘಟನೆ ಎಐಐಇಎನ ಮುಖಂಡರಾದ ಕಾಂ.ಚಂದನ್, ಮೈಕೋ ನಾಗನಾಥಪುರ ಘಟಕದ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ.ನಾಗೇಶ್, ಎಸ್ಕಾರ್ಟ್ಸ್ ಕಾರ್ಖಾನೆಯ ಕಾರ್ಯದರ್ಶಿ ಕಾಂ.ಡ್ಯಾನಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಂ.ನಿತ್ಯಾನಂದಸ್ವಾಮಿ, ಸಿಐಟಿಯು ರಾಜ್ಯಕಾರ್ಯದರ್ಶಿಯಾದ ಕಾಂ.ಇ.ಕೆ.ಎನ್.ರಾಜನ್, ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ಕಾಂ.ಎಚ್.ಎನ್ ಗೋಪಾಲಗೌಡ, ಸಿಐಟಿಯು ಬೆಂಗಳೂರು ಜಿಲ್ಲಾ ಪ್ರ.ಕಾರ್ಯದರ್ಶಿ ಕಾಂ.ಮೀನಾಕ್ಷಿ ಸುಂದರಂ, ಸಿಪಿಐ(ಎಂ)ಜಿಲ್ಲಾ ಕಾರ್ಯದರ್ಶಿ ಕಾಂ.ಪ್ರಕಾಶ್ ಮುಂತಾದವರು ಪಾಲ್ಗೊಂಡು ಬೆಂಬಲಿಸಿ ಮಾತನಾಡಿದರು.

ಆರಂಭದಲ್ಲಿ ಪ್ರಾಸ್ತಾವಿಕ ಮಾತುಗಳಾಡಿದ ಕಾಂ.ಮೀನಾಕ್ಷಿ ಸುಂದರಂರವರು 'ತಡೆದುಕೊಳ್ಳಲು ಅಸಾಧ್ಯವಾದ ಶೋಷಣೆಯಿಂದಾಗಿ ಕಾರ್ಮಿಕರು ಚಳುವಳಿಗೆ ಇಳಿದಿದ್ದಾರೆ. ಕಾರ್ಮಿಕ ಅಶಾಂತಿ ಇದೆ - ಆದಕ್ಕಾಗಿ ಕಾರ್ಖಾನೆಯನ್ನು ಬೇರೆ ಕಡೆಗೆ, ಹರ್ಯಾಣಕ್ಕೆ ಅಥವಾ ಉತ್ತರಾಂಚಲ ರಾಜ್ಯಕ್ಕೆ ವರ್ಗಾವಣೆ ಮಾಡುವುದಾಗಿ ಮಾಲೀಕ ವರ್ಗ ಬೆದರಿಕೆ ಹಾಕುತ್ತಿದೆ. 13ರಿಂದ 15 ಸಾವಿರ ಸಂಬಳ ಕೊಡುತ್ತಿದ್ದಾರೆ. 2002ರಲ್ಲಿ 52 ದಿನಗಳ ನಿರಂತರ ಮುಷ್ಕರದ ನಂತರ 2 ವರ್ಷಕ್ಕೆ ಒಪ್ಪಂದವಾಗಿತ್ತು. ಆನಂತರ ಆಡಳಿತ ವರ್ಗ ಕಾರ್ಮಿಕ ಸಂಘದೊಡನೆ ಮಾತುಕತೆ ನಡೆಸದೇ, ಏಕಪಕ್ಷೀಯವಾಗಿ ಅಲ್ಪಪ್ರಮಾಣದ ವೇತನ ಹೆಚ್ಚಳ ಘೋಷಿಸಿದೆ. ಕಾರ್ಮಿಕ ವಿರೋಧಿ ಧೋರಣೆ ಪ್ರತಿಭಟಿಸುವ ನಿಟ್ಟಿನಲ್ಲಿ ಕಾನೂನು ಬದ್ಧವಾದ ಕಾರ್ಮಿಕ ಸಂಘದ ಚಟುವಟಿಕೆ-ನಡೆಸಿದ 15 ಜನ ಕಾರ್ಮಿಕರನ್ನು ಆಡಳಿತವರ್ಗ ಆ ಕೆಲಸದಿಂದ ಅಮಾನತ್ತು ಮಾಡಿದೆ. ಬಲಾಢ್ಯ ಬಹುರಾಷ್ಟ್ರೀಯ ಕಂಪನಿಗಳು ಸೇರಿ ಕೈಗಾರಿಕಾ ವಿವಾದ ಕಾಯ್ದೆಯನ್ನೇ ತಿರುಚುವ ಸಂಚು ನಡೆದಿವೆ. ಕಾನೂನಿನ ಪ್ರಕಾರ ಮಾನ್ಯತೆ ಪಡೆದ ಸಂಘಕ್ಕೆ ಮಾಲೀಕ ವರ್ಗ 21 ದಿನ ಮುಂಚಿತವಾಗಿ ನೋಟಿಸ್ ಕೊಟ್ಟು ವೇತನ-ಇತ್ಯಾದಿ ಬದಲಾವಣೆ ತರಲು ಒಪ್ಪಿಗೆ ಪಡೆಯಬೇಕು. ಕಾರ್ಮಿಕ ಚಳುವಳಿಯಿಂದಾಗಿ ಮಾತ್ರವೇ ಈ ಕೈಗಾರಿಕಾ ವಿವಾದ ಕಾಯ್ದೆ ಈಗಲೂ ಉಳಿದಿದೆ.

ಐಷಾರಾಮಿ ಕಾರುಗಳನ್ನು ಉತ್ಪಾದಿಸುವ ಈ ಕಾರ್ಖಾನೆಯನ್ನು ಮಾಲೀಕರು ಸರ್ಕಾರದ ಮೇಲೆ ಪ್ರಭಾವ ಬೀರಿ 'ಸಾರ್ವಜನಿಕ ಅಗತ್ಯ ಸೇವೆ' ಎಂದು ಘೋಷಿಸುವಂತೆ ಮಾಡಿದ್ದಾರೆ. ಅಂದರೆ ಕಾರ್ಮಿಕರು ಮುಷ್ಕರ ಮಾಡುವಂತಿಲ್ಲ. ಆಟೋಮೊಬೈಲ್, ಗಾರ್ಮೆಂಟ್ಸ್, ಬಯೋಟೆಕ್ ಇತರೆ ಉದ್ದಿಮೆಗಳನ್ನು ಸಹ ಈ ವ್ಯಾಪ್ತಿಗೆ ತರಲಾಗಿದೆ. ಈ ಕಾರ್ಖಾನೆಯ ಉತ್ಪಾದನೆ ನಿಂತ ಕೂಡಲೇ ಸಾರ್ವಜನಿಕರಿಗೆ ಆಗುವ ಗಂಭೀರ ತೊಂದರೆಯಾದರೂ ಏನು? ಏನೂ ಆಗುವುದಿಲ್ಲ. ಸರ್ಕಾರದ ಈ ನೀತಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಸರ್ಕಾರಕ್ಕೆ ಹೆಚ್ಚು ತೆರಿಗೆ ಕೊಡುತ್ತಿದ್ದೇವೆ ಎಂಬ ಅಹಂಕಾರದಲ್ಲಿ, ಬಂಡವಾಳ ಹೂಡಿದ್ದೇವೆಂಬ ಹಮ್ಮಿನಲ್ಲಿ ಸರ್ಕಾರವನ್ನೇ ತನ್ನ ತಾಳಕ್ಕೆ ತಕ್ಕಂತೆ ಕುಣಿಸಲು ಪ್ರಯತ್ನಿಸುತ್ತಿರುವ ಆಡಳಿತ ಮಂಡಳಿ ಕಾರ್ಮಿಕ ಕಾಯ್ದೆಗಳನ್ನೇ ತಿರುಚಿ, ಕಾರ್ಮಿಕ ವರ್ಗದ ಮೇಲೆ ದಬ್ಬಾಳಿಕೆ ನಡೆಸಲು ಯತ್ನಿಸುತ್ತಿದೆ. ಸಂಘಟಿತ-ಸಾಮೂಹಿಕ ಆಂದೋಲನ ರೂಪಿಸಿ ಈ ನೀತಿಗಳನ್ನು ಹಿಮ್ಮೆಟ್ಟಿಸುವ ಬಗೆಗೆ ಯೋಜಿಸಬೇಕಿದೆ ಎಂದು ಮೀನಾಕ್ಷಿ ಸುಂದರಂ ವಿವರಿಸಿದರು.



ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರು ಸಮಾವೇಶವನ್ನುದ್ದೇಶಿಸಿ ಮಾತನಾಡಿ ಕಾರ್ಮಿಕವರ್ಗದ ಈ ಹೋರಾಟ ಹೊಸದೊಂದು ಸಮರದಂತೆ. ಕಾರ್ಮಿಕರನ್ನು ಜೀತದಾಳುಗಳಂತೆ ನಡೆಸಿಕೊಳ್ಳುವ ಆಡಳಿತ ವರ್ಗದ ಧೋರಣೆಗೆ ಕಡಿವಾಣ ಹಾಕಬೇಕಾಗಿದೆ.

17-18 ಶತಮಾನದ ಕಾರ್ಮಿಕ ವರ್ಗದ ಪರಿಸ್ಥಿತಿ ಅತ್ಯಂತ ಘೋರವಾಗಿತ್ತು. ಮುಂಜಾವಿನಿಂದ ಆರಂಭಿಸಿ ಕಡೆ ರಾತ್ರಿಯವರೆಗೆ ಸತತವಾಗಿ ಗುಲಾಮರಂತೆ ದುಡಿಯಬೇಕಿದ್ದ ಕಾರ್ಮಿಕರ ಮಕ್ಕಳಿಗೆ ತಮ್ಮ ತಂದೆ ಯಾರೆಂಬ ಪರಿಚಯ - ತಂದೆಗೆ ತಮ್ಮ ಮಕ್ಕಳು ಯಾರೆಂಬ ಪರಿಚಯ ಸಹ ಸರಿಯಾಗಿ ಇರಲು ಸಾಧ್ಯವಿಲ್ಲದ ಪರಿಸ್ಥಿತಿ ಇತ್ತು.

1886 ರಲ್ಲಿ ಅಮೇರಿಕಾದ ಚಿಕಾಗೋ ನಗರದಲ್ಲಿ ಕೆಂಬಾವುಟ ಹಿಡಿದು ಕಾರ್ಮಿಕವರ್ಗ 8 ಗಂಟೆ ಕೆಲಸಕ್ಕಾಗಿ ತೀವ್ರ ಹೋರಾಟ ನಡೆಸಿತು. ಈಗ ಆಗಿರುವ ಪರಿಸ್ಥಿತಿ ಇಂತಹ ಐತಿಹಾಸಿಕ ಹೋರಾಟಗಳಿಂದ ಆಗಿರುವಂಥದ್ದು. ಈಗ ಕಾರ್ಮಿಕ ವರ್ಗ ಗುಣದಲ್ಲಿ ಬದಲಾವಣೆ ಆಗಬೇಕಿದೆ. ಆಳಬೇಕಾದದ್ದು ಕಾರ್ಮಿಕರೇ ಅಥವಾ ಮಾಲೀಕರೆ ಎಂಬುದು ತೀರ್ಮಾನವಾಗಬೇಕಿದೆ.

ತಾತಗುಣಿ ಕಾರ್ಮಿಕರು 3 ವರ್ಷಗಳ ಕಾಲ ಹೋರಾಟ ನಡೆಸಿದರು. ಒಂದುವರೆ ವರ್ಷಗಳ ಕಾಲ ವಿಧಾನಸೌಧದ ಮುಂದೆ ಟೆಂಟ್ ಹಾಕಿ ಹೋರಾಟ ನಡೆಸಿದರು.

1980 ದಶಕದಲ್ಲಿ ನಡೆದ ಸಮರಶೀಲ ಚಳುವಳಿಯ ನಂತರ ಹೋರಾಟ ತನ್ನ ಮೊನಚು ಕಳೆದುಕೊಂಡಿದೆ. ಜಗತ್ತಿನ ರಾಜಕಾರಣವನ್ನೇ ಬದಲಿಸುವ ಸ್ಥಿತಿಗೆ ಬಹುರಾಷ್ಟ್ರೀಯ ಕಂಪನಿಗಳು ಬಂದಿವೆ. ಇಡೀ ಜಗತ್ತಿನ ರಾಜಕಾರಣವನ್ನೇ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಅವರು ಹವಣಿಸುತ್ತಿದ್ದಾರೆ. ಅಮೇರಿಕಾ, ಜಪಾನ್, ಇಟಲಿ, ಫ್ರಾನ್ಸ್, ಜರ್ಮನಿ ಮುಂತಾದ ಜಿ-7 ರಾಷ್ಟ್ರಗಳು ಈ ಪ್ರಯತ್ನದ ಮುಂಚೂಣಿಯಲ್ಲಿವೆ. ಬಂಡವಾಳಶಾಹಿಗಳು ಕೇವಲ ಬಂಡವಾಳದ ಮಾಲೀಕರಾಗಿ ಮಾತ್ರ ಉಳಿದಿಲ್ಲ. ಅವರು ರಾಜಕೀಯ ಹಿಡಿತಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ನಾವು ಈ ರಾಜಕೀಯವನ್ನು ಅರ್ಥ ಮಾಡಿಕೊಳ್ಳಬೇಕು. ಸಂಘಟಿತರಾಗಬೇಕು. ನಮ್ಮ ಸರ್ಕಾರಗಳು ಬಹುರಾಷ್ಟ್ರೀಯ ಕಂಪನಿಗಳ ಗುಲಾಮರಂತೆ ವರ್ತಿಸುತ್ತಿವೆ. ಬಜೆಟ್‌ನಲ್ಲಿ ದರ್ಮಸಿಂಗ್ ಸರ್ಕಾರ ಐಟಿ ಉದ್ದಿಮೆ ಮೇಲೆ ಶೇ 0.5 ತೆರಿಗೆ ಹಾಕಿದರೂ ನಂತರ ಒತ್ತಡಕ್ಕೊಳಗಾಗಿ ತಕ್ಷಣ ವಾಪಸ್ ಪಡೆದುಕೊಂಡರು. ಐಟಿ ಉದ್ದಿಮೆಗಳಿರುವ ಹೊಸೂರು ರಸ್ತೆಗೆ 500 ಕೋಟಿ ರೂ.ಗಳನ್ನು ನೀಡಲಾಯಿತು. ಆದರೆ ರೈತರ ಸಾಲ ವಸೂಲಿ ಮುಂದೂಡಲು 100 ಶಾಸಕರು ಧರಣಿ ಕೂರಬೇಕಾಯಿತು. 1992ರ ನಂತರ ಎಲ್ಲ ಕಾರ್ಮಿಕ ಕಾನೂನುಗಳನ್ನು ತುಳಿದು ಹಾಕಲು ಈ ಬಹುರಾಷ್ಟ್ರೀಯ ಕಂಪನಿಗಳು ಹೊರಟಿವೆ. ರಾಜ್ಯದಲ್ಲಿಯೂ ಕಾರ್ಮಿಕ ಕಾಯ್ದೆ ತಿದ್ದುಪಡಿಗೆ ಒತ್ತಡ ತರಲಾಗುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು ಶ್ರೀಮಂತರಿಗೆ ಬೇಕಾದ ಭೋಗವಸ್ತುಗಳ ಉತ್ಪಾದನೆಗೆ ಮಾತ್ರ ಬಂಡವಾಳ ಹೂಡುತ್ತಾರೆ. ಈ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧದ ಹೋರಾಟ ಎಂದರೆ ನೇರವಾಗಿ ಜಿ-7 ದೇಶಗಳ ಪ್ರಭುತ್ವಗಳ ವಿರುದ್ಧದ ಹೋರಾಟ. ಹೀಗಾಗಿ ಕಾರ್ಮಿಕ ವರ್ಗಕ್ಕೆ ಸೈದ್ಧಾಂತಿಕ ರಾಜಕೀಯ ಸ್ಪಷ್ಟತೆ, ದೃಢತೆ ಖಚಿತವಾದ ಐಕ್ಯತೆ ಬೇಕಾಗಿದೆ.

ಆದರೆ ಕಾರ್ಮಿಕರ ಐಕ್ಯತೆ ಒಡೆಯುವುದೇ ಬಂಡವಾಳಿಗರ ತಂತ್ರ. ಅದೇ ಅವರ ಅಸ್ತ್ರ. ಹೀಗಾಗಿ ಕಾರ್ಮಿಕರಲ್ಲಿ ಐಕ್ಯತೆ ಬೇಕು. ಕಾರ್ಮಿಕರನ್ನು ಶೋಷಿಸಲು ಬಂಡವಾಳಿಗರು ಒಂದಾಗಿದ್ದಾರೆ. ಕಾರ್ಮಿಕರ ಹಿತಾಸಕ್ತಿ ಕಾಪಾಡುವ ಕರ್ತವ್ಯ ಜನಪ್ರತಿನಿಧಿಗಳ ಮೇಲೆ -ಶಾಸಕರ ಮೇಲಿದೆ. ಆದರೆ ಎಡಪಕ್ಷಗಳನ್ನು ಬಿಟ್ಟು ಇತರ ಪಕ್ಷಗಳ ಶಾಸಕರು ತಮ್ಮನ್ನು ತಾವು ಬಂಡವಾಳಿಗರಿಗೆ ಮಾರಿಕೊಂಡಿದ್ದಾರೆ.

ಬಹುರಾಷ್ಟ್ರೀಯ ಕಂಪನಿಗಳು ಬಲಿಷ್ಠರಾದಷ್ಟು ಕಾರ್ಮಿಕರ ರಕ್ತ ಹೀರುತ್ತಾರೆ. ದಮನ ಮಾಡುತ್ತಾರೆ. ಕೆಂಬಾವುಟ ಇರುವುದು ಶೋಷಣೆಯಿಂದ ವಿಮೋಚನೆಗಾಗಿ. ಕೇವಲ ಸಂಬಳ-ಬೋನಸ್‌ಗಾಗಿ ಅಲ್ಲ. ಕಾರ್ಮಿಕವರ್ಗ ವರ್ಗಪ್ರಜ್ಞೆ ಹೆಚ್ಚಿಸಿಕೊಂಡು ಸಮರಶೀಲ ಹೋರಾಟ ಮಾಡಿದರೆ ಮಾತ್ರ ಜಯ ಸಾಧ್ಯ. ಅದಕ್ಕಾಗಿ ಶ್ರಮಿಸಿ ಎಂದು ತಿಳಿಸಿ ಹೋರಾಟಕ್ಕೆ ಯಶಸ್ಸು ಕೋರಿದರು.

ಸ್ವಾತಂತ್ರ್ಯದ ಸಗ್ಗಕ್ಕೆ ನಾಡು ನಡೆಯಲಿ, ಮುನ್ನಡೆಯಲಿ

"ಎಲ್ಲಿ ಸ್ವಾಭಿಮಾನದಿ ಮನವು
ತಲೆ ಎತ್ತಿ ನಿಲ್ಲುವುದೋ
ಅಂತಹ ಸ್ವಾತಂತ್ರ್ಯದ ಸಗ್ಗಕ್ಕೆ
ನಾಡು ನಡೆಯಲಿ ಮುನ್ನಡೆಯಲಿ"

ಎಂಬ ಕವಿ ರವೀಂದ್ರನಾಥ ಠ್ಯಾಗೋರರ ಕವನವನ್ನು ನೆನಪಿಸಿದ ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಇದು ಸಂಬಳ ವೇತನಕ್ಕಾಗಿ ನಡೆಯುತ್ತಿರುವ ಹೋರಾಟವಲ್ಲ. ಮಾನವೀಯತೆಯ ಲವಲೇಷವೂ ಇಲ್ಲದ ಮಾಲೀಕವರ್ಗದ ಶೋಷಣೆಯ ವಿರುದ್ಧ ಹೋರಾಟ. ಈ ಹೋರಾಟದಲ್ಲಿ ಸಿಪಿಐ(ಎಂ) ಪಕ್ಷ ನಿಮ್ಮೊಂದಿಗೆ ಇರುತ್ತದೆ. ಬೆಂಗಳೂರಿಗೆ ರಾಜ್ಯಕ್ಕೆ ವಿದೇಶಿ ಬಂಡವಾಳ ಹರಿದುಬರುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳೂ ಬರುತ್ತಿವೆ. ಇದಕ್ಕೆ ಅನುಕೂಲ ಮಾಡಿಕೊಡಲಿಕ್ಕೆ ಸರ್ಕಾರ ಇದೆ.

ಬಂಡವಾಳ ಯಾರಿಗಾಗಿ-ಯಾತಕ್ಕಾಗಿ ಬರುತ್ತಿದೆ ಎಂಬುದು ಮುಖ್ಯ. ಸಾಮಾನ್ಯ ಜನರಿಗೆ ಬೇಕಾದ ಉತ್ಪಾದನೆ ಹೆಚ್ಚಿಸಲು ಬಂಡವಾಳಬೇಕು ಎಂಬುದು

→

ಸಾಮರಸ್ಯದ ಕರಾವಳಿಗಾಗಿ......

ಕಾರವಾರದಿಂದ ಮಂಗಳೂರಿನವರೆಗೆ ಸುಮಾರು 300 ಕಿ.ಮೀ ಉದ್ದವಾಗಿ ಹಬ್ಬಿರುವ ಪ್ರದೇಶವೇ ಕರ್ನಾಟಕದ ಹೆಮ್ಮೆಯ ಕರಾವಳಿ ಪ್ರದೇಶ. ಪಶ್ಚಿಮ ಘಟ್ಟಗಳ ಮತ್ತು ಅರಬ್ಬೀ ಸಮುದ್ರದ ನಡುವೆ ಸುಮಾರು 21,300 ಚದರ ಕಿ.ಮೀರಷ್ಟಿರುವ ಈ ಪ್ರದೇಶವು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಾಗಿ ವಿಂಗಡಿಸಲ್ಪಟ್ಟಿದೆ. ಅಮೋಘವಾದ ಪ್ರಕೃತಿ ಸೌಂದರ್ಯದ ಮೂಲಕ ಪ್ರವಾಸಿಗರನ್ನು ಆಕರ್ಷಿಸುತ್ತಾ ಬಂದಿರುವ ಕರ್ನಾಟಕದ ಕರಾವಳಿ ಪ್ರದೇಶವು ಇತಿಹಾಸ ಕಾಲದಿಂದಲೂ ಜಗತ್ಪ್ರಸಿದ್ಧವಾಗಿದೆ. ವಿಶ್ವದ ಇತರ ಕರಾವಳಿ ಪ್ರದೇಶಗಳಂತೆಯೇ ಕರ್ನಾಟಕದ ಕರಾವಳಿ ಪ್ರದೇಶವು ಹೆಚ್ಚು ಜನಸಾಂದ್ರತೆಯನ್ನು ಹೊಂದಿದ ಹಾಗೂ ತುಲನಾತ್ಮಕವಾಗಿ ಹೆಚ್ಚು ಅಭಿವೃದ್ಧಿ ಹೊಂದಿದ ಪ್ರದೇಶವಾಗಿದೆ. 2001 ರ ಜನಗಣತಿಯ ಪ್ರಕಾರ ದ.ಕ.ಜಿಲ್ಲೆಯ ಜನಸಂಖ್ಯೆ 18,96,403 ಉಡುಪಿ ಜಿಲ್ಲೆಯ ಜನಸಂಖ್ಯೆ 11,09,494 ಮತ್ತು ಉತ್ತರ ಕನ್ನಡ ಜಿಲ್ಲೆಯ ಜನಸಂಖ್ಯೆ 13,53,299.

ವಿವಿಧ ಜಾತಿ ಮತ ಪಂಥಗಳಿಗೆ ಸೇರಿದ ಕರಾವಳಿಯ ಜನತೆ ಶತಮಾನಗಳಿಂದ ಪರಸ್ಪರ ಅನ್ಯೋನ್ಯತೆಯಿಂದ ಬಾಳುತ್ತಾ ಬಂದಿದ್ದು ಇತರ ಪ್ರದೇಶಗಳಿಗೆ ನಾಗರೀಕತೆಯ ಒಂದು ಮಾದರಿಯೇ ಆಗಿದ್ದರು. ರಾಜ್ಯದಲ್ಲಿ ಅತಿ ಹೆಚ್ಚು ಸಾಕ್ಷರತೆಯನ್ನು ಸಾಧಿಸಿದ ಜಿಲ್ಲೆಗಳಲ್ಲಿ ಈ ಮೂರು ಜಿಲ್ಲೆಗಳು ಸೇರಿವೆ. 2001 ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಸಾಕ್ಷರತೆಯ ಪ್ರಮಾಣ 84, ಉಡುಪಿ 80 ಮತ್ತು ಉತ್ತರಕನ್ನಡ ಜಿಲ್ಲೆಯ ಸಾಕ್ಷರತೆಯ ಪ್ರಮಾಣ 77. ಮಹಿಳೆಯರ ನಡುವೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 78, ಉಡುಪಿ ಜಿಲ್ಲೆಯಲ್ಲಿ 74 ಮತ್ತು ಉತ್ತರಕನ್ನಡ ಜಿಲ್ಲೆಯಲ್ಲಿ 69 ಸಾಕ್ಷರತೆಯ ದಾಖಲೆಯನ್ನು ಹೊಂದಿರುವುದು ಗಮನಾರ್ಹವಾಗಿದೆ. ಹೀಗೆ ಕರಾವಳಿ ಜಿಲ್ಲೆಗಳ ಜನ ಸುಶಿಕ್ಷಿತರು, ಒಳ್ಳೆಯವರು ಎಂದೇ ಹೆಸರುವಾಸಿಯಾಗಿದ್ದಾರೆ. ಕರಾವಳಿ ಜಿಲ್ಲೆಗಳ ಜನ ಶಾಂತಿಪ್ರಿಯರೆಂತಲೂ, ಕಾನೂನು ಪರಿಪಾಲಿಸುವವರೆಂತಲೂ ಅವರ ನಡುವೆ ಬೇರೆ ಜಿಲ್ಲೆಗಳ ಜನರೂ ಸಹ ತೊಂದರೆ ಇಲ್ಲದೇ ಬದುಕಬಹುದೆಂಬುದು ರಾಜ್ಯದ ಇತರ ಭಾಗಗಳಲ್ಲಿ ತುಂಬಾ ಪ್ರಚಾರದಲ್ಲಿರುವ ಮಾತು. ಹಾಗಾಗಿ ಬೇರೆ ಜಿಲ್ಲೆಗಳಿಂದ ಸರ್ಕಾರಿ ನೌಕರರು ಕರಾವಳಿ ಜಿಲ್ಲೆಗಳಿಗೆ ವರ್ಗ ಮಾಡಿಕೊಳ್ಳಲು ಯಾವುದೇ ಆತಂಕಪಟ್ಟುಕೊಳ್ಳುತ್ತಿರಲಿಲ್ಲ.



ಆದರೆ ಇತ್ತೀಚಿನ ದಿನಗಳಲ್ಲಿ ಇಲ್ಲಿ ಪರಿಸ್ಥಿತಿ ತುಂಬಾ ಬದಲಾಗುತ್ತಿದೆ. ಇಷ್ಟು ದಿನಗಳ ನೆಮ್ಮದಿಗೆ ಭಂಗ ಉಂಟಾಗಿದೆ. ಅಶಾಂತಿಯ ಅಲೆಗಳು ಆರ್ಭಟಿಸಲಾರಂಭಿಸಿವೆ. ಅತ್ಯಂತ ಶಾಂತಿಪ್ರಿಯರೆನಿಸಿಕೊಂಡ ಜನ ತಮ್ಮತಮ್ಮೊಳಗೆ ಕತ್ತಿ ಮಸಿಯಲಾರಂಭಿಸಿದ್ದಾರೆ. ಇಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ಹತ್ತಾರು ನದಿಗಳಲ್ಲಿ ಅಮಾಯಕರ ರಕ್ತ ಹರಿಯತೊಡಗಿದೆ. ಅದನ್ನು ಹಿಂದುಗಳ ರಕ್ತವೆಂತಾಗಲಿ, ಮುಸಲ್ಮಾನರ ರಕ್ತವೆಂತಾಗಲಿ, ಕ್ರೈಸ್ತರ ರಕ್ತವೆಂತಾಗಲಿ ಗುರುತಿಸಲಾಗುತ್ತಿದೆಯೇ?

ಕರಾವಳಿ ಜಿಲ್ಲೆಗಳಲ್ಲಿ ವಿದ್ಯಾವಂತ ಯುವ ಜನರ ಸಂಖ್ಯೆ ಹೆಚ್ಚುತ್ತಿದೆ. ಆದರೆ ಅದೇ ಪ್ರಮಾಣದಲ್ಲಿ ಉದ್ಯೋಗದ ಅವಕಾಶಗಳು ಸೃಷ್ಟಿಯಾಗುತ್ತಿಲ್ಲ. ನಾಡಿನ **ಅಭಿವೃದ್ಧಿಗೆ ಭಾರೀ ಕೊಡುಗೆಯನ್ನು ನೀಡಬಲ್ಲ ಈ ಯುವ ನಿರುದ್ಯೋಗಿಗಳು ಇಂದು ಸೌಹಾರ್ದತೆಯ ಶತ್ರುಗಳ ಕೈಯಲ್ಲಿ ಕತ್ತಿ, ಕೋವಿಗಳಾಗುತ್ತಾರೆ. ಪರಿಸರದ ಹೆಸರಿನಲ್ಲಿ ಕೈಗಾರಿಕೀಕರಣವನ್ನು ವಿರೋಧಿಸುವ ಸಂಘಟನೆಗಳು ಈ ಪ್ರಕ್ರಿಯೆಗೆ ಪುಷ್ಠಿ ನೀಡುತ್ತವೆ.**

ಕಡಲ ತೀರದ ಈ ಜನ ಸಹಜವಾಗಿ ಮಾಂಸಹಾರಿಗಳು. ಮೀನುಗಾರಿಕೆ ಇಲ್ಲಿಯ ಪ್ರಮುಖ ಉದ್ಯೋಗ. ಮೊನ್ನೆ ಮೊನ್ನೆಯವರೆಗೂ ಇಲ್ಲಿ ಯಾರು ಯಾವ ಪ್ರಾಣಿಯ ಮಾಂಸವನ್ನು ತಿನ್ನುತ್ತಾರೆ ಎಂದು ಯಾರೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ದನದ ಮಾಂಸವನ್ನು ತಿನ್ನುವವರು ಈ ಜಿಲ್ಲೆಗಳಲ್ಲಿ ಬಹು ಸಂಖ್ಯಾತರು. (ಮುಸಲ್ಮಾನರು, ಕ್ರೈಸ್ತರು ಮತ್ತು ದಲಿತರನ್ನು ಮಾತ್ರ ಗಣನೆಗೆ ತೆಗೆದುಕೊಂಡರೂ) ಆಡು, ಕುರಿ, ಕೋಳಿಗಳ ಮಾಂಸವು ಇದಕ್ಕಿಂತ ದುಬಾರಿಯಾಗಿರುವುದು ಇದಕ್ಕೆ ಒಂದು ಕಾರಣವಾಗಿರಬಹುದು. **ಆದರೆ ಇಂದು ದನಗಳನ್ನು ಮಾಂಸಕ್ಕಾಗಿ ಕೊಲ್ಲುವುದು ಈ ಜಿಲ್ಲೆಗಳಲ್ಲಿ ಮನುಷ್ಯರು ಮನುಷ್ಯರನ್ನು ಕೊಲ್ಲುವುದಕ್ಕೆ ನೆಪ ಮಾಡಲಾಗುತ್ತಿದೆ.** ಎಲ್ಲಿಯದ ದ್ವೇಷದ ಭೂತ ಬೊಬ್ಬರ್ಯನನ್ನು ಪೂಜಿಸುವ ಈ ನಾಡಿಗೆ ಕಾಲಿಟ್ಟಿದೆ. ಬೊಬ್ಬರ್ಯ ಎಂಬುದು ಒಂದು ಮುಸಲ್ಮಾನ ಭೂತ ಎಂಬುದನ್ನು ಜನ ಮರೆತೇಬಿಟ್ಟಿದ್ದಾರೆ.

ಧರ್ಮವು ಇಂದು ಸಹಿಷ್ಣುತೆಯ ಗುಣವನ್ನು ಕಳೆದುಕೊಂಡು ಆಕ್ರಮಣಕಾರಿಯಾಗುತ್ತಿದೆ. ಧರ್ಮವನ್ನು ಬಂಡವಾಳ ಮಾಡಿಕೊಂಡು ರಾಜಕೀಯ ಅಧಿಕಾರವನ್ನು ಗಿಟ್ಟಿಸಲು ಹವಣಿಸುತ್ತಿರುವ ಶಕ್ತಿಗಳಿಂದ ಕರ್ನಾಟಕದ ಕರಾವಳಿಯ ಶಾಂತಿಗೆ ಭಂಗ ಉಂಟಾಗುತ್ತಿದೆ. ಈ ಪ್ರದೇಶದಲ್ಲಿ ಐತಿಹಾಸಿಕ ಕಾರಣಗಳಿಂದಾಗಿ ಸಾಧಿಸಲಾದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮುನ್ನಡೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಬೇಕೆನ್ನುವುದಾದರೆ ಮತೀಯ ಶಕ್ತಿಗಳನ್ನು ಮೆಟ್ಟಿ ನಿಲ್ಲುವುದು ಅಗತ್ಯವಾಗಿದೆ. ಈ ಜಿಲ್ಲೆಗಳ ನೈಜ ಅಭಿವೃದ್ಧಿ ಸಾಧಿಸಲಾಗಬೇಕಾದರೆ, ಇಲ್ಲಿ ಕೈಗಾರಿಕಾಭಿವೃದ್ಧಿ, ವ್ಯಾಪಾರ ವಹಿವಾಟು ಹೆಚ್ಚಬೇಕಾದರೆ ಇಲ್ಲಿ ಶಾಂತಿ ನೆಲೆಸುವುದು ಅತ್ಯಗತ್ಯವಾಗಿದೆ. ಕೇವಲ ಭಾವನಾತ್ಮಕ ಕಾರಣಗಳಿಗಾಗಿ ಶಾಂತಿಯನ್ನು ಕದಡುವ ಶಕ್ತಿಗಳಿಗೆ ಬೆಂಬಲ ಕೊಡುತ್ತಿರುವ ಕರಾವಳಿಯ ಜನತೆ ಈ ದಿಕ್ಕಿನಲ್ಲಿ ಯೋಚನೆ ಮಾಡುವಂತೆ ಮಾಡುವುದು ಎಲ್ಲ ಪ್ರಗತಿಪರ ಶಕ್ತಿಗಳ ತಕ್ಷಣದ ಕರ್ತವ್ಯವಾಗಿದೆ.

- ನಿತ್ಯಾನಂದಸ್ವಾಮಿ

...........ಟಯೋಟ ಕಾರ್ಮಿಕರ ಹೋರಾಟ

→

ಸಿಪಿಐ(ಎಂ) ಧೋರಣೆ. ಅದು ಎಷ್ಟು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ನೀಡುತ್ತದೆ ಎಂಬುದೂ ಮುಖ್ಯ ಪ್ರಶ್ನೆ. ಇಡೀ ಸಮಾಜವನ್ನು ಶೋಷಣೆ ಮಾಡಿ ಶ್ರೀಮಂತರಿಗೆ ಬೇಕಾದ ಭೋಗವಸ್ತುವನ್ನು ಕಡಿಮೆ ಬೆಲೆಗೆ ಉತ್ಪಾದನೆ ಮಾಡಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲ ಸಿಗಬಾರದು. 'ಕಾರ್ಮಿಕ ಸಂಘ ಇರಬಾರದು ಕಾರ್ಮಿಕಪರ ಕಾನೂನು ಇರಬಾರದು' ಎಂಬ ಧೋರಣೆಯ ಬಂಡವಾಳಿಗರ ಜೊತೆ ಬಂಡವಾಳಶಾಹಿ ಪಕ್ಷಗಳ ಶಾಸಕರು ಅಧಿಕಾರಸ್ಥರು ಶಾಮೀಲಾಗಿದ್ದಾರೆ. ಇದನ್ನು ಕಾರ್ಮಿಕವರ್ಗ ಅರ್ಥಮಾಡಿಕೊಂಡು ದೃಢಹೋರಾಟ ಮಾಡಬೇಕೆಂದು ಕರೆ ನೀಡಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ.ರಾಜನ್ ಸಮಾವೇಶದಲ್ಲಿ ಮಾತನಾಡಿ, ಇದು ದುಡಿಮೆ-ಶ್ರಮ ಕಡಿಮೆ ಮಾಡಲಿಕ್ಕಾಗಿ ಹೋರಾಟ. ಅತೀ ಶೋಷಣೆ ವಿರುದ್ಧ ಹೋರಾಟ. ಕೈಗಾರಿಕಾವಿವಾದ ಕಾಯ್ದೆ ನಿಮಗೆ ಅನ್ವಯವಾಗದಂತೆ ನೋಡಿಕೊಳ್ಳುವುದಾಗಿ ಅವರಿಗೆ ಭರವಸೆ ನೀಡಿ ಈ ಬಹುರಾಷ್ಟ್ರೀಯ ಕಂಪನಿಯನ್ನು ಇಲ್ಲಿಗೆ ಕರೆ ತಂದಿದ್ದಾರೆ. ಈ ಬಹುರಾಷ್ಟ್ರೀಯ ಕಂಪನಿಯ ಸುಲಿಗೆಗೆ ಸಹಕರಿಸುತ್ತಿರುವ ಸರ್ಕಾರದ ವಿರುದ್ಧ ಹೋರಾಟ ಇದು. ಆದ್ದರಿಂದ ಸಿಐಟಿಯು ಈ ಹೋರಾಟವನ್ನು ಪೂರ್ಣವಾಗಿ ಬೆಂಬಲಿಸುತ್ತದೆ ಎಂಬ ಭರವಸೆ ನೀಡಿದರು. ಎಸ್ಸಾರ್ಟ್ಸ್ ಕಾರ್ಮಿಕ ಮುಖಂಡ ಕಾಂ.ಡ್ಯಾನಿ ಮಾತನಾಡಿ 1978ರಲ್ಲಿ ಕೆಲಸದ ಭದ್ರತೆಗಾಗಿ ತಮ್ಮ ಕಾರ್ಖಾನೆಯಲ್ಲಿ ಸಂಘ ಕಟ್ಟಿಕೊಂಡು ಟ್ರೈನಿಗಳಿಗೆ-ಖಾಯಂ ಉದ್ಯೋಗ ಗಳಿಸಿಕೊಳ್ಳುವುದು ಸಾಧ್ಯವಾಯಿತು. ಕಾರ್ಮಿಕ ಏಕತೆ ಇಂದಿನ ಅಗತ್ಯ ಎಂದರು.

ಮೈಕೋ ನಾಗನಾಥಪುರ ಘಟಕದ ಮುಖಂಡ ನಾಗೇಶ್‌ರವರು ಮಾತನಾಡಿ ಮೈಕೋ ಹೋರಾಟ ಒಂದು ಚಾರಿತ್ರಿಕ ಹೋರಾಟ. ಇಂದಿಗೂ ಕಾರ್ಮಿಕ ವರ್ಗಕ್ಕೆ ಇದು ಸ್ಫೂರ್ತಿಯಾಗಿದೆ. ಕಾರ್ಮಿಕ ಹೋರಾಟಕ್ಕೆ ಸಾವಿಲ್ಲ, ಹೆದರಿಕೆಗೆ ಅಂತ್ಯ-ಸಾವು ಇದೆ. ಟಯೋಟ ಕಾರ್ಮಿಕರ ಹೋರಾಟ ಇನ್ನೊಂದು ಚಾರಿತ್ರಿಕ ಹೋರಾಟವಾಗಲಿದೆ. ನಿಮ್ಮನ್ನೊಂದಿಗೆ ಸಂಪೂರ್ಣ ಭಾಗವಹಿಸಿ ಹೋರಾಟಕ್ಕೆ ಬೆಂಬಲಿಸುತ್ತೇವೆ ಎಂದರು. ವಿಮಾ ನೌಕರರ ಮುಖಂಡರಾದ ನಾಗರಾಜ್ ಮಾತನಾಡಿ, ನೈಜ ಹೋರಾಟಕ್ಕೆ ಯಶಸ್ಸು ಸಿಕ್ಕೇ ಸಿಗುತ್ತದೆ. ನಾವು ನಮ್ಮ ಹೋರಾಟಕ್ಕೆ ಜನಬೆಂಬಲ ಗಳಿಸಬೇಕು. 1.5 ಕೋಟಿ ಸಹಿ ಸಂಗ್ರಹ ಮಾಡಿ ಜನಾಭಿಪ್ರಾಯ ರೂಪಿಸಿ ನಡೆಸಿದ ಹೋರಾಟದಿಂದ ಸಾರ್ವಜನಿಕ ಸಂಸ್ಥೆಯಾದ ವಿಮಾ ಸಂಸ್ಥೆಯ ಖಾಸಗೀಕರಣವನ್ನು ತಪ್ಪಿಸುವುದು ಸಾಧ್ಯವಾಯಿತು. ಇದೀಗ ಜನವಿರೋಧಿ ಪೇಟೆಂಟ್ ಕಾಯ್ದೆಗಳಿಗೆ ಹಲವು ಜನಪರ ತಿದ್ದುಪಡಿ ತರುವುದು ಸಾಧ್ಯವಾಯ್ತು. ಎಡಪಕ್ಷಗಳು ಈ ರೀತಿ ಜನಪರ ಹೋರಾಟ ಮಾಡುತ್ತಿವೆ. ಇದನ್ನು ಕಾರ್ಮಿಕರು ಅರ್ಥಮಾಡಿಕೊಳ್ಳಬೇಕು. ಸಿಪಿಐ(ಎಂ) ಮತ್ತು ಎಡಪಕ್ಷಗಳನ್ನು ಬಿಟ್ಟರೆ ಉಳಿದೆಲ್ಲಾ ಪಕ್ಷಗಳೂ ಬಂಡವಾಳಶಾಹಿ ರಾಜಕೀಯ ಪಕ್ಷಗಳು, ಕಾರ್ಮಿಕ ವರ್ಗದ ರಾಜಕೀಯ ಜಾಗೃತಿಯಿಂದ ಮಾತ್ರ, ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದರು.

ಬಂಡವಾಳಶಾಹಿ ತನ್ನ ಘೋರಿಯನ್ನು ತಾನೇ ತೋಡಿಕೊಳ್ಳುತ್ತದೆ

ಕಾರ್ಮಿಕರ ಪರಿಸ್ಥಿತಿ ನೋಡಿದರೆ ನಾವು 17-18ನೇ ಶತಮಾನದಲ್ಲಿದ್ದೇವೋ? ಅಥವಾ 21ನೇ ಶತಮಾನದಲ್ಲಿದ್ದೇವೋ ಎಂಬ ಅನುಮಾನ ಬರುತ್ತಿದೆ. ಆಗ ಕಾರ್ಮಿಕರನ್ನು ಪಶುಗಳಿಗಿಂತ ಕಡೆಯಾಗಿ ದುಡಿಸಿಕೊಳ್ಳುತ್ತಿದ್ದರು. ಇಂದು ಬಂಡವಾಳಶಾಹಿಗಳ ಲಾಭಕೋರತನದಿಂದ ಕಾರ್ಮಿಕರಿಗೆ ಈ ಸ್ಥಿತಿ ಬಂದಿದೆ.

ಕಾರ್ಮಿಕ ವರ್ಗದ ರಕ್ತ ಹೀರುವ ಬಂಡವಾಳ ಶಾಹಿಗಳ ಗುಣ ಎಂದಿಗೂ ಬದಲಾಗುವುದಿಲ್ಲ ಎಂಬುದಕ್ಕೆ ಟಯೋಟಾ ಕಿರ್ಲೋಸ್ಕರ್ ಮಾಲೀಕವರ್ಗದ ಧೋರಣೆಯೇ ಸಾಕ್ಷಿ. ಒಂದೊಂದು ಬಹುರಾಷ್ಟ್ರೀಯ ಕಂಪನಿಗಳು ದೇಶ ದೇಶಗಳ ಒಟ್ಟು ಆದಾಯವನ್ನು ಮೀರಿಸುವಂತಿರುತ್ತವೆ. ರಾಷ್ಟ್ರಗಳ ಸರ್ಕಾರಗಳ ಬಲವನ್ನು ಮೀರಿಸುವ ಶಕ್ತಿಯನ್ನು ನಾವು ಎದುರಿಸುತ್ತಿದ್ದೇವೆ. ಅದಕ್ಕೆ ತಕ್ಕಂತಹ ಕಾರ್ಮಿಕ ಐಕ್ಯತೆ ಅಗತ್ಯ. ಇದು ಇಡೀ ಕಾರ್ಮಿಕ ವರ್ಗದ ಹೋರಾಟವಾಗಿ ಮೂಡಿಬರುವ ಲಕ್ಷಣ ಕಾಣುತ್ತಿದೆ. ಬಂಡವಾಳಶಾಹಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತದೆ. ಎಂದು ಸ್ವತ: ಮಾರ್ಕ್ಸ್ ನುಡಿದಿದ್ದಾರೆ. ಇದು ಹೊಸ ಅಧ್ಯಾಯ ಬರೆಯುವಂತಹ ಸಮಾವೇಶ ಮತ್ತು ಚಳುವಳಿ ಎಂದ ಕೃಷಿ ಕೂಲಿಕಾರರ ಮುಖಂಡ ಕಾಂ.ನಿತ್ಯಾನಂದಸ್ವಾಮಿ, ರಾಜ್ಯದ ಕೃಷಿ ಕೂಲಿಕಾರರ ಪರವಾಗಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಕಾರ್ಮಿಕ ಮುಖಂಡ ಕಾಂ.ಎಚ್.ಎನ್. ಗೋಪಾಲಗೌಡ ಮಾತನಾಡಿ ಟಯೋಟ ಕಿರ್ಲೋಸ್ಕರ್ ಮಾಲೀಕರು ಎಲ್ಲಿಗೂ ಓಡಿಹೋಗೋದಿಲ್ಲ. ನಮ್ಮ ದೇಶದಲ್ಲಿ ಅಪಾರ ಮಾನವ ಸಂಪನ್ಮೂಲ ಇದೆ. ಅದನ್ನು ಲೂಟಿ ಹೊಡೆಯಲು ಅವರು ಬಂದಿದ್ದಾರೆ. ಕಡಿಮೆ ಕೂಲಿ ಕೊಟ್ಟು ದುಡಿಸಿಕೊಳ್ಳಲು ಹವಣಿಸಿರುವ ಈ ಮಾಲೀಕರು ಇತರ ರಾಜ್ಯಗಳಿಗೆ ಹೋಗುವುದಾಗಿ ಹೇಳುತ್ತಿರುವುದು ಒಂದು ಬ್ಲಾಕ್ ಮೈಲ್ ತಂತ್ರವಷ್ಟೇ. ಕಾರ್ಮಿಕರ ಐಕ್ಯತೆಯೇ ಯಶಸ್ಸನ್ನು ಸಾಧಿಸುವ 'ಟೂಲ್' (ಸಾಧನ). ನಿತ್ಯ ಟೂಲ್ ಬಳಸುವ ಕಾರ್ಮಿಕರು ಇದನ್ನು ಅರ್ಥ ಮಾಡಿಕೊಳ್ಳಿ ಎಂದರು.

ಬ್ಯಾಂಕ್ ನೌಕರರ ಮುಖಂಡ ರತ್ನಾಕರ ಶೆಣೈರವರು ಮಾತನಾಡಿ, ಮಹಾಭಾರತದ ದುರುಳ ದುರ್ಯೋಧನನನ್ನು ಮುಗಿಸಿದ್ದು ಹೇಗೆ? ಆತ ಬೆದರಿ ವೈಶಂಪಾಯನ ಸರೋವರದಲ್ಲಿ ನೀರಿನಾಳದಲ್ಲಿ ಅಡಗಿ ಕುಳಿತಿದ್ದರೂ ಬಿಡದೆ ಹೊರಗೆಳೆದು ಸಂಹರಿಸಲಾಯಿತು. ಹಾಗೆಯೇ ಟಯೋಟ ಮಾಲೀಕ ಎಲ್ಲಿಗೆ ಹೋದರು ಕಾರ್ಮಿಕ ವರ್ಗ ಬಿಡದು. ಹರ್ಯಾಣ ಉತ್ತರಾಂಚಲದಲ್ಲಿಯೂ ಸಿಐಟಿಯು ಇದೆ. ಸುಮ್ಮನೆ ಬಿಡುವುದಿಲ್ಲ ಎಂದು ಘೋಷಿಸಿದರು.


ವೇದಿಕೆ ಮೇಲಿದ್ದ ಎಲ್ಲಾ ಸಂಘಗಳ ಮತ್ತು ಇತರೆ ಸಂಘಗಳ ಮುಖಂಡರನ್ನೊಳಗೊಂಡ ಸೌಹಾರ್ದ ಸಮಿತಿಯನ್ನು ಸರ್ವಾನುಮತದಿಂದ ರಚಿಸಲಾಯಿತು.

ಅಧ್ಯಕ್ಷೀಯ ಭಾಷಣ ಮಾಡಿದ ಮೈಕೊ ಕಾರ್ಮಿಕ ಸಂಘದ ಮುಖಂಡರಾದ ಕಾಮ್ರೇಡ್ ಶಿವಶಂಕರ್‌ರವರು ಇದು ಕೇವಲ ಟಯೋಟ ಕಾರ್ಮಿಕರ ಹೋರಾಟವಲ್ಲ. ಇಡೀ ಕಾರ್ಮಿಕವರ್ಗದ ಹೋರಾಟ. ಈ ಹೋರಾಟ ಏನಾಗಲಿದೆ ಎಂದು ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಬಂಡವಾಳಿಗರು ಕುತೂಹಲದಿಂದ ನೋಡುತ್ತಿದ್ದಾರೆ. ಜಯ ಕಾರ್ಮಿಕ ವರ್ಗದ್ದು. ಈ ಸಂದೇಶವನ್ನು ಎಲ್ಲೆಡೆ ಕಳಿಸೋಣ. ಸಂಘಟಿತ ಸಾಮೂಹಿಕ ಹೋರಾಟ ನಡೆಸೋಣ ನಮ್ಮ ಸಂಘ ಎಲ್ಲಾ ರೀತಿಯ ಬೆಂಬಲ ನೀಡುತ್ತದೆ ಎಂದು ತಿಳಿಸಿ ನಂತರ ಅವರು ವಂದನಾರ್ಪಣೆ ಮಾಡಿದರು.

ಟಯೋಟಾ ಕಾರ್ಮಿಕರ ಹೋರಾಟದ ಕುರಿತ ನಿರ್ಣಯವನ್ನು ಸರ್ವಾನುಮತದಿಂದ ಸಮಾವೇಶ ಅಂಗೀಕರಿಸಿತು. ಆರಂಭದಲ್ಲಿ 'ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು" ಎಂಬ ಕ್ರಾಂತಿಗೀತೆಯೊಂದಿಗೆ ಸಮಾವೇಶಕ್ಕೆ ಚಾಲನೆ ನೀಡಲಾಯಿತು. "ಗೆಲುವು ನಮ್ಮದು" ಹಾಡಿನೊಂದಿಗೆ ಸಮಾವೇಶ ಅಂತ್ಯಗೊಂಡಿತು. ಟಯೋಟ ಕಿರ್ಲೋಸ್ಕರ್ ಮೋಟಾರ್ಸ್ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ.ಸತೀಶ್, ಕಾರ್ಯದರ್ಶಿ ಕಾಂ. ದೀಪಕ್ ಮುಂತಾದವರು ವೇದಿಕೆಯ ಮೇಲಿದ್ದರು.

ಟಿಕೆಎಂ ಕಾರ್ಮಿಕ ಸಂಘದ ಸಹ ಕಾರ್ಯದರ್ಶಿ ಪ್ರಸನ್ನಕುಮಾರ್ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಮುಷ್ಕರ ನಡೆಸಲು ಸರ್ವಾನುಮತ ನಿರ್ಣಯ ಕೈಗೊಂಡಿರುವ ಸಂಘದ ಸರ್ವಸದಸ್ಯರ ಸಮಿತಿಯು ದಿನಾಂಕ ನಿಗದಿಗೊಳಿಸಲು ಸಂಘದ ಪದಾಧಿಕಾರಿಗಳಿಗೆ ಅಧಿಕಾರ ನೀಡಿದೆ. ಜುಲೈ 20 ರಂದು ನಗರದ ಚಿಕ್ಕಲಾಲ್‌ಬಾಗ್‌ನಿಂದ ಮುಖ್ಯಮಂತ್ರಿಗಳ ಮನೆಯವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಪ್ರತಿಭಟಿಸಲು ತೀರ್ಮಾನಿಸಲಾಗಿದೆ.



ಕುರುಡು ಕಾಂಚಾಣ

ಜಿ.ಎಸ್.ಮಣಿ

ಕಡಿಮೆ ಬೆಳವಣಿಗೆ ದರ - ಆರ್ಥಿಕ ನಿಧಾನ

ಇದನ್ನು ಹೇಳಿದವರು ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯವರು. ದೇಶದ ಆರ್ಥಿಕ ಬರೀ 6.7ರ ಬೆಳವಣಿಗೆ ದರವನ್ನು ಕಾಣಬಹುದು ಎಂಬುದು ಈ ಸಲಹಾ ಮಂಡಳಿಯವರ ಹೇಳಿಕೆ. ಇದಕ್ಕೆ ಆಧಾರ ಕೃಷಿ ಕ್ಷೇತ್ರದಲ್ಲಿ ಬರೀ ಶೇ 1.8ರ ಬೆಳವಣಿಗೆ. ಉತ್ಪಾದನಾ ಕ್ಷೇತ್ರದಲ್ಲಿ ಶೇ.7ರ ಬೆಳವಣಿಗೆ.

ಈ ಎಲ್ಲ ಬೆಳವಣಿಗೆ ದರಗಳಿಗೆ ಅವರು ಸಾಕಷ್ಟು ವಿವರಣೆಗಳನ್ನು ನೀಡುತ್ತಾರೆ. ಈ ವಿವರಣೆ ಮುಖ್ಯವಲ್ಲ. ಯಾಕೆಂದರೆ ಪ್ರಧಾನ ಮಂತ್ರಿಗಳಿಗೆ ಇಂತಹ ಎಚ್ಚರಿಕೆ ನೀಡುವ ಅವರ ಉದ್ದೇಶಗಳೇನು ಎಂಬುದು ಮುಖ್ಯ.

ಅವರ ಉದ್ದೇಶ ಇನ್ನೂ ಹೆಚ್ಚಿನ ಬೆಳವಣಿಗೆ ದರ ಸಾಧಿಸಬೇಕೆಂದರೆ. ಇನ್ನೂ ಹೆಚ್ಚಿನ ಉದಾರೀಕರಣ ಮಾಡಬೇಕು. ದೇಶದೊಳಗೆ ಹೂಡಿಕೆಗಳನ್ನು ಪ್ರೋತ್ಸಾಹಿಸಬೇಕು. ಈ ಹೂಡಕೆಗಳು ವಿದೇಶೀ ಮೂಲಗಳಿಂದ ಬರಬೇಕು. ಹೀಗೆ ವಿದೇಶೀ ಮೂಲಗಳಿಂದ ಹೂಡಿಕೆ ಹರಿದು ಬರಲು ಆರ್ಥಿಕ ಉದಾರೀಕರಣ ಇನ್ನೂ ಹೆಚ್ಚು ಪ್ರಮಾಣದಲ್ಲಿ ಆಗಬೇಕು.

ಬೆಳವಣಿಗೆ ದರ ಕುಸಿಯುತ್ತಿದೆ ಎಂದು ಎಚ್ಚರಿಕೆ ನೀಡುವವರ ಉದ್ದೇಶ ಸ್ಪಷ್ಟವಲ್ಲವೇ? ಆರ್ಥಿಕವನ್ನು ಇನ್ನೂ ಹೆಚ್ಚು ಉದಾರೀಕರಿಸಿ ಅದರಿಂದ ಸಮಸ್ಯೆ ಬಗೆಹರಿಯುತ್ತದೇ ಎಂಬುದೇ ಅವರ ಹೇಳಿಕೆ. ಅದೆ ಉದಾರೀಕರಣ ಕೊನೆಯಿಲ್ಲದ ಜಾರುಬಂಡಿ. ಒಮ್ಮೆ ಜಾರಲು ಪ್ರಾರಂಭಿಸಿದರೆ ಮತ್ತೆ ನಿಲ್ಲುವ ಮಾತಿಲ್ಲ ಜಾರುತ್ತಲೇ ಇರಬೇಕು.

ಸಾಮ್ರಾಜ್ಯಶಾಹಿಗಳ ಬಯಕೆಯೂ ಇದೆ.

ಬಿಹೆಚ್ಇಎಲ್‌ನ ಖಾಸಗೀಕರಣದ ಹುನ್ನಾರ

ಯುಪಿಎ ಸರ್ಕಾರ ಕಾಶಿ ಕೆಂಡದ ಮಾತನಾಡುತ್ತಲೇ ಮಸಿ ಕೆಂಡ ತಿನ್ನುತ್ತದೆ. ಕಾಂಗ್ರೆಸ್ ನೇತೃತ್ವದ ಈ ಸರ್ಕಾರದಲ್ಲಿ ಇಂತಹ ತಂತ್ರಗಳಲ್ಲಿ ನಿಸ್ಸೀಮರಾಗಿರುವ ಮಂತ್ರಿಗಳಿದ್ದಾರೆ. ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಪ್ರಕಾರ ಲಾಭದಾಯಕ ಸಾರ್ವಜನಿಕ ವಲಯದ ಘಟಕಗಳನ್ನು ಮುಟ್ಟಲೇಬಾರದಾದರೂ ಕೇಂದ್ರ ಸರ್ಕಾರ ಬಿಹೆಚ್ಇಎಲ್‌ನಲ್ಲಿನ ಶೇ.10ರಷ್ಟು ಶೇರುಗಳನ್ನು ವಿಕ್ರಯ ಮಾಡುವ ತೀರ್ಮಾನ ತೆಗೆದುಕೊಂಡಿದೆ.

ಇದು ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಪೂರ್ಣ ಉಲ್ಲಂಘನೆ. ಬ್ಯಾಂಕ್ ಫಂಡ್ ನೀತಿಗಳಿಗೇ ಹೆಚ್ಚು ಆತುಕೊಂಡಂತಿರುವ ಕಾಂಗ್ರೆಸಿಗರಿಗೆ ಈ ದೇಶದ ಜನರ ಪರ ಕೆಲಸ ಮಾಡುವ ಇಚ್ಛೆ ಸಂಕಲ್ಪ ಎರಡೂ ಇಲ್ಲವೆನ್ನುವುದು ಸ್ಪಷ್ಟ. ಆರ್ಥಿಕ ನೀತಿಗಳ ವಿಷಯಗಳಲ್ಲಿ ಬಿಜೆಪಿಯಂತೇ ವಿಚಾರ ಮಾಡುವ ಕಾಂಗ್ರೆಸ್ ತನ್ನ ಸ್ವಂತಿಕೆಯನ್ನು ಉಳಿಸಿಕೊಳುವುದೇ ಕಷ್ಟ.

ಈ ಖಾಸಗೀಕರಣದ ಕ್ರಮವನ್ನು ತೀವ್ರವಾಗಿ ವಿರೋಧಿಸಿರುವ ಸಿಪಿಐ(ಎಂ) ಪಾಲಿಟ್ ಬ್ಯೂರೋ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಉಲ್ಲಂಘನೆ ಮಡುತ್ತಲೇ ಹೋದರೆ ಎಡಪಕ್ಷಗಳ ಬೆಂಬಲ ಇದ್ದೇ ಇರುತ್ತದೆನ್ನುವ ಗ್ಯಾರಂಟಿ ಇಟ್ಟುಕೊಳ್ಳುವುದು ಬೇಡ ಎಂದೇ ಎಚ್ಚರಿಕೆ ನೀಡಿದೆ.

ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಂ ಅವರ ಮಾತುಗಳನ್ನು ವಿಶ್ಲೇಷಿಸುತ್ತ ಹೋದರೆ ಖಾಸಗೀಕರಣದ ಯಾವುದೇ ಅವಕಾಶವನ್ನು ಅವರು ಬಿಟ್ಟುಕೊಡಲಾರರು ಎನಿಸುತ್ತದೆ. ಅಲ್ಲದೆ ಅವರ ಮಾತುಗಳಲ್ಲಿ ಎಡಪಕ್ಷಗಳಿರುವುದರಿಂದ ಹೀಗೆ ಕಡಿವಾಣ ಹಾಕಿಕೊಳ್ಳಬೇಕಾಗಿದೆ ಎಂಬ ಧೋರಣೆ ಎದ್ದು ಕಾಣುತ್ತದೆ.

ಸಿಪಿಐ(ಎಂ) ನೇತೃತ್ವದ ಎಡಪಕ್ಷಗಳಿಗೆ ಇದು ನಿಜವಾದ ಜನಮನ್ನಣೆ ಅಲ್ಲವೆ?

ವಿದೇಶೀ ಕಂಪನಿಗಳನ್ನು ಕೊಳ್ಳಲು ಬ್ಯಾಂಕ್ ಸಾಲ

ಭಾರತದಲ್ಲಿನ ಕಂಪನಿಗಳು ವಿದೇಶೀ ಕಂಪನಿಗಳನ್ನು ಕೊಳ್ಳಬಯಸಿದರೆ ಅದಕ್ಕೆ ಬ್ಯಾಂಕುಗಳು ಸಾಲ ನೀಡಬಹುದು. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಕಟಣೆ ಪ್ರಕಾರ ಬ್ಯಾಂಕುಗಳು ಸಾಗರೋತ್ತರ ಅಂದರೇ ವಿದೇಶೀ ಕಂಪನಿಗಳನ್ನು ಕೊಳ್ಳಬಯಸಿದರೆ ಅದಕ್ಕೆ ಸಾಲ ಕೊಡಬಹುದು. ದೇಶಿ ಬಂಡವಾಳಿಗರು ವಿದೇಶಗಳಲ್ಲಿ ತಮ್ಮ ಉದ್ಯಮ ಬೆಳೆಸಲು ಬ್ಯಾಂಕುಗಳು ಸಾಲ ನೀಡಬಹುದು ಎಂಬುದೇ ಇದರ ಅರ್ಥ. ಇದರಲ್ಲಿ ತಪ್ಪೇನು ಎಂದು ಯಾರಾದರೂ ಕೇಳಬಹುದು. ಹಾಗೆ ಕೇಳಿದರೆ ಇದರಲ್ಲಿ ತಪ್ಪೇನೂ ಕಾಣುವುದಿಲ್ಲ. ಆದರೆ ನಮ್ಮ ದೇಶದಲ್ಲಿ ಬ್ಯಾಂಕ್ ಸಾಲ ಬಹಳ ತುಟ್ಟಿಯಾದ ವಿರಳ ಸರಕು ಎಂಬುದನ್ನು ಗಮನ ದಲ್ಲಿಟ್ಟು ಕೊಂಡರೆ ಈ ಕ್ರಮದ ವರ್ಗಬೇಧ ಕಾಣಿಸುತ್ತದೆ. ನಮ್ಮದೇಶದಲ್ಲಿ ಈಗ ಆದ್ಯತಾ ವಲಯ ಎಂಬ ಪರಿಕಲ್ಪನೆಯನ್ನೇ ತಿರುಚಿ ಶ್ರೀಮಂತರೂ ಈ ವಲಯದಡಿ ಬರುವಂತೆ ಮಾಡಲಾಗುತ್ತಿದೆ. ನಿಜವಾದ ಬಡವನಿಗೆ ಹಣಕಾಸಿನ ನೆರವಿನ ಕೊರತೆ ಎದ್ದು ಕಾಣುತ್ತದೆ. ಕೃಷಿ ವಲಯಕ್ಕೆ ಹಣಕಾಸಿನ ನೆರವು ದೊರಯದೇ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಉಂಟಾದದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಎಲ್ಲರಿಗೂ ಹಣಕಾಸಿನ ನೆರವು ಲಭ್ಯಗೊಳಿಸಿಕೊಡುವಷ್ಟು ಶ್ರೀಮಂತ ದೇಶವಲ್ಲ ನಮ್ಮದು. ಆದ್ದರಿಂದಲೇ ಲಭ್ಯವಿರುವ ಬಂಡವಾಳ ವನ್ನು ಅತಿ ಎಚ್ಚರಿಕೆಯಿಂದ ಅತ್ಯಂತ ಅವಶ್ಯಕತೆ ಇರುವವರಿಗೆ ಲಭ್ಯಗೊಳಿಸುವುದು ದೇಶದ ಆದ್ಯ ಕರ್ತವ್ಯ. ಆದರೆ ಈಗ ಬಂಡವಾಳಿಗರು ವಿದೇಶೀ ಕಂಪನಿಗಳನ್ನು ಕೊಳ್ಳುವುದೇ ಆದ್ಯ ಉದ್ದೇಶವಾಗಿ ಪರಿಣಮಿಸಿ ಹೋಗಿದೆ.

'ಹೇಗಿದೆ ಈ ಸಾಲದ ನೀತಿ?'

......ತುರ್ತುಪರಿಸ್ಥಿತಿಯಲ್ಲಿ ಕಮ್ಯೂನಿಸ್ಟರ ಪಾತ್ರ

ಪುಟ 7ರಿಂದ

ಮೂಲಭೂತ ಭಿನ್ನಾಭಿಪ್ರಾಯಗಳಿವೆ ಎಂದು ಬೇಗನೇ ತಿಳಿಯಿತು.

'ತುರ್ತುಪರಿಸ್ಥಿತಿ'ಯ ರಚನೆಗಳನ್ನು ಕಳಚಿಹಾಕುವ ಕೆಲಸದಲ್ಲಿ ಹಿಂದೇಟು ಹಾಕಿದ್ದಲ್ಲದೆ ಕೇಂದ್ರ ಸರ್ಕಾರ ಹಾಗೂ ಜನತಾಪಾರ್ಟಿ ನೇತೃತ್ವದ ರಾಜ್ಯ ಸರ್ಕಾರಗಳು ದೇಶಾದ್ಯಂತ ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಹಾಗೂ ಪ್ರಜಾಪ್ರಭುತ್ವ ಆಂದೋಲನಗಳ ಮೇಲೆ ದಮನ ತರಲು ಪ್ರಯತ್ನಿಸಿದವು. ದಿಲ್ಲಿ ಮತ್ತು ಇತರೆಡೆಗಳಲ್ಲಿ ಹೊಸ ಆಡಳಿತಗಳ ಆರ್ಥಿಕ ನೀತಿಗಳಿಂದ ಜನಗಳಲ್ಲಿ ಉಂಟಾಗಿದ್ದ ಅಸಂತುಷ್ಟಿಯ ಪ್ರಯೋಜನವನ್ನು ಇಂದಿರಾಗಾಂಧಿ ಪಡೆಯುವಂತಾಯಿತು.

ಅತ್ತ ಬಂಗಾಳ, ತ್ರಿಪುರಾಗಳ ಎಡರಂಗ ಸರ್ಕಾರಗಳು ಪ್ರಜಾಪ್ರಭುತ್ವ ಹಕ್ಕುಗಳ ವಿಸ್ತರಣೆಯ ಕೆಲಸದಲ್ಲಿ ತೊಡಗಿದವು. ವಿಚಾರಣೆಯಿಲ್ಲದೆ ಜೈಲುವಾಸ, ಪ್ರಜಾಪ್ರಭುತ್ವ ಹಕ್ಕುಗಳ ಮರುಸ್ಥಾಪನೆ, ರಾಜಕೀಯ ಬಂಧಿಗಳ ಬಿಡುಗಡೆ, ಶಿಕ್ಷಣ ವ್ಯವಸ್ಥೆಯ ಪ್ರಜಾಪ್ರಭುತ್ವೀಕರಣ ಮತ್ತು ಮೂರು ಹಂತದ ಪಂಚಾಯತೀ ಸಂಸ್ಥೆಗಳಿಗೆ ಚುನಾವಣೆಗಳು ಎಡರಂಗ ಸರ್ಕಾರಗಳ ಆದ್ಯತೆಯ ಪ್ರಶ್ನೆಗಳಾಗಿದ್ದವು. ಎಡರಂಗ ಸರ್ಕಾರಗಳ ನೀತಿಗಳು ದುಡಿಯುವ ಜನಗಳಿಗೆ ಪರಿಹಾರ ಒದಗಿಸಿದವು. ಪ್ರಜಾಪ್ರಭುತ್ವ ಶಕ್ತಿಗಳು ಬಲಿಷ್ಟವಾದಂತೆ ಸರ್ವಾಧಿಕಾರಶಾಹಿ ಶಕ್ತಿಗಳು ದುರ್ಬಲಗೊಂಡವು.

ಮುಂದಿನ ಘಟ್ಟ

ಸರ್ವಾಧಿಕಾರಶಾಹಿಯ ಅಪಾಯದ ಬಗ್ಗೆ ಸಿಪಿಐ(ಎಂ) ಮುನೆಚ್ಚರಿಕೆ ಇಂದಿರಾಗಾಂಧಿ 1980 ರಲ್ಲಿ ಅಧಿಕಾರಕ್ಕೆ ಮರಳಿದಾಗ ಸಾಬೀತಾಯಿತು. ಎನ್‌ಎಸ್‌ಎ(ರಾಷ್ಟ್ರೀಯ ಭದ್ರತಾಕಾನೂನು) ಹಾಗೂ ಎಸ್ಮಾ (ಅಗತ್ಯ ಸೇವಾ ನಿರ್ವಹಣಾ ಕಾನೂನು) ತರಲಾಯಿತು. ಇವೆರಡೂ ಪ್ರಜಾಪ್ರಭುತ್ವ-ವಿರೋಧಿ ಕಾನೂನುಗಳು. ಆರ್ಥಿಕ ಪರಿಸ್ಥಿತಿ ಹದಗೆಡುತ್ತಿದ್ದುದರ ವಿರುದ್ಧ ಎದ್ದುಬರುವ ಪ್ರತಿಭಟನೆಗಳನ್ನು ಹತ್ತಿಕ್ಕಲಿಕ್ಕಾಗಿಯೇ ಇದನ್ನು ತರಲಾಗಿತ್ತು. ಎಸ್ಮಾವನ್ನು ಮುಷ್ಕರಗಳನ್ನು ನಿಷೇಧಿಸಲು ಬಳಸಲಾಯಿತು. ಪತ್ರವ್ಯವಹಾರಗಳ ಸೆನ್ಸಾರ್ ಶಿಪ್ ಬಂತು. ಸಂಸತ್ತನ್ನು ಅರ್ಥಹೀನಗೊಳಿಸಲಾಯಿತು. ರಾಜ್ಯಗಳ ಹಕ್ಕುಗಳಲ್ಲಿ ಹಸ್ತಕ್ಷೇಪ ಬರಲಾರಂಭಿಸಿತು. ಸರ್ವಾಧಿಕಾರಶಾಹಿ ಪ್ರವೃತ್ತಿಗೆ ಅನುಕೂಲವಾದ ಅಧ್ಯಕ್ಷೀಯ ಮಾದರಿಯನ್ನು ಪ್ರತಿಪಾದಿಸಲಾಯಿತು.

ಪ್ರತಿಪಕ್ಷಗಳಲ್ಲಿ ಭಿನ್ನಾಭಿಪ್ರಾಯ, ವಿಶೇಷವಾಗಿ ಬಿಜೆಪಿಯ ರಚನೆಯ ನಂತರ ಕಾಂಗ್ರೆಸ್‌ಗೆ ಅನುಕೂಲಕರವಾಯಿತು. ಏಕೆಂದರೆ ಬಿಜೆಪಿಗೆ ಈಗ ಸರ್ವಾಧಿಕಾರಶಾಹಿಯ ವಿರುದ್ಧ ರಂಗಗಳು, ಸಮ್ಮಿಶ್ರ ಕೂಟಗಳಲ್ಲಿ ಆಸಕ್ತಿಯಿರಲಿಲ್ಲ. ಈ ಹಿನ್ನೆಲೆಯಲ್ಲಿಯೇ ಸಿಪಿಐ(ಎಂ)ನ ಹನ್ನೊಂದನೇ ಮಹಾಧಿವೇಶನ ಸರ್ವಾಧಿಕಾರಶಾಹಿಯ ಸವಾಲು ಪ್ರಧಾನ ಅಪಾಯ ಎಂದು ಹೇಳಿತು.

ಇಂದಿರಾಗಾಂಧಿಯವರ ಹತ್ಯೆಯ ಹಾಗೂ ಲೋಕಸಭಾ ಚುನಾವಣೆಗಳ ನಂತರವೂ ಕಾಂಗ್ರೆಸ್ ಸರ್ವಾಧಿಕಾರಶಾಹಿ ದಾರಿಯಲ್ಲೇ ಮುಂದುವರೆಯಿತು. ಏಕೆಂದರೆ **ಆಳುವವರ್ಗಗಳ ಪಕ್ಷಗಳು ತಮ್ಮ ಜನ-ವಿರೋಧಿ ನೀತಿಗಳನ್ನು ಜಾರಿಗೆ ತರಬೇಕಾದರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಪ್ರಹಾರ ಮಾಡದೆ ಸಾಧ್ಯವಾಗುವುದಿಲ್ಲ. ಸಿಪಿಐ(ಎಂ)ನ ಹನ್ನೆರಡನೇ ಮಹಾಧಿವೇಶನ ಇದನ್ನು ಗಮನಿಸಿತು.** ಬುಡಮಟ್ಟದಲ್ಲಿ ಪ್ರಜಾಪ್ರಭುತ್ವದ ಮೇಲೆ ಪ್ರಹಾರ ನಡೆಯಿತು. ಎನ್‌ಎಸ್‌ಎ ಮುಂದುವರೆಯಿತು. ಮೀಸಾ (ಆಂತರಿಕ ಭದ್ರತಾ ಕಾನೂನು) ಮತ್ತೆ ಬಂತು. ಮುಷ್ಕರ ಕಾರ್ಯಾಚರಣೆಗಳ ಮೇಲೆ ಪ್ರಹಾರ ನಡೆಯಿತು. ಆಂಧ್ರಪ್ರದೇಶ ಸರ್ಕಾರವನ್ನು ವಜಾ ಮಾಡಲಾಯಿತು. ಸರ್ಕಾರಿ ಮಾಧ್ಯಮವನ್ನು ಕಾಂಗ್ರೆಸ್‌ನ ಹಿತಾಸಕ್ತಿಗಳಿಗಾಗಿ ದುರುಪಯೋಗ ಪಡಿಸಲಾಯಿತು.

ಅದೇ ವೇಳೆಗೆ ಪ್ರತ್ಯೇಕತಾವಾದದ ಅಪಾಯ ಪಂಜಾಬ್, ಅಸ್ಸಾಂ, ಈಶಾನ್ಯ ಭಾರತ ಮತ್ತಿತರ ಕಡೆಗಳಲ್ಲಿ ತಲೆ ಎತ್ತಲಾರಂಭಿಸಿತು. ಕಾಂಗ್ರೆಸ್ಸಿನ ಸಮಯಸಾಧಕ ನಿಲುವು ಅಪಾಯವನ್ನು ಇನ್ನಷ್ಟು ಹೆಚ್ಚಿಸಿತು. ಕಾಂಗ್ರೆಸ್ ಅಧಿಕಾರದಲ್ಲಿರುವುದು ಪ್ರಜಾಪ್ರಭುತ್ವಕ್ಕೆ ಅಪಾಯ ಮಾತ್ರವಲ್ಲ, ರಾಷ್ಟ್ರೀಯ ಐಕ್ಯತೆಗೂ ಅಪಾಯ ಎಂದು ಸಿಪಿಐ(ಎಂ) ಹನ್ನೆರಡನೇ ಮಹಾಧಿವೇಶನ ಗಮನಿಸಿತು.

ಎಡ-ಪ್ರಜಾಪ್ರಭುತ್ವ ಐಕ್ಯತೆ

ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳ ಐಕ್ಯತೆಯನ್ನು ಕಟ್ಟುವ ಪ್ರಕ್ರಿಯೆ ಮುಖ್ಯವಾಗಿ ಸಿಪಿಐ(ಎಂ) ಮುತುವರ್ಜಿಯಿಂದ ಮತ್ತೆ ಆರಂಭವಾಯಿತು. ಬಂಗಾಲದ ಎಡರಂಗ ಇದರಲ್ಲಿ ಪ್ರಮುಖ ಪಾತ್ರವಹಿಸಿತು. ಸಿಪಿಐ ತನ್ನಮಹಾಧಿವೇಶನದ ನಂತರ ಕಾಂಗ್ರೆಸ್‌ನೊಂದಿಗೆ ಸಹಕಾರದ ಮಾರ್ಗ ಬಿಟ್ಟು ಎಡಶಕ್ತಿಗಳನ್ನು ಸೇರಿಕೊಂಡಿತು. ಸಂಸದೀಯ ಮಟ್ಟದಲ್ಲಿ ಎಡಪಕ್ಷಗಳ ಸಮನ್ವಯ ಸಮಿತಿ ರಚನೆಗೊಂಡಿತು. ಎಡ ಐಕ್ಯತೆಯಿಂದಾಗಿ ಸಾಮೂಹಿಕ ಹೋರಾಟಗಳು ವಿಸ್ತಾರಗೊಂಡವು. ಈ ಎಡಐಕ್ಯತೆ ವಿರೋಧಿ ಬೂರ್ಜ್ವಾ ಪಕ್ಷಗಳೊಂದಿಗೆ ಸಂಬಂಧಗಳನ್ನು ರೂಪಿಸುವಲ್ಲಿ ಪಾತ್ರವಹಿಸಿತು.

ವಿರೋಧಿ ಬೂರ್ಜ್ವಾ ಪಕ್ಷಗಳಲ್ಲಿ ಎರಡು ಅಂಶಗಳು ಕಂಡುಬಂದವು. ಮೊದಲನೆಯದಾಗಿ, ಕೋಮುವಾದಿ ಶಕ್ತಿಗಳ ಅಪಾಯ ಹೆಚ್ಚುತ್ತಿರುವುದರಿಂದ ಒಂದು ಜಾತ್ಯತೀತ ನಿಲವು ಅಗತ್ಯ ಸೂಚಕವಾಯಿತು. ಎರಡನೆಯದಾಗಿ, ಪ್ರಾದೇಶಿಕ ಪಕ್ಷಗಳ ಬಲ ಹೆಚ್ಚಿದ್ದರಿಂದ ಪ್ರಜಾಪ್ರಭುತ್ವ ರಕ್ಷಣೆಯಲ್ಲಿ ಅವುಗಳ ಮಹತ್ವಹೆಚ್ಚಿತು. 17-18 ವಿರೋಧಿ ರಾಜಕೀಯ ಪಕ್ಷಗಳ ನಾಲ್ಕು ಸಮ್ಮೇಳನಗಳು ವಿಜಯವಾಡ, ದಿಲ್ಲಿ, ಶ್ರೀನಗರ ಮತ್ತು ಕೋಲ್ಕತ್ತಾಗಳಲ್ಲಿ ನಡೆದವು. ಈ ಬೆಳವಣಿಗೆಗಳಿಂದಾಗಿ ಪ್ರಜಾಪ್ರಭುತ್ವ ರಕ್ಷಣೆಯ ಪ್ರಶ್ನೆಯ ಮೇಲೆ ಹೆಚ್ಚೆಚ್ಚು ದೊಡ್ಡ ಸಾಮೂಹಿಕ ರ್‍ಯಾಲಿಗಳು ನಡೆದವು.

ಕೋಮುವಾದೀ ಅಪಾಯ

ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ, ಬಲಪಡಿಸುವ ಹೋರಾಟದ ವಿಚಾರವನ್ನು ಚರ್ಚಿಸುವಾಗ ಕೋಮುವಾದೀ ಪಿಡುಗನ್ನು ಪ್ರಸ್ತಾಪಿಸದಿರಲು ಸಾಧ್ಯವಿಲ್ಲ. ಇತಿಹಾಸದ ಸರಿಯಾದ ವಿಶ್ಲೇಷಣೆಗೆ, ವರ್ತಮಾನವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಹಾಗೂ ಭವಿಷ್ಯದ ಹೋರಾಟಗಳನ್ನು ರೂಪಿಸಲು ಇದು ಅತ್ಯಗತ್ಯ.

1977 ರ ಚುನಾವಣೆಗಳ ಮೊದಲು ಜನತಾಪಾರ್ಟಿ ರಚನೆಗೊಂಡಿತು. ಜನಸಂಘ ಅದರ ಘಟಕಗಳಲ್ಲಿ ಒಂದು. ಅದು ಆರ್‌ಎಸ್‌ಎಸ್ ನ ಮಾರ್ಗದರ್ಶನದಲ್ಲಿ ನಡೆಯುತ್ತಿತ್ತು. ಈ ಆರ್‌ಎಸ್‌ಎಸ್ ದಿಲ್ಲಿಯಲ್ಲಿನ ಹೊಸ ಆಡಳಿತದ ಮೇಲೆ ಆರಂಭದಿಂದಲೇ ಹತೋಟಿ ಹೊಂದಲಾರಂಭಿಸಿತು. ಇದರಿಂದ ಹಿಂದೂ ಕೋಮುವಾದ ದೊಡ್ಡ ಪ್ರಮಾಣದಲ್ಲಿ ಬೆಳೆಯಿತು. ಜನತಾಪಕ್ಷದೊಳಗಿನ ಜನಸಂಘದ ಸದಸ್ಯರು ತಮಗೆ ಆರ್‌ಎಸ್‌ಎಸ್‌ನ ಸದಸ್ಯತ್ವವವನ್ನು ಹೊಂದುವ ಅವಕಾಶ ಇರಬೇಕು ಎಂದು ವಾದಿಸಿದರು. ಇದರಿಂದ ಜನತಾಪಾರ್ಟಿಯೊಳಗ್ಗಿನ ಒಡಕು ತೀವ್ರಗೊಂಡಿತು.

ಸಿಪಿಐ(ಎಂ) ಬಹಳ ಹಿಂದಿನಿಂದಲೇ ಜನಸಂಘ ಮತ್ತು ಆರ್‌ಎಸ್‌ಎಸ್ ನ ಬಗ್ಗೆ ಎಚ್ಚರಿಕೆ ನೀಡಿತ್ತು. ಸರ್ವಾಧಿಕಾರಶಾಹಿ ಕಾಂಗ್ರೆಸ್ ಮತ್ತು ಕೋಮುವಾದಿ ಜನಸಂಘ- ಆರ್‌ಎಸ್‌ಎಸ್ 'ಅವಳಿ ಅಪಾಯ'ಗಳು ಎಂದು 1974 ರಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿತ್ತು. ಜನತಾಪಾರ್ಟಿಯ ಜುಲೈ ಬಿಕ್ಕಟ್ಟಿನ ಬಗ್ಗೆ ಸಿಪಿಐ(ಎಂ) ತಳೆದ ನಿಲುವೆಂದರೆ ಈಗ ಉಳಿದಿರುವ ಪಕ್ಷದಲ್ಲಿ ಕೆಲವು ಸಮಾಜವಾದಿ, ಪ್ರಗತಿಪರ ವ್ಯಕ್ತಿಗಳಿದ್ದರೂ ಅದು ಜನಸಂಘ - ಆರ್‌ಎಸ್‌ಎಸ್ ಹತೋಟಿಯಲ್ಲಿದೆ, ಆದ್ದರಿಂದ ಅದನ್ನು ಬೆಂಬಲಿಸಲು ಸಾಧ್ಯವಿಲ್ಲ ಎಂದು. ಸರ್ವಾಧಿಕಾರಶಾಹಿ ಮತ್ತು ಕೋಮುವಾದದ ವಿರುದ್ಧ ಹೋರಾಟದೊಂದಿಗೆ ಜನಗಳ ಹಿತಾಸಕ್ತಿಗಳ ರಕ್ಷಣೆಗೆ ಹಾಗೂ ಅವರಿಗೆ ತಾತ್ಕಾಲಿಕ ಪರಿಹಾರಗಳನ್ನಾದರೂ ಒದಗಿಸಲಿಕ್ಕೆ ಹೋರಾಟಗಳೂ ನಡೆಯಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿತು.

ರಾಜಕೀಯ ಪಕ್ಷಗಳು 1987-88 ರಲ್ಲಿ ಕೋಮುವಾದಿ ಶಕ್ತಿಗಳು ಬೆಳೆಯುತ್ತಿದ್ದುದನ್ನು ಗಂಭೀರವಾಗಿ ಕಾಣಲಿಲ್ಲ. ಆದರೆ ಸಿಪಿಐ(ಎಂ) ಮಾತ್ರ ವಿರೋಧ ಪಕ್ಷಗಳ ಒಂದು ಸಮಗ್ರ

ಅಮೆರಿಕಾ ಜತೆ ರಕ್ಷಣಾ ಒಪ್ಪಂದಕ್ಕೆ ತರಾತುರಿ ಸಹಿ

ದೇಶದ ಭದ್ರತೆ - ಸ್ವತಂತ್ರ ವಿದೇಶಾಂಗ ನೀತಿಗೆ ವ್ಯತಿರಿಕ್ತ

ಭರತ್‌ಚಂದ್ರ

ರಕ್ಷಣಾ ಮಂತ್ರಿ ಪ್ರಣಬ್ ಮುಖರ್ಜಿ ಅಮೆರಿಕ ಭೇಟಿಯ ಸಮಯದಲ್ಲಿ ಭಾರತ ಅಮೆರಿಕಾ ರಕ್ಷಣಾ ಒಪ್ಪಂದಕ್ಕೆ ತರಾತುರಿಯಲ್ಲಿ ಸಹಿ ಹಾಕಿದ್ದಾರೆ. ಅವರು ಅಮೆರಿಕಕ್ಕೆ ತೆರಳುವ ಮುನ್ನ ಈ ಬಗ್ಗೆ ಯಾವುದೇ ಪ್ರಸ್ತಾಪವಿರಲಿಲ್ಲ. ಇಷ್ಟು ಪ್ರಮುಖ ನೀತಿ ಒಳಗೊಂಡ ಒಪ್ಪಂದದ ಬಗ್ಗೆ ಪಾರ್ಲಿಮೆಂಟಿನಲ್ಲಿ ಮಾತ್ರವಲ್ಲ, ಯುಪಿಎ ಆಳುವ ರಂಗದಲ್ಲೂ ಚರ್ಚೆ ನಡೆಯಲಿಲ್ಲ. ಯಾರಿಗೂ ಮಾಹಿತಿ ಇರಲಿಲ್ಲ. ಇಷ್ಟು ಪ್ರಮುಖ ಒಪ್ಪಂದಕ್ಕೆ ಪ್ರಣಬ್ ಸುಮ್ಮನೆ ಸಹಿ ಹಾಕಿದರೆ? ಮಂತ್ರಿಮಂಡಳ ಮತ್ತು ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ಈ ಬಗ್ಗೆ ಚರ್ಚೆ ಮಾಡಿದರೆ ಇದಕ್ಕೆ ತೀವ್ರ ವಿರೋಧ ಬಂದೀತೆಂಬ ಭಯದಿಂದ ಈ ನಿರ್ಧಾರ ಗುಟ್ಟಾಗಿಡಲಾಯಿತೆ? ಈ ಎಲ್ಲಾ ಪ್ರಶ್ನೆಗಳು ಈ ಸಂದರ್ಭದಲ್ಲಿ ಎದ್ದಿವೆ. ಎಡಪಕ್ಷಗಳು ಸೇರಿದಂತೆ ಹಲವರು ಈ ಒಪ್ಪಂದ ದೇಶದ ಭದ್ರತೆ ಮತ್ತು ಸ್ವತಂತ್ರ ವಿದೇಶಾಂಗ ನೀತಿಗೆವ್ಯತಿರಿಕ್ತವಾದದ್ದು ಎಂದು ಟೀಕಿಸಿದ್ದಾರೆ. ವಿರುದ್ಧವಾದದ್ದು ಕೂಡ ಎಂದಿದ್ದಾರೆ.

ಈ ಎಲ್ಲಾ ಟೀಕೆಗಳ ನಂತರ ಪ್ರಣಬ್ ಇದು ಒಪ್ಪಂದ ಅಲ್ಲ. ಈಗಾಗಲೇ ಇದ್ದ 'ರಕ್ಷಣಾ - ಸಹಕಾರ'ಕ್ಕೆ ಒಂದು 'ಹಂದರ' ಒದಗಿಸುತ್ತದೆ. ಇದು ಈಗಾಗಲೇ ಇದ್ದ 1985ರಲ್ಲಿ ಸಹಿ ಹಾಕಿದ 10 ವರ್ಷಗಳ 'ರಕ್ಷಣಾ-ಸಹಕಾರ'ದ ಮುಂದುವರಿಕೆ. ಆಗಿನ ಸಹಕಾರ ಈ ವರ್ಷಕ್ಕೆ ಮುಗಿಯುವುದರಿಂದ, ಅದರ ಮುಂದುವರಿಕೆಯಾಗಿ ಈ 'ಹಂದರ'ಕ್ಕೆ ಸಹಿ ಹಾಕಲಾಯಿತು ಎಂಬ ಸಮಜಾಯಿಷಿ ಕೊಟ್ಟು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಆದರೆ ಈ ಒಪ್ಪಂದ ಹಲವು ವಿಷಯಗಳಲ್ಲಿ ತಪ್ಪು ಹಾದಿಯಲ್ಲಿ ಹೋಗಿದೆ. ಈ ಬಗ್ಗೆ ರಾಷ್ಟ್ರೀಯ ಚರ್ಚೆ ಅಗತ್ಯ.

ಅಮೆರಿಕದಡಿಯಲ್ಲಿ ಮಿಲಿಟರಿ ಕಾರ್ಯಾಚರಣೆ

ಈ ಒಪ್ಪಂದದಂತೆ ಮುನ್ನಡೆದರೆ, ಪ್ರಮುಖ ಅಂಶಗಳನ್ನು ಜಾರಿ ಮಾಡಿದರೆ ಏಶ್ಯಾದಲ್ಲಿ ಅಮೆರಿಕದ ವ್ಯೂಹಾತ್ಮಕ ಗುರಿಗಳನ್ನು ಸಾಧಿಸಲು ಸಹಾಯ ಮಾಡಿದಂತಾಗುತ್ತದೆ. ಏಶ್ಯದಲ್ಲಿ ಅಮೆರಿಕದ ಮಿಲಿಟರಿ ಸಹಚರರಾದ ಜಪಾನ್, ದಕ್ಷಿಣ ಕೊರಿಯಾ ಮತ್ತು ಫಿಲಿಪ್ಪೈನ್ಸ್‌ನ ಸಾಲಿಗೆ ಭಾರತದ ಸೇರುತ್ತದೆ.

1995ರಲ್ಲಿ ನರಸಿಂಹರಾವ್ ಸರ್ಕಾರ ಸಹಿ ಹಾಕಿದ ರಕ್ಷಣಾ-ಸಂಬಂಧಗಳ ಒಪ್ಪಂದ ಜಂಟಿ ಮಿಲಿಟರಿ ಕವಾಯಿತು ಮತ್ತು ಇತರ ವಿನಿಮಯ ಕಾರ್ಯಕ್ರಮಗಳನ್ನು ಒಳಗೊಂಡಿತ್ತು. ಈಗಿನ ಒಪ್ಪಂದ ಒಂದು ಹೆಜ್ಜೆ ಮುಂದೆ ಹೋಗಿ, ಎರಡು ರಕ್ಷಣಾ ಸಂಘಟನೆಗಳು 'ಸಮಾನ ಆಸಕ್ತಿಗಳು ಇದ್ದಾಗ ಬಹುರಾಷ್ಟ್ರೀಯ ಕಾರ್ಯಾಚರಣೆಗಳಲ್ಲಿ ಸಹಭಾಗಿಯಾಗಬಹುದು' ಎಂದು ಹೇಳುತ್ತದೆ. ಇಂತಹ ಬಹುರಾಷ್ಟ್ರೀಯ ಕಾರ್ಯಾಚರಣೆ ವಿಶ್ವಸಂಸ್ಥೆಯ ಉಸ್ತುವಾರಿಯ ಅಡಿಯಲ್ಲಿ ಇರುತ್ತದೆ



ಅಂತ ಎಲ್ಲೂ ಸ್ಪಷ್ಟವಾಗಿ ಹೇಳಿಲ್ಲ. ಇದರರ್ಥ ಅಮೆರಿಕ ನಾಯಕತ್ವದ 'ಬಹುರಾಷ್ಟ್ರೀಯ ಕಾರ್ಯಾಚರಣೆ' ಗಳಲ್ಲಿ ಭಾರತ ಭಾಗವಹಿಸಲು ಒಪ್ಪಿದೆ. ಮಾತ್ರವಲ್ಲ ಅದು ಅಮೆರಿಕದ ರಕ್ಷಣಾ ಪಡೆಗಳ ಅಡಿಯಾಳಾಗಿ ಕೆಲಸ ಮಡುತ್ತದೆ ಅಂತ.

ಅಮೆರಿಕನ್ ಕ್ಷಿಪಣಿ 'ರಕ್ಷಣೆ'?

ಕ್ಷಿಪಣಿ ರಕ್ಷಣೆಗೆ ಸಂಬಂಧಿಸಿದಂತೆ ಸಹಕಾರ ಮುಂದುವರೆಸುವುದು ಎಂದು ಒಪ್ಪಂದ ಹೇಳುತ್ತದೆ. ಅಮೆರಿಕನ್ ಸರ್ಕಾರದ ಕ್ಷಿಪಣಿ ರಕ್ಷಣಾ ಕಾರ್ಯಕ್ರಮವನ್ನು ಸ್ವಾಗತಿಸಿದ ಮೊದಲ ದೇಶವಾಗಲು 'ನಾಚಿಕೆಗೇಡಿ'ನ ಕ್ರಮಕ್ಕೆ ಭಾರತವನ್ನು ತಳ್ಳಿದ ಎನ್‌ಡಿಎ ಸರ್ಕಾರ ನೀತಿಯನ್ನು ಇಲ್ಲಿ ಯುಪಿಎ ಮುಂದುವರೆಸುತ್ತಿರುವುದು ಸ್ಪಷ್ಟ. ವಿಶ್ವಶಾಂತಿಗೆ ಮಾರಕವಾದ ಕ್ರಮ, ಹಲವು ಅಂತರರಾಷ್ಟ್ರೀಯ ಒಪ್ಪಂದಗಳನ್ನು ಉಲ್ಲಂಘಿಸಿದೆ ಎಂದು ತೀವ್ರ ಟೀಕೆಗೆ ಈ ಕ್ಷಿಪಣಿ ರಕ್ಷಣಾ ವ್ಯವಸ್ಥೆ ಗುರಿಯಾಗಿತ್ತು. ಅಣ್ವಸ್ತ್ರ ಸಮರ ಆರಂಭಿಸಲು ಇದು ಕುಮ್ಮಕ್ಕು ಕೊಡುತ್ತದೆ. ಅಮೆರಿಕ ಇದರಲ್ಲಿ ಪ್ರಮುಖ ದೇಶಗಳನ್ನು ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಜಪಾನ್ ಈಗಾಗಲೇ ಇದರ ಭಾಗವಾಗಿದೆ.

ಅಮೆರಿಕನ್ 'ಕ್ಷಿಪಣಿ ರಕ್ಷಣೆ' ಭಾಗವಾಗಿರಲು ಒಪ್ಪಿಕೊಂಡಿಲ್ಲ. ನಮ್ಮ ಕ್ಷಿಪಣಿ ಕಾರ್ಯಕ್ಷಮತೆ ಬೆಳವಣಿಗೆ ಕಾರ್ಯಕ್ರಮದಲ್ಲಿ ಇರುವ ಕೊರತೆಗಳನ್ನು ತುಂಬಲು ಅಮೆರಿಕ ಸಹಾಯ ಮಾಡುವುದು. 'ಪೆಟ್ರಿಯಾಟ್ ಕ್ಷಿಪಣಿ' ವ್ಯವಸ್ಥೆಯನ್ನು ಅಮೆರಿಕದಿಂದ ಕೊಂಡುಕೊಳ್ಳುವ ಬಗ್ಗೆ ವಿಚಾರ ಮಾಡಲಾಗುವುದು ಅಷ್ಟೇ ಎಂದು ಪ್ರಣಬ್ ಸಮಜಾಯಿಷಿ ಕೊಟ್ಟಿದ್ದಾರೆ. 'ಪೇಟ್ರಿಯಾಟ್' ಮಾರಾಟದ ಮೂಲಕ ಭಾರತವನ್ನು 'ಕ್ಷಿಪಣಿ ರಕ್ಷಣೆ' ಭಾರತದ ಸ್ವತಂತ್ರ ಕ್ಷಿಪಣಿ ಬೆಳವಣಿಗೆ ಕ್ಷಮತೆಗೆ ಧಕ್ಕೆ ಉಂಟುಮಾಡುವ ವ್ಯವಸ್ಥೆಗೆ ಸೆಳೆಯುವ ಗಂಭೀರ ಪ್ರಯತ್ನ ಒಪ್ಪಂದದಲ್ಲಿ ಇದೆ ಎಂಬುದಕ್ಕೆ ಸಂಶಯವಿಲ್ಲ;

ಎಫ್16 ಆಮಿಷ

ಈ ಒಪ್ಪಂದದ ಇತರ ಅಂಶಗಳು. ಎರಡು ದೇಶದ ಸೈನ್ಯಗಳ 'ಪರಸ್ಪರ-ಕಾರ್ಯಾಚರಣೆ'ಯ ಮಟ್ಟ ಹೆಚ್ಚಿಸುವ ಉದ್ದೇಶ ಹೊಂದಿವೆ. ಇದು ಎರಡು ಸೈನ್ಯಗಳನ್ನು ಸಂಘಟನಾತ್ಮಕವಾಗಿ ಹತ್ತಿರ ತರುತ್ತವೆ ಎಂದು ಗಮನಿಸಬೇಕು.

ರಕ್ಷಣಾ ಉಪಕರಣಗಳ ಜಂಟಿ- ಉತ್ಪಾದನೆ ಬಗೆಗೂ ಒಪ್ಪಂದ ಹೇಳುತ್ತದೆ. ಇದು ಎಫ್-16 ಮತ್ತಿತರ ಅಮೆರಿಕನ್ ಶಸ್ತ್ರಾಸ್ತ್ರಗಳನ್ನು ಭಾರತ ಖರೀದಿಸುವಂತೆ ಒಡ್ಡಿರುವ ಆಮಿಷ. ಆದರೆ ಈಗ ರಕ್ಷಣಾ ಉಪಕರಣಗಳ ಉತ್ಪಾದನೆಯಲ್ಲಿ ಬೇಕಾದ ಹಲವು ಉಚ್ಚ- ತಂತ್ರಜ್ಞಾನವನ್ನು ಭಾರತ ಅಮೆರಿಕದಿಂದ ಆಮದು ಮಾಡಿಕೊಳ್ಳುವುದರ ಬಗೆಗೆ ಇರುವ ನಿಷೇಧ ಮುಂದುವರೆಯುತ್ತದೆ ಎಂಬುದನ್ನು ಗಮನಿಸಬೇಕು.

ಏಶ್ಯಾದಲ್ಲಿ ಅಮೆರಿಕದ ಪೋಲೀಸು ಪೇದೆ??

ಏಶ್ಯಾದ ಭದ್ರತೆಗೆ ಬೇಕಾದ ಕ್ರಮಗಳನ್ನು ಈ ಪ್ರದೇಶದ ಇತರ ದೇಶಗಳ ಜತೆ ಜಂಟಿಯಾಗಿ ರೂಪಿಸುವುದಕ್ಕೆ ಅವಕಾಶಗಳಿವೆ. ಸಿಂಗಾಪೂರ್, ಮಲೇಶ್ಯಾ ಮತ್ತು ಇಂಡೋನೇಶ್ಯಾದಲ್ಲಿ ಅಂತರರಾಷ್ಟ್ರೀಯ ಸಾಗರ ಪ್ರದೇಶದ ಭದ್ರತೆಗೆ ಜಂಟಿ ಕಾರ್ಯಕ್ರಮ ಸೂಚಿಸಿದೆ. ಈ ದೇಶಗಳ ಜತೆ ಸಹಕರಿಸುವ ಬದಲು, ಭಾರತ ಏಶ್ಯಾದಲ್ಲಿ ಅಮೆರಿಕದ ಹಿತಾಸಕ್ತಿ ಮುನ್ನಡೆಸುವಲ್ಲಿ ಹೆಚ್ಚು ಆಸಕ್ತಿ ತೋರಿದೆ. ಮಲಕ್ಕಾ ಸಂಧಿಯಲ್ಲಿ ಭಾರತದ ಸೇನೆಯು ಅಮೆರಿಕದ ಪರವಾಗಿ ಗಸ್ತು ತಿರುಗಬೇಕೆಂಬುದು ಅಮೆರಿಕದ ಇಚ್ಛೆ. 'ಪ್ರಸರಣ ಭದ್ರತಾ ಕ್ರಮ' (ಅಣ್ವಸ್ತ್ರ ಪ್ರಸರಣ ತಡೆಯುವ ಕ್ರಮದ ಹೆಸರಲ್ಲಿ ಎಲ್ಲಾ ಅಂತರರಾಷ್ಟ್ರೀಯ ಪ್ರದೇಶಗಳಲ್ಲಿ ಪೊಲೀಸು ಗಸ್ತು)ದ ಹೆಸರಲ್ಲಿ ಭಾರತದ ನೌಕಾಸೇನೆಯನ್ನು ಏಶ್ಯಾದಲ್ಲಿ ಅಮೆರಿಕದ ಜೂನಿಯರ್ ಪಾರ್ಟನರ್ ಆಗಿ ಕೆಲಸ ಮಾಡಿಸಲು ಈ ಒಪ್ಪಂದ ಮುಂದಾಗಿದೆ.

ಚೀನಾ ಮಿಲಿಟರಿ ಶಕ್ತಿಯಾಗಿ ಬೆಳೆಯುತ್ತಿದೆ, ರಕ್ಷಣಾ ವೆಚ್ಚ ಹೆಚ್ಚಿಸುತ್ತಿದೆ ಎಂದು ಗದ್ದಲ ಎಬ್ಬಿಸಿ ಚೀನಾ ಮಿಲಿಟರಿ ಶಕ್ತಿಯಾಗದಂತೆ ಅಮೆರಿಕ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ತೈವಾನ್ ಎತ್ತಿ ಕಟ್ಟುವುದು, ಜಪಾನ್-ಚೀನಾ ಸಂಬಂಧ ಹದಗೆಡಿಸಲು ಪ್ರಯತ್ನಿಸುವುದು, ಜಪಾನಿನ ಪುನರ್ ಮಿಲಿಟರೀಕರಣಕ್ಕೆ ಕುಮ್ಮಕ್ಕು - ಇವೆಲ್ಲ ಇಂತಹ ಕ್ರಮಗಳು. ಭಾರತ - ಅಮೆರಿಕ ರಕ್ಷಣಾ ಹಂಗಿನ ಒಪ್ಪಂದವನ್ನು ಈ ಸಂದರ್ಭದಲ್ಲಿ ನೋಡಬಹುದು. ಭಾರತವನ್ನು ಏಶ್ಯಾದಲ್ಲಿ ಜೂನಿಯರ್ ಪಾರ್ಟನರ್ ಆಗಿ ಬಳಸಿ, ಚೀನಾದ ವಿರುದ್ಧ ಪ್ರತಿ - ಮಿಲಿಟರಿ ಶಕ್ತಿಯಾಗಿ ಛೂ ಬಿಡುವುದು ಅಮೆರಿಕದ ಉದ್ದೇಶ. ಅಮೆರಿಕದ ಪಗಡೆಯಾಟಕ್ಕೆ ಭಾರತ ಒಂದು ಬರಿ ಧಾಳವಾಗಬೇಕೆ? ಎಂಬುದು ಸ್ವಾಭಾವಿಕವಾಗಿ ಏಳುವ ಪ್ರಶ್ನೆ.

ಸಮಾನ ಕನಿಷ್ಟ ಕಾರ್ಯಕ್ರಮದ ಉಲ್ಲಂಘನೆ

ಇವೆಲ್ಲದರ ಜತೆ ಈ ಒಪ್ಪಂದ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ವಿದೇಶ ನೀತಿ ಬಗ್ಗೆ ರೂಪಿತವಾದ ಕ್ರಮಗಳನ್ನು ಉಲ್ಲಂಘಿಸಿದೆ. ಕಾರ್ಯಕ್ರಮ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಬೇಕು. ಮತ್ತು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಬಹು-ಧ್ರುವೀಯ ವ್ಯವಸ್ಥೆಗೆ ಉತ್ತೇಜನ ಕೊಡಬೇಕು ಎಂದು ಸ್ಪಷ್ಟವಾಗಿ ಹೆಳುತ್ತದೆ. ಭಾರತವನ್ನು ಅಮೆರಿಕದ ವಿದೇಶಾಂಗ ನೀತಿಗೆ ಬಲವಾಗಿ ಬಂಧಿಸುವ ಕೆಲಸವನ್ನು ಈ ಒಪ್ಪಂದ ಮಾಡುತ್ತದೆ. ವಿಶ್ವಸಂಸ್ಥೆಯ ಉಸ್ತುವಾರಿಯಿಲ್ಲದೆ, ವಿದೇಶಗಳಲ್ಲಿ ಮಿಲಿಟರಿ ಕಾರ್ಯಾಚರಣೆಯಲ್ಲಿ ಭಾಗವಹಿಸುವುದಿಲ್ಲ. ವಿಶ್ವಶಾಂತಿಗೆ ಮಾರಕವಾದ 'ತಾರಾಸಮರ'ದಂತಹ ತಂತ್ರಜ್ಞಾನ ಬೆಳವಣಿಗೆಯನ್ನು ವಿರೋಧಿಸುತ್ತದೆ- ಮುಂತಾದ ಭಾರತದ ವಿದೇಶಾಂಗ ನೀತಿಯ ಆಧಾರ ಸ್ತಂಭಗಳನ್ನು ಇದು ಶಿಥಿಲಗೊಳಿಸುತ್ತದೆ.

ಅಮೆರಿಕ ಈಗ ಜಗತ್ತಿನ ಏಕಮಾತ್ರ ಸೂಪರ್‌ಪವರ್ ಆಗಿದೆ. ಇದು ವಿಶ್ವಶಾಂತಿ, ಬೆಳವಣಿಗೆಗೆ ಮಾರಕವಾದದ್ದು. ಬಹು-ಧ್ರುವೀಯ ಜಗತ್ತನ್ನು ರೂಪಿಸುವತ್ತ ಭಾರತ ಪ್ರಯತ್ನಿಸಬೇಕು. ಭಾರತದ ಜನತೆಯ ಈ ಆಶಯವನ್ನು ಸಮಾನ ಕನಿಷ್ಟ ಕಾರ್ಯಕ್ರಮ ಹೇಳುತ್ತದೆ. ರಶ್ಯ-ಚೀನಾ-ಭಾರತ ತ್ರಿಪಕ್ಷೀಯ ವ್ಯೂಹಾತ್ಮಕ ಒಪ್ಪಂದ, ಭಾರತ-ಬ್ರೆಜಿಲ್- ದಕ್ಷಿಣ ಆಫ್ರಿಕಾ ವ್ಯೂಹ ರಚನೆ- ಇವೆಲ್ಲಾ ಭಾರತ ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳು. ಈಗಿನ ಭಾರತ-ಅಮೆರಿಕಾ ರಕ್ಷಣಾ ಒಪ್ಪಂದ ಈ ಕ್ರಮಗಳನ್ನು ನಿಷ್ಕ್ರಿಯಗೊಳಿಸಬಹುದು.

ಈ ಒಪ್ಪಂದ ಭಾರತದ ಮತ್ತು ಅಂತರಾಷ್ಟ್ರೀಯ ಭದ್ರತೆಗೆ, ವಿಶ್ವಶಾಂತಿಗೆ ಮಾರಕವಾದ ಒಪ್ಪಂದ. ಈ ಒಪ್ಪಂದದ ಅಪಾಯಗಳ ಬಗ್ಗೆ ಚರ್ಚೆ - ಪ್ರಚಾರ - ಪ್ರತಿಭಟನೆ ಅಗತ್ಯ.

...ತುರ್ತುಪರಿಸ್ಥಿತಿಯಲ್ಲಿ ಕಮ್ಯೂನಿಸ್ಟರ ಪಾತ್ರ

ಐಕ್ಯತೆಯೊಂದಿಗೆ ಕಾಂಗ್ರೆಸ್ ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಡುವುದರೊಂದಿಗೆ ಕೋಮುವಾದೀ ಶಕ್ತಿಗಳನ್ನು ಮೂಲೆಗೊತ್ತಬೇಕು ಎಂದು ಹೇಳುತ್ತಾ ಬಂತು. ರಾಜೀವಗಾಂಧಿ ಪ್ರಧಾನಮಂತ್ರಿಯಾಗಿದ್ದಾಗ ಬಂದ ಹಲವಾರು ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರದ ವಿರುದ್ಧ ಹೋರಾಟಗಳು ಉತ್ತುಂಗದಲ್ಲಿದ್ದಾಗಲೂ ಸಿಪಿಐ(ಎಂ) ಕೋಮುವಾದ-ವಿರೋಧಿ ನಿಲುವನ್ನು ತಳೆದು ಕಾಂಗ್ರೆಸ್‌ನ ವಿರುದ್ಧ ಚುನಾವಣಾ ಮೈತ್ರಿಗಳನ್ನು ರಚಿಸುವಲ್ಲಿ ಕೋಮುವಾದೀ ಶಕ್ತಿಗಳ ಬೆಂಬಲ ಪಡೆಯಲು ಪ್ರಯತ್ನಿಸುವ ಪಕ್ಷಗಳಿಗೆ ತಮ್ಮ ನಿಲುವಿನ ಮರುಪರಿಶೀಲನೆ ನಡೆಸಬೇಕೆಂದು ಮನವಿ ಮಾಡಿತು.

ಸಿಪಿಐ(ಎಂ) 1989 ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ 'ಸರ್ವಾಧಿಕಾರಶಾಹಿ ಮತ್ತು ಕೋಮುವಾದದ ಅವಳಿ ಅಪಾಯ' ಗಳ ಬಗ್ಗೆ ಸ್ಪಷ್ಟವಾಗಿ ಹೇಳಿತು. ಬಿಜೆಪಿಯೊಂದಿಗೆ ರಾಜಿ ಮಾಡಿಕೊಳ್ಳಬಯಸುವ ಪಕ್ಷಗಳನ್ನೂ ಕೂಡಾ ಜಾತ್ಯತೀತ ವೇದಿಕೆಗೆ ತರಲು ಅದು ಬಹುವಾಗಿ ಪ್ರಯತ್ನಿಸಿತು. ಅತ್ತ ಬಿಜೆಪಿಯೊಂದಿಗೆ ಯಾವುದೇ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ನಿರಾಕರಿಸಿತು. ನಿಜ ಸಂಗತಿಯೆಂದರೆ ಕಾನುಪುರ, ನವಾಡಾಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಬಿಜೆಪಿ ಅಭ್ಯರ್ಥಿಗಳನ್ನೇ ಸೋಲಿಸಿ ಗೆದ್ದುಬಂದರು. ವಿ.ಪಿ.ಸಿಂಗ್ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದಾಗ ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವ ಪ್ರಶ್ನೆ ಎದ್ದಾಗ ಸರ್ಕಾರ ಜಾತ್ಯತೀತತೆ ಮತ್ತು ಕೋಮುವಾದದ ಬಗ್ಗೆ ದೃಢ ನಿಲುವು ತಳೆಯಬೇಕು ಎಂದು ಸಿಪಿಐ(ಎಂ) ಹೇಳಿತು. ಕಾಂಗ್ರೆಸ್ ಮತ್ತು ಬಿಜೆಪಿ ಸೇರಿ ವಿ.ಪಿ.ಸಿಂಗ್ ಸರ್ಕಾರವನ್ನು ಉರುಳಿಸಲು ಮುಂದಾದವು. ಈ ಮೂಲಕ ದೇಶಕ್ಕೆ ಕೋಮುವಾದದ ಅಪಾಯವನ್ನು ಹಲವು ಪಟ್ಟುಹೆಚ್ಚಿಸಲಾಯಿತು.

ಪ್ರಜಾಪ್ರಭುತ್ವಕ್ಕೆ ಅಪಾಯ

ನಂತರ ಬಿಜೆಪಿ ಸರ್ಕಾರ ಅಧಿಕಾರ ವಹಿಸಿಕೊಂಡಿತು. ಇದು ಪ್ರಜಾಪ್ರಭುತ್ವಕ್ಕೆ ಬಂದ ಅಪಾಯ. ಪ್ರಜಾಪ್ರಭುತ್ವದ ಮೇಲೆ ಹಲವು ಪ್ರಹಾರಗಳು ನಡೆದವು - ಅಲ್ಪಸಂಖ್ಯಾತರ ಮೇಲೆ ಆಕ್ರಮಣಗಳು, ಗುಜರಾತ್ ನರಹತ್ಯಾಕಾಂಡ, ಸಂವಿಧಾನ ತಿದ್ದುಪಡಿ ತಂದು ಅಧ್ಯಕ್ಷ ಮಾದರಿ ಸರ್ಕಾರ ಸ್ಥಾಪಿಸಲು ಪ್ರಯತ್ನ, ಪೋಟಾ ಜಾರಿ, ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರವಲ್ಲ ಸೇನಾ ಪಡೆಗಳಲ್ಲೂ ಆರ್‌ಎಸ್‌ಎಸ್ ತೂರಿಕೆಗಳು ನಡೆದವು. ಸೈದ್ಧಾಂತಿಕವಾಗಿ ಹೇಳುವುದಾದರೆ ಕೋಮುವಾದಿ ಅಬ್ಬರ ಪ್ರಜಾಪ್ರಭುತ್ವ ಮೌಲ್ಯಗಳ ಮೇಲಿನ ಒಂದು ಧಾಳಿಯಾಗಿದೆ.

ಪ್ರಜಾಪ್ರಭುತ್ವಕ್ಕೆ ಅಪಾಯ ಒಂದು ನಿರ್ದಿಷ್ಟ ರಾಜಕೀಯ ಪಕ್ಷದಿಂದ ಬರುತ್ತದೆ ಎಂದು ಯೋಚಿಸುವುದು ಸರಿಯಲ್ಲ. ಜನಗಳು, ಆಳುವವರ್ಗಗಳು ಹಾಗೂ ಅವು ಜನಗಳ ಮೇಲೆ ಹೇರಬಯಸುವ ಆರ್ಥಿಕ ನೀತಿಗಳ ನಡುವಿನ ಸಂಘರ್ಷಗಳಲ್ಲೇ ಈ ಅಪಾಯ ಅಡಗಿರುತ್ತದೆ . ಉದಾಹರಣೆಗೆ ಉದಾರವಾದೀ ಆರ್ಥಿಕ ನೀತಿಗಳ ಪರವಾಗಿ ವಾದಿಸುವವರು ದುಡಿಯುವ ಜನಗಳ ಹಕ್ಕುಗಳನ್ನು ಕಡಿತಮಾಡುವ ಬಗ್ಗೆಯೂ ಜೋರಾಗಿ ಮಾತಾಡುತ್ತಾರೆ. ಇತ್ತೀಚೆಗೆ ಆಡಳಿತದಿಂದ, ನ್ಯಾಯಾಂಗದಿಂದಲೂ ಕಾರ್ಮಿಕ ಸಂಘಗಳ ಚಟುವಟಿಕೆಗಳಲ್ಲಿ, ಮುಷ್ಕರದ ಹಕ್ಕಿನ ವಿರುದ್ಧ, ರ್‍ಯಾಲಿಗಳನ್ನು, ಸಭೆಗಳನ್ನು ನಡೆಸುವ ಹಕ್ಕಿನ ವಿರುದ್ಧ ಹಸ್ತಕ್ಷೇಪ ಹೆಚ್ಚುತ್ತಿದೆ.

ಸಿನಿಮಾ

'ಪರಿಣೀತಾ' ರಿ-ಮಿಕ್ಸ್ ಹೊಸ ಬಾಲಿವುಡ್ ಫಾರ್ಮುಲಾ ?

20ನೇ ಶತನಮಾನ ಆದಿಭಾಗದಲ್ಲಿ ಬ್ರಿಟಿಷ್ ವಸಾಹತುಶಾಹಿಯ ಅಡಿಯಲ್ಲಿ ತೀವ್ರ ಬದಲಾವಣೆಗಳಿಗೆ ಒಡ್ಡಿಕೊಂಡಂತಹ ಕಲ್ಕತ್ತಾದಲ್ಲಿ ಶರತ್ ಚಂದ್ರರ 'ಪರಿಣೀತಾ' ನಡೆಯುತ್ತದೆ. ಪ್ರದೀಪ್ ಸರ್ಕಾರ್ 'ಪರಿಣೀತಾ'ವನ್ನು 1960ರ ದಶಕಕ್ಕೆ ಕಾಲಾಂತರಿಸಿದ್ದಾರೆ. ಬಾಲಿವುಡ್‌ನ ಫಾರ್ಮುಲಾ 'ಪ್ರೇಮ ತ್ರಿಕೋನ'ದಿಂದ ತೀರಾ ದೂರ 'ಸಾಮಾಜಿಕ ನೈಜತೆ'ಗೆ ಒಯ್ಯಲು ಧೈರ್ಯವಿಲ್ಲದ, ಆದರೆ ಶರತ್‌ಚಂದ್ರರ ಪ್ರಖ್ಯಾತಿ ಬಳಸಿಕೊಳ್ಳುವ ಯತ್ನದಲ್ಲಿ 'ಪರಿಣೀತಾ'ದ ಬಾಲಿವುಡೀಕರಣ ನಡೆದಿದೆ. ಹೆಚ್ಚೆಂದರೆ ಅದು ರಿಮಿಕ್ಸ್ 'ಪರಿಣೀತಾ' ಆಗಿದೆ.

ಪ್ರದೀಪ್ ಸರ್ಕಾರ್ ಅವರ 'ಪರಿಣೀತಾ' ಹಿಂದಿ ಫಿಲಂ ಇತ್ತೀಚೆಗೆ ರಿಲೀಸ್ ಆಗಿದ್ದು ಜನಪ್ರಿಯವಾಗಿದೆ. ಶರತ್ ಚಂದ್ರರವರ ಅದೇ ಹೆಸರಿನ ಬಂಗಾಳಿ ಕಾದಂಬರಿ ಮೇಲೆ ಆಧಾರಿತವಾಗಿದ್ದು, ಉತ್ತಮ ಫಿಲಂ ಎಂದು ಮನ್ನಣೆ ಸಹ ಗಳಿಸಿದೆ.

ಬಾಲಿವುಡ್ ಚಿತ್ರಗಳ ಮಟ್ಟದಿಂದ ನೋಡಿದರೆ ಖಂಡಿತ 'ಪರಿಣೀತಾ' ಒಳ್ಳೆಯ ಫಿಲಂ. ಉತ್ತಮ ಚಿತ್ರಕಥೆ, ಆಸಕ್ತಿಕಾರಕ ಸಂಭಾಷಣೆ, ಸುಂದರ ಫೋಟೋಗ್ರಾಫಿ, ಇಂಪಾದ ಸಂಗೀತ - ಹಾಡುಗಳು, ಪ್ರಬುದ್ಧ ಅಭಿನಯ, ಬಿಗಿ ನಿರ್ದೇಶನ - ಸಂಕಲನ ಹೊಂದಿರುವ ಒಳ್ಳೆಯ ಫಿಲಂ. ಡಾಕ್ಯುಮೆಂಟರಿ ಫಿಲಂ ನಿರ್ದೇಶಕ ಪ್ರದೀಪ್ ಸರ್ಕಾರ್‌ರವರ ಮೊದಲ ಫೀಚರ್ ಫಿಲಂ ಎಂದು ಗಮನಿಸಿದರೆ ಇದು ಇನ್ನಷ್ಟು ನಿಜ. '1942 ಎ ಲವ್ ಸ್ಟೋರಿ', 'ಮುನ್ನಭಾಯಿ ಎಂ.ಬಿ.ಬಿ.ಎಸ್.' - ಮೊದಲಾದ ವಿಶಿಷ್ಟ ಫಿಲಂಗಳನ್ನು ಕೊಟ್ಟ ವಿಧು ವಿನೋದ್ ಚೋಪ್ರಾ ಕಂಪನಿಯ ತಯಾರಿಕೆ ಇದು.

20ನೇ ಶತನಮಾನ ಆದಿಭಾಗದಲ್ಲಿ ಬ್ರಿಟಿಷ್ ವಸಾಹತುಶಾಹಿಯ ಅಡಿಯಲ್ಲಿ ತೀವ್ರ ಬದಲಾವಣೆಗಳಿಗೆ ಒಡ್ಡಿಕೊಂಡಂತಹ ಕಲ್ಕತ್ತಾದಲ್ಲಿ ಶರತ್ ಚಂದ್ರರ 'ಪರಿಣೀತಾ' ನಡೆಯುತ್ತದೆ. ಪ್ರದೀಪ್ ಸರ್ಕಾರ್ 'ಪರಿಣೀತಾ'ವನ್ನು 1960ರ ದಶಕಕ್ಕೆ ಕಾಲಾಂತರಿಸಿದ್ದಾರೆ. ಪರಿಣೀತಾ ಕಾದಂಬರಿಗೆ ಫಿಲಂ ರೂಪದಲ್ಲಿ 'ಸೃಜನಾತ್ಮಕ ಪುನರ್‌ಸೃಷ್ಟಿ'ಗೆ ಪ್ರಯತ್ನಿಸಿದ್ದಾರೆ. ಈ ಸೃಜನಾತ್ಮಕ ಪುನರ್‌ಸೃಷ್ಟಿ ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದು ವಿಮರ್ಶೆಗೆ ಒಳಪಡಬೇಕಾದ್ದು. ಪ್ರದೀಪ್ ಸರ್ಕಾರರ ಪುನರ್‌ಸೃಷ್ಟಿ ಶರತ್‌ಚಂದ್ರರ ಕಾದಂಬರಿಯ ಮೂಲ ತಿರುಳನ್ನು ಎಷ್ಟರ ಮಟ್ಟಿಗೆ ಉಳಿಸಿಕೊಂಡಿದೆ. ಪುನರ್‌ಸೃಷ್ಟಿಯ ಉದ್ದೇಶಗಳೇನು?

ಶರತ್‌ಚಂದ್ರರ 'ಪರಿಣೀತಾ'

ಶರತ್‌ಚಂದ್ರರ ಮೂಲ ಕಥೆಯ ಹಂದರ ಮಾತ್ರ ಬಾಲಿವುಡ್ 'ಪರಿಣೀತಾ' ಉಳಿಸಿಕೊಂಡಿದೆ. ಅನಾಥೆಯಾದ ಲಲಿತಾ ಮಾವ ಗುರುಚರಣ್‌ರ ಮನೆಗೆ ಇರಲು ಬರುತ್ತಾಳೆ. ಪಕ್ಕದ ಮನೆಯಲ್ಲಿರುವ ಶ್ರೀಮಂತ ನವೀನ್ ಮಗ ಶೇಖರ ಜತೆ ಬಾಲ್ಯದ ಒಡನಾಟ ಶೇಖರ್‌ನ ಎಲ್ಲಾ ಚಿಲ್ಲರೆ ಕೆಲಸಗಳನ್ನು ಮಾಡುವ ಲಲಿತಾ ಜತೆ ಒಡನಾಟ, ಸ್ನೇಹ ಪ್ರೇಮವಾಗುತ್ತದೆ. ಯಾವುದೋ ವಿಶೇಷ ಗಳಿಗೆಯಲ್ಲಿ ಮಾಲೆ ವಿನಿಮಯ ಮಾಡಿಕೊಳ್ಳುತ್ತಾರೆ. ಲಲಿತಾ ತಾನು ಇಷ್ಟದಿಂದಲೇ 'ಪರಿಣೀತಾ' (ಮದುವೆಯಾದವಳು) ಎಂದು ಅಂದುಕೊಳ್ಳುತ್ತಾಳೆ. ಆದರೆ ಅವರ ಮದುವೆಗೆ ಜಾತಿ-ಅಂತಸ್ತು- ಸಾಮಾಜಿಕ ಅಡೆತಡೆಗಳು ಲಲಿತಾಳನ್ನು ಮದುವೆಯಾಗ ಬಯಸುವ ಗಿರೀಶನ್ನು ನಿರಾಕರಿಸುತ್ತಾಳೆ. ತಾನು ಆಗಲೇ 'ಪರಿಣೀತಾ' ಎಂದು.

ಬಾಲ್ಯ ವಿವಾಹ ಸಾಮಾನ್ಯವಾಗಿದ್ದ (ಇನ್ನೂ ಕಾನೂನು ಪ್ರಕಾರ ನಿಷಿದ್ಧ ಆಗದೇ ಇದ್ದ ಕಾಲದಲ್ಲಿ) ಕಾಲದ ಶರತ್ ಚಂದ್ರರ ಪರಿಣೀತಾದಲ್ಲಿ ಹಾರ-ವಿನಿಮಯದ ಸಮಯ ಲಲಿತಾಳ ವಯಸ್ಸು 14. ಹಾರ-ವಿನಿಮಯ ನಡೆಯುವುದು, ಲಲಿತಾಳ ಸೋದರ-ಸಂಬಂಧಿ ಹುಡುಗಿಯ ಗೊಂಬೆಗಳ ಮದುವೆ ಸಂದರ್ಭದಲ್ಲಿ! ಆದರೆ ಬಾಲಿವುಡ್ ಪರಿಣೀತಾದಲ್ಲಿ ಬೆಳೆದು ನಿಂತ ಶೇಖರ್-ಲಲಿತಾಳ ನಡುವಿನ ಹಾರವಿನಿಮಯ ಆಕೆಯ ಸೋದರ ಸಂಬಂಧಿಯ ಮದುವೆಯ ಸಂದರ್ಭದಲ್ಲಿ. ಹಾರ-ವಿನಿಮಯ ಮಂಚದ ಮೇಲೆ ಕೊನೆಗೊಳ್ಳುತ್ತದೆ. ಶರತ್‌ಚಂದ್ರರ ಪರಿಣೀತಾದಲ್ಲಿ



ಶೇಖರ್ ಲಲಿತಾಳ ಜತೆ ಸಂಬಂಧವನ್ನು, ತಂದೆ ನಬೀನ್ ರಾಯ ಸತ್ತ ಹಲವು ವರ್ಷಗಳ ನಂತರ ಒಪ್ಪಿಕೊಳ್ಳುತ್ತಾನೆ. ಬಾಲಿವುಡ್ ಪರಿಣೀತಾದಲ್ಲಿ ತಂದೆ ನಬೀನ್ ರಾಯ ಖಳನಾಯಕ, ಕ್ರೂರಿ ಲಾಭಗಡುಕ ಮಾಲಕ. ಪ್ರೇಮಿಗಳ ಮದುವೆಗೆ ಅಡ್ಡಿಮಾಡಲು ಎಲ್ಲಾ ಅಡೆಗಡೆಗಳನ್ನು, ಕ್ರೌರ್ಯವನ್ನು ಹರಿಯ ಬಿಡುತ್ತಾನೆ.

ಬಾಲಿವುಡ್ 'ಪರಿಣೀತಾ'

ಶರತ್‌ಚಂದ್ರರ ಪರಿಣೀತಾದಲ್ಲಿ ಶೇಖರ್-ಲಲಿತಾಳ ಮದುವೆಗೆ ಅಡ್ಡಿಯಾಗುವುದು ಜಾತಿ-ಮತ ಅಂತಸ್ತು. ಮಾತ್ರವಲ್ಲ ಶೇಖರ್‌ನ ಗೊಂದಲಗಳು ಸಹ. ಗಿರೀಶ್ ಜತೆ ಮದುವೆ ಲಲಿತಾ ನಿರಾಕರಿಸಿದ ಕಾರಣ ಯಾರಿಗೂ ಗೊತ್ತಿಲ್ಲವಾದರೂ, ಶೇಖರ್‌ಗೆ ಗೊತ್ತು. ಆದರೂ ಆತ ಗೊಂದಲದಲ್ಲಿರುತ್ತಾನೆ. ಲಲಿತಾಳ ಕುಟುಂಬ 'ಬ್ರಾಹ್ಮೋ ಸಮಾಜ'ಕ್ಕೆ ಮತಾಂತರವಾಗಿರುವುದರಿಂದ ಮದುವೆಗೆ ತಾಯಿ ಒಪ್ಪುವುದಿಲ್ಲ. ಆತನೇ ಹಳೆಯ ಸಮಾಜದ ಕಟ್ಟುಪಾಡುಗಳು ಮತ್ತು ಪ್ರೇಮದ ನಡುವೆ ಒದ್ದಾಡುತ್ತಾನೆ.

ಬಾಲಿವುಡ್ 'ಪರಿಣೀತಾ'ದಲ್ಲಿ ಲಲಿತಾ ನಬೀನ್ ರಾಯ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಸಾಲಕ್ಕೆ ಮಾವ ಗಿರವಿ ಇಟ್ಟ ತನ್ನ ಮನೆ(ಹವೇಲಿ)ಯನ್ನು ಹೆರಿಟೇಜ್ ಹೋಟೇಲ್ ಮಾಡುವ ಪ್ರಾಜೆಕ್ಟ್ ತಿಳಿದು, ಅದನ್ನು ಉಳಿಸಿಕೊಳ್ಳಲು ಹೆಣಗಾಡುತ್ತಾಳೆ. ಇದನ್ನು ತಿಳಿದ ಗಿರೀಶ್ ಆ ಹಣ ಕೊಟ್ಟು ಲಲಿತಾಳ ಮನೆಯವರಿಗೆ ಪ್ರಿಯನಾಗುತ್ತಾನೆ. ನಬೀನ್ ರಾಯ್ ಇದರಿಂದ ಕಿಡಿಯಾಗಿ ಎರಡು ಮನೆಗಳ ನಡುವೆ ಎತ್ತರದ ಗೋಡೆ ಎಬ್ಬಿಸುತ್ತಾನೆ. ಗಿರೀಶ್-ಲಲಿತಾಳ ಮದುವೆ ಮತ್ತು ಸಾಲ ತೀರಿಸುವುದರ ಮಧ್ಯೆ ಸಂಬಂಧ ಕಲ್ಪಿಸಿ ಶೇಖರ್ ಮನ ಕೆಡಿಸಿ, ಬೇರೆ ಮದುವೇ ಒಪ್ಪಿಸುತ್ತಾನೆ. ಶರತ್‌ಚಂದ್ರರ 'ಪರಿಣೀತಾ'ದಲ್ಲಿ ಎರಡು ಮನೆಗಳ ನಡುವೆ ಗೋಡೆ ಏಳುವುದು ಲಲಿತಾಳ ಮಾವ ಗುರುಚರಣ್ ತನ್ನ ಬಡತನ - ಸಂಪ್ರದಾಯಗಳಿಂದ ರೋಸಿ. ಅದರಿಂದ ವಿಮುಕ್ತಿಯ ಹಾದಿಯಾಗಿ 'ಬ್ರಾಹ್ಮೋ ಸಮಾಜ' ಸ್ವೀಕರಿಸಿದಾಗ. ಕಾದಂಬರಿಯಲ್ಲಿ ಈ ಘಟನೆ ತೀವ್ರವಾಗಿ ಬದಲಾಗುತ್ತಿರುವ ಸಮಾಜ ಮತ್ತು ಸಾಮಾಜಿಕ ಕಟ್ಟುಪಾಡುಗಳ ನಡುವೆ ಸಂಘರ್ಷದ ಹಿನ್ನೆಲೆಯಾಗಿ ಕೇಂದ್ರ ಬಿಂದುವಾಗಿ ಬರುತ್ತದೆ. ಕೊನೆಯ 'ಕ್ಲೈಮಾಕ್ಸ್ ಸೀನ್'ನಲ್ಲಿ ಬಾಲಿವುಡ್ ಪರಿಣೀತಾದಲ್ಲಿ ಶೇಖರ್ ಮನಃ ಪರಿವರ್ತನೆಯಾಗಿ ಎಲ್ಲರೂ ಸೇರಿ ಗೋಡೆ ಒಡೆಯುವುದು ಒಳ್ಳೆಯ ನಾಟಕೀಯ ಕೊನೆಯಾಗಬಹುದು. ಆದರೆ ಶರತ್‌ಚಂದ್ರ ಪರಿಣೀತಾ ಸೆರೆಹಿಡಿಯುವ ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಮಾನವ ಸಂಬಂಧಗಳ ತಾಕಲಾಟಗಳ ಸಂಕೀರ್ಣತೆಗೆ ಆಘಾತ ಮಾಡುತ್ತದೆ.

ಹೊಸ ಬಾಲಿವುಡ್ ಫಾರ್ಮುಲಾ - ಕಾದಂಬರಿಗಳ ರಿ-ಮಿಕ್ಸ್

ಈ ಬದಲಾವಣೆಗಳು (ಕಾಲಾಂತರ ಸೇರಿದಂತೆ) ಯಾವುದೇ ರೀತಿಯಲ್ಲಿ ಪುನರ್‌ಸೃಷ್ಟಿ ಎನಿಸುವುದಿಲ್ಲ. ಬದಲಾಗಿ ಶರತ್‌ಚಂದ್ರರ ಕಥೆಯ ಮೂಲ ಹಂದರ ಬಳಸುವ, ಅದೂ ಶರತ್‌ಚಂದ್ರರ ಪ್ರಖ್ಯಾತಿಯ ಬಳಕೆ ಮಾಡುವ ಪ್ರಯತ್ನ ಮಾತ್ರ ಕಾಣುತ್ತದೆ. ಮಾನವ ಸಂಬಂಧಗಳ ಮತ್ತು ನಿರ್ದಿಷ್ಟ ಸಾಮಾಜಿಕ ಸಂದರ್ಭದಲ್ಲಿ ಅವುಗಳ ತಾಕಲಾಟಗಳಿಗೆ ಪ್ರದೀಪ್ ಸರ್ಕಾರ್‌ಗೆ ವ್ಯವಧಾನ ಇಲ್ಲ. ಪ್ರೇಕ್ಷಕರನ್ನು ಬಾಲಿವುಡ್‌ನ ಫಾರ್ಮುಲಾ 'ಪ್ರೇಮ ತ್ರಿಕೋನ'ದಿಂದ ತೀರಾ ದೂರ 'ಸಾಮಾಜಿಕ ನೈಜತೆ'ಗೆ ಒಯ್ಯಲು ಧೈರ್ಯವಿಲ್ಲ. ಆದರೆ ಶರತ್‌ಚಂದ್ರರ ಪ್ರಖ್ಯಾತಿ ಬಳಸಬೇಕು. ಆದ್ದರಿಂದ ಪರಿಣೀತಾದ ಬಾಲಿವುಡೀಕರಣ ನಡೆದಿದೆ. ಹೆಚ್ಚೆಂದರೆ ಅದು ರಿಮಿಕ್ಸ್ ಪರಿಣೀತಾ ಆಗಿದೆ.

ಹಳೆಯ ಪ್ರಸಿದ್ಧ ಕಾದಂಬರಿಗಳ ಈ ರೀತಿಯ ರಿ-ಮಿಕ್ಸ್ ಮತ್ತು ಬಾಲಿವುಡೀಕರಣ ಹೊಸ ಜಾಡು ಆದ ಹಾಗೆ ಕಾಣಿಸುತ್ತಿದೆ. 'ದೇವದಾಸ್', 'ಪರಿಣೀತಾ' ಎಲ್ಲಾ ಈ ಹಾದಿಯಲ್ಲಿ ಸಾಗಿವೆ. ಬಾಲಿವುಡ್‌ನ ಸವಕಲು ಫಾರ್ಮುಲಾ ಬಳಸಿ ಸ್ವಲ್ಪ ಜೀವ ತುಂಬುವ ಪ್ರಯತ್ನವಾಗಿ ಈ ಕಾದಂಬರಿಗಳನ್ನು ತೆಗೆದುಕೊಳ್ಳಲಾಗುತ್ತದೆ. ಆದರೆ ಅದರ ಮೂಲಸಾರವನ್ನು ತೆಗೆದು ಬಿಡಲಾಗುತ್ತದೆ. 'ಪರಿಣೀತಾ'ದ ಕಮರ್ಶಿಯಲ್ ಸಫಲತೆ ಇದಕ್ಕೆ ಕುಮ್ಮಕ್ಕು ಕೊಡಬಹುದು. ಇದು ಕಾದು ನೋಡಬೇಕಾದ 'ಟ್ರೆಂಡ್'.

- ಶರತ್‌ಚಂದ್ರ

ದೇವರ ಸ್ವಂತ ನಾಡಿನಲ್ಲಿ ಎಂಥಾ ಭೂತ ನೃತ್ಯ !!

ಪುಟ 5 ರಿಂದ

ನಡೆಯುತ್ತಿದ್ದ ವೃತ್ತಿ ಶಿಕ್ಷಣ ಕೌನ್ಸಿಲಿಂಗ್ ಕೇಂದ್ರಗಳ ಮುಂದೆ ಪ್ರತಿಭಟನೆ ನಡೆಸಿದರು. ತಿರುವನಂತಪುರ, ಕ್ಯಾಲಿಕಟ್, ಕಣ್ಣೂರು, ಕೊಟ್ಟಾಯಂ, ಎರ್ನಾಕುಲಂ, ವಯನಾಡು ಹೀಗೆ ಇಡೀ ಕೇರಳ ರಾಜ್ಯದಲ್ಲಿ ದಮನ ಕಾಂಡ ನಡೆದಿರುವುದು ನೋಡಿದರೆ ಸರ್ಕಾರದಿಂದ ದಬ್ಬಾಳಿಕೆಯ ಪೂರ್ವಯೋಜಿತ ಸಂಚು ನಡೆದಿರುವುದು ಯಾರಿಗಾದರೂ ತಿಳಿಯುತ್ತದೆ.

ಎಸ್ಸೆಫ್ಐನ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯೆ ಕಾಂ|| ಸಿಂಧು ಜಾಯ್‌ರವರಿಗೆ ತೀವ್ರವಾದ ಪೆಟ್ಟುಬಿದ್ದಿದ್ದು ಆಸ್ಪತ್ರೆ ಸೇರಿದ್ದಾರೆ. ಅವರ ಕಾಲಿಗೆ ಸಸ್ತ್ರ ಚಿಕಿತ್ಸೆ ಮಾಡಬೇಕಾಗಿ ಬಂದಿದೆ. ಇವರೊಂದಿಗೆ ಇತರ 6 ಜನ ವಿದ್ಯಾರ್ಥಿನಿಯರೂ ಆಸ್ಪತ್ರೆ ಸೇರಿದ್ದಾರೆ. ನೂರಾರು ಮಂದಿ ಗಾಯಗೊಂಡಿದ್ದಾರೆ. ಅವರಲ್ಲಿ ಐವರ ಪರಿಸ್ಥಿತಿ ಗಂಭೀರವಾಗಿದೆ. ತಿರುವಂತಪುರದ ಎಸ್ಸೆಫೈ ಜಿಲ್ಲಾ ಸಮಿತಿ ಸದಸ್ಯರಾದ ಕಾಂ|| ನಮಿತಾ, ಕಾಂ|| ರಮ್ಯ ಗಂಭೀರವಾಗಿ ಗಾಯಗೊಂಡಿದ್ದಾರೆ. ಅಲಪ್ಪುರ ಜಿಲ್ಲಾ ಅಧ್ಯಕ್ಷರಾದ ಅಜಿರಾಜ್, ಉಪಾಧ್ಯಕ್ಷ ಮಾಥ್ಯೂ ಅವರಿಗೂ ಗಾಯಗಳಾಗಿವೆ. ರಾಜ್ಯಾದ್ಯಂತ ನೂರಾರು ಎಸ್ಸೆಫೈ-ಡಿವೈಎಫ್‌ಐ ಕಾರ್ಯಕರ್ತರನ್ನು ಬಂದಿಸಿ, ಸುಳ್ಳು ಮೊಕದ್ದಮೆ ಕೊಡಲಾಗಿದೆ.

ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ ಪ್ರದೀಪರ ಮೇಲೆ ಪೊಲೀಸರು ತೀವ್ರವಾದ ಹಲ್ಲೆ ಮಾಡಿದ್ದಾರೆ. ಎಸ್ಸೆಫೈ ಕೇರಳ ರಾಜ್ಯ ಅಧ್ಯಕ್ಷ ಕಾಂ.ಬಿಜು, ಕಾರ್ಯದರ್ಶಿ ಕಾಂ. ರಾಜೇಶ್‌ರವರಿಗೂ ಗಾಯಗಳಾಗಿವೆ. ವಿದ್ಯಾರ್ಥಿ ಸಮುದಾಯವನ್ನು ಬಡಿದು ಹಾಕಲು ಯೂನಿವರ್ಸಿಟಿ ಕಾಲೇಜು ಆವರಣಕ್ಕೆ ನುಗ್ಗುತ್ತಿದ್ದ ಪೊಲೀಸ್ ಪಡೆಯನ್ನು ಡಿವೈಎಫ್‌ಐ ಅಖಿಲ ಭಾರತ ಅಧ್ಯಕ್ಷರಾದ ಕಾಂ|| ಕೆ.ಎನ್.ಬಾಲ ಗೋಪಾಲ್ ಮತ್ತು ಹಲವು ಶಾಸಕರ ತಂಡ ತಡೆ ಗೋಡೆಯಂತೆ ನಿಂತು ಅಡ್ಡಗಟ್ಟದಿದ್ದರೆ ವಿದ್ಯಾರ್ಥಿಗಳ ಮೇಲೆ ಮತ್ತೂ ದೌರ್ಜನ್ಯಗಳು ನಡೆಯುತ್ತಿತ್ತೆಂದು ಹೇಳಲಾಗಿದೆ. ಈ ಕಾಲೇಜು ಗೇಟನ್ನು ಪೊಲೀಸ್ ಪಡೆಯು ಮುರಿದಿಕ್ಕಿದೆ.

ಬೆಂಗಳೂರಿನಲ್ಲ ಪ್ರತಿಭಟನೆ - ಉಮ್ಮನ್ ಚಾಂಡಿ ಭೂತದಹನ

ಕೇರಳ ಸರ್ಕಾರ ಮತ್ತು ಪೊಲೀಸರ ಈ ದೌರ್ಜನ್ಯದ ವಿರುದ್ಧ ದೇಶಾದ್ಯಂತ ವಿದ್ಯಾರ್ಥಿ-ಯುವಜನರ ಆಕ್ರೋಶ ವ್ಯಕ್ತವಾಗಿದೆ. ಬೆಂಗಳೂರಿನಲ್ಲಿ ಜುಲೈ 5 ರಂದು ಬೆಳಿಗ್ಗೆ ಎಸ್ಸೆಫೈ-ಡಿವೈಎಫ್‌ಐ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ಹಾಗೂ ಊಮ್ಮನ್ ಚಾಂಡಿ ಭೂತದಹನ ನಡೆಯಿತು.

ದಬ್ಬಾಳಿಕೆಯಿಂದ ವಿದ್ಯಾರ್ಥಿ ಚಳುವಳಿಯನ್ನು ಹತ್ತಿಕ್ಕಲು ಸಾಧ್ಯವಿಲ್ಲ, ಶಿಕ್ಷಣ ವಿರೋಧಿ - ಊಮ್ಮನ್ ಚಾಂಡಿ ಸರ್ಕಾರಕ್ಕೆ ಧಿಕ್ಕಾರ, ಕೇಂದ್ರೀಯ ಶಾಸನ ಜಾರಿಗೆ ತನ್ನ ಶಿಕ್ಷಣದ ವ್ಯಾಪಾರೀಕರಣ - ಖಾಸಗೀಕರಣಕ್ಕೆ ಧಿಕ್ಕಾರ, ಇತ್ಯಾದಿ ಘೋಷಣೆ ಹಾಕಿದ ಪ್ರತಿಭಟನೆಕಾರರು ಊಮ್ಮನ್ ಚಾಂಡಿ ಭೂತಕ್ಕೆ ಬೆಂಕಿ ಇಟ್ಟು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಎಸ್ಸೆಫೈ ರಾಜ್ಯ ಕಾರ್ಯದರ್ಶಿ ಎಚ್.ಆರ್.ನವೀನ್ ಕುಮಾರ್, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಎಸ್ಸೆಫೈ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ಆರ್.ರಾಮಕೃಷ್ಣ, ಡಿವೈಎಫ್‌ಐ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಲಕ್ಷ್ಮಣಕುಮಾರ್ ಮಾತನಾಡಿದರು. ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಕೆ.ಎನ್. ಉಮೇಶ್, ಎಸ್ಸೆಫೈ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಎಸ್.ಲಕ್ಷ್ಮಿ ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಧನರಾಜ್, ಎಸ್ಸೆಫೈ ಜಿಲ್ಲಾ ಅಧ್ಯಕ್ಷರಾದ ಕೆ.ನಾಗರಾಜ್, ಕಾರ್ಯದರ್ಶಿ ಬಿ.ಎನ್. ಮಂಜುನಾಥ್, ಉಪಾಧ್ಯಕ್ಷರಾದ ಯು.ಎಸ್. ಪ್ರಸಾದ್ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಪವಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH